ಗೋಕಾಕ್ ಚಳವಳಿ : ಡಾ. ರಾಜ್‌ಕುಮಾರ್ ಅವರ ಪಾತ್ರವನ್ನು ಕುರಿತ ವಿಶ್ಲೇಷಣೆ

ಚರಿತ್ರೆ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭ - ೦೮

ಗೋಕಾಕ್ ಚಳವಳಿ : ಡಾ. ರಾಜ್‌ಕುಮಾರ್ ಅವರ ಪಾತ್ರವನ್ನು ಕುರಿತ ವಿಶ್ಲೇಷಣೆ

ಚರಿತ್ರೆ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ

ಸಂ : ಎಂ. ನಾರಾಯಣಸ್ವಾಮಿ

ಮಾ : ವಿ.ಆರ್. ಗೋವಿಂದರಾಜು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭ -೨೦೦೮



ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಮಹತ್ವ

ಉದ್ದೇಶ - ವ್ಯಾಪ್ತಿ - ಮಿತಿ - ವಿಧಿವಿಧಾನ - ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಮಹತ್ವ - ಉದ್ದೇಶ - ವ್ಯಾಪ್ತಿ - ಮಿತಿ - ವಿಧಿವಿಧಾನ - ಸ್ವರೂಪ

ಅಧ್ಯಯನ ಮಹತ್ವ

ಪ್ರಸ್ತುತ ಅಧ್ಯಯನವು ಈ ನಾಡಿನ ಪ್ರತಿಭಾನ್ವಿತ ವ್ಯಕ್ತಿಗಳಲ್ಲಿ ಒಬ್ಬರಾದ ಮೇರುನಟ ಡಾ. ರಾಜಕುಮಾರ್ ಅವರು ಗೋಕಾಕ್ ಚಳವಳಿಯಲ್ಲಿ ವಹಿಸಿದ್ದ ಪಾತ್ರವನ್ನು ಕುರಿತು ವಿಶ್ಲೇಷಣೆ ನಡೆಸುವುದಾಗಿರುತ್ತದೆ. ಡಾ.ರಾಜ್‌ಕುಮಾರ್ ಅವರದ್ದು ಕನ್ನಡ ಚಲನಚಿತ್ರರಂಗ ಹಾಗೂ ಗೋಕಾಕ್ ಚಳವಳಿಯಲ್ಲಿ ಪ್ರತ್ಯೇಕವಾದ ಅಧ್ಯಾಯ. ಈ ಎರಡು ರಂಗಗಳಲ್ಲಿ ವಿಶಾಲವಾಗಿ ಅವರಿಸಿಕೊಂಡಿರುವ ರಾಜ್‌ಕುಮಾರ್ ಅವರು ಕನ್ನಡ ಚಲನಚಿತ್ರರಂಗದ ವರ್ಣರಂಜಿತ ನಾಯಕನಟರೂ ಹೌದು. ಭಾರತದ ಶ್ರೇಣಿಕೃತ ಜಾತಿ ವ್ಯವಸ್ಥೆಯಲ್ಲಿ ತೀರಾ ತಳಸಮುದಾಯದಿಂದ ಬಂದ ರಾಜಕುಮಾರ್ ಅವರು ಏರಿದ ಎತ್ತರ ಅಗಾಧವಾದುದ್ದು. ಕನ್ನಡ ಚಿತ್ರರಂಗದಲ್ಲಿ ನಟಿಸುವುದೊಂದ್ದನ್ನೇ ತಮ್ಮ ಜೀವಮಾನದ ಗುರಿಯಾಗಿರಿಸಿಕೊಂಡಿದ್ದ ಇವರು ಮನಸ್ಸು ಮಾಡಿದ್ದಿದ್ದರೆ ರಾಜ್ಯದಲ್ಲಿ ಏನೆಲ್ಲ ಆಗಬಹುದಿತ್ತು. ಆದರೆ ತಮ್ಮ ನಟನಾ ವೃತ್ತಿ ಹೊರತುಪಡಿಸಿ ಬೇರೆಡೆಗೆ ಮನಸ್ಸನ್ನು ಹೊರಳಿಸದೆ ಕಲಾಸೇವೆಗೆ ಮಾತ್ರ ಸೀಮಿತರಾಗಿ ನಿಜ ಜೀವನದಲ್ಲಿ ಮುತ್ತುರಾಜ್ ಆಗಿಯೇ ಉಳಿದ ಹಿರಿಮೆ ಅವರದ್ದು.

ತಮ್ಮ ಸಾಂಸ್ಕೃತಿಕ ವ್ಯಕ್ತಿತ್ವದಿಂದಾಗಿ ಪರಿಣಾಮ ಬೀರಿದವರಲ್ಲಿ ಎರಡು ವ್ಯಕ್ತಿತ್ವಗಳು ಪ್ರಮುಖವಾಗಿವೆ. ಅವರುಗಳಲ್ಲಿ ಒಬ್ಬರು ಕುವೆಂಪು, ಮತ್ತೊಬ್ಬರು ರಾಜಕುಮಾರ್. ಇಬ್ಬರ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾದರೂ, ಸಿನಿಮಾಗಳ ಮೂಲಕ ಕನ್ನಡ ಪರವಾದ ಆಂದೋಲನಗಳಿಗೆ ಬಲವನ್ನು ತಂದವರು ರಾಜ್‌ಕುಮಾರ್. 'ಕರ್ನಾಟಕದ ಸಂಸ್ಕೃತಿ' ಎಂದೇ ಕರೆದಿರುವ ಕುವೆಂಪು ಅವರ ಮಾತಿಗೆ ಜೀವಂತ ನಿದರ್ಶನವಾಗಿ ಬಾಳಿದವರು ಡಾ.ರಾಜ್‌ಕುಮಾರ್ ಅವರು. ಇವರು ತಮ್ಮ ವೃತ್ತಿಜೀವನದ ನಡುವೆ ಗೋಕಾಕ್ ಚಳುವಳಿಯಂಥ ಜನಪರ ಚಳವಳಿಗಳಲ್ಲಿ ತೊಡಗಿಕೊಂಡು ತಮ್ಮ ಮತ್ತೊಂದು ಮುಖವನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಅವರು ಗೋಕಾಕ್ ಚಳವಳಿಯನ್ನು ಮುನ್ನೆಡೆಸಿದ ರೀತಿ ಕನ್ನಡಪರ ಹೋರಾಟಗಾರರಲ್ಲಿ ರೋಮಾಂಚನವನ್ನುಂಟುಮಾಡಿತ್ತು. ಈ ನಾಡಿಗೆ ಭರವಸೆಯ ಬೆಳಕಾಗಿ, ಚಳವಳಿಯನ್ನು ರೂಪಿಸಬಲ್ಲ ಶಕ್ತಿಯಾಗಿ ಕನ್ನಡ ಭಾಷೆಯನ್ನು ಪ್ರಶ್ನಿಸುವವರ ಭಯವಾಗಿ, ನೆಲ-ಜಲ-ಭಾಷೆಗೆ ಗಂಡಾಂತರ ಒದಗಿದಾಗ ಹೋರಾಡಬಲ್ಲ

ಗಾಂಭೀರ್ಯತೆಯನ್ನು ಹೊಂದಿದ್ದ ರಾಜಕುಮಾರ್ ಅವರು ಅದನ್ನು ಗೋಕಾಕ್ ಚಳವಳಿಯಲ್ಲಿ ಸಾಬೀತು ಮಾಡಿದರು. ಚಳವಳಿಯಲ್ಲಿ ಸಾಧಿಸಲಾಗದಿದ್ದುದನ್ನು ಸಾಧಿಸಿ ತೋರಿಸಿದರು. "ಕನ್ನಡಕ್ಕೆ ಕುತ್ತು ಬಂದಾಗ ಬೀದಿಗಿಳಿದು ಹೋರಾಡುತ್ತೇವೆ ". ಎನ್ನುವ ಅವರ ಸಿನಿಮಾ ಸಂಭಾಷಣೆಗಳು ಸಿನಿಮಾಗಳಿಗೆ ಮಾತ್ರವೇ ಸೀಮಿತಗೊಳ್ಳಲಿಲ್ಲ. ಚಳವಳಿಯಲ್ಲಿ ಪ್ರಧಾನ ಭೂಮಿಕೆ ವಹಿಸಿಕೊಳ್ಳಲು ಆಹ್ವಾನ ಬಂದಾಗ ಅದನ್ನು ಕನ್ನಡ ತಾಯಿಯ ಸೇವೆಗೆ ಬಂದಕರೆ ಎಂದೇ ಪರಿಭಾವಿಸಿದ್ದು ಗಮನಾರ್ಹ. ಇಂಥ ನಿಲುವುಗಳು ರಾಜ್ಯ ರಾಜಕಾರಣ ಹಾಗೂ ಸಾಮಾಜಿಕ ವಲಯಗಳಲ್ಲಿ ತೀವ್ರ ಸಂಚಲವನ್ನೇ ಉಂಟುಮಾಡಿತು. ಪರಿಣಾಮವಾಗಿ ಕನ್ನಡ ಚಳವಳಿಗಾರರೆಲ್ಲರೂ ಇವರ ನೇತೃತ್ವದಲ್ಲಿ ಒಂದುಗೂಡುವಂತಾಯಿತು. ನಾಡಿನ ಹಿರಿಯ ಸಾಹಿತಿಗಳಾದ ಚಂದ್ರಶೇಖರ ಪಾಟೀಲ, ಪಾಟೀಲಪುಟ್ಟಪ್ಪ, ದೇಜಗೌ, ಚಿದಾನಂದಮೂರ್ತಿ, ಜಿ. ನಾರಾಯಣಕುಮಾರ್. ಬರಗೂರುರಾಮಚಂದ್ರಪ್ಪ. ಜಿ.ಎಸ್. ಶಿವರುದ್ರಪ್ಪ, ನಿಸ್ಸಾರ್ ಅಹ್ಮದ್, ಲಂಕೇಶ್, ಶಂಭಾಜೋಷಿ, ಬಸವಾರಾಜ ಕಟ್ಟೀಮನಿ ಮುಂತಾದ ನೂರಾರು ಸಾಹಿತಿ-ಕಲಾವಿದರು ರಾಜ್‌ಕುಮಾರ್ ಅವರಿಗೆ ಬೆಂಬಲ ನೀಡಿದರು. ಇಡೀ ನಾಡೇ ಇವರ ಬೆಂಬಲಕ್ಕೆ ನಿಲ್ಲುವಂತಾಯಿತು. ಸಣ್ಣದಾಗಿ ಆರಂಭವಾದ ಕನ್ನಡದ ಕಿಡಿ ರಾಜ್‌ಕುಮಾರ್ ಅವರ ಪ್ರವೇಶದಿಂದಾಗಿ ಜ್ವಾಲಾಮುಖಿಯಾಗಿ ರಾಜ್ಯಾದ್ಯಂತ ಪಸರಿಸಿತು.

ರಾಜಕುಮಾರ್ ಅವರು ಚಳವಳಿಯಲ್ಲಿ "ನಾನಿರುವುದೇ ನಿಮಗಾಗಿ, ನಾಡಿರುವುದೇ ನಮಗಾಗಿ" ಎನ್ನುವ ಹಾಡಿನ ಮೂಲಕ ಅಭಿಮಾನಿಗಳಲ್ಲಿ ಕನ್ನಡ ಸ್ವಾಭಿಮಾನದ ಬೀಜವನ್ನು ಬಿತ್ತಿಬಿಟ್ಟರು. ಕರ್ನಾಟಕದಲ್ಲಿ 'ಚಳವಳಿಗಳ ತಾಯಿಯಾಗಿ' ಗುರುತಿಸಿಕೊಂಡಿರುವ ಈ ಚಳವಳಿ ಸುಮಾರು ನಾಲ್ಕು ತಿಂಗಳುಗಳ ಕಾಲ ಜರುಗಿತ್ತು. ರೈತ ಚಳವಳಿ, ದಲಿತ ಚಳವಳಿಗಳಿಗಿಂತ ಗೋಕಾಕ್ ಚಳವಳಿ ಕರ್ನಾಟಕದ ಇತಿಹಾಸದಲ್ಲಿ ತುಂಬಾ ಪ್ರಭಾವಿ ಚಳವಳಿಯಾಗಿ ದಾಖಲಾಗಿಬಿಟ್ಟಿತು. ಇದನ್ನು ಚಳವಳಿ ಎನ್ನುವುದಕ್ಕಿಂತಲೂ ಜನಾಂದೋಲನವೆಂದರೆ ಹೆಚ್ಚು ಅರ್ಥಪೂರ್ಣವಾದೀತು. ಏಕೆಂದರೆ ಈ ಚಳವಳಿಯೂ ನಾಡಿನ ಸಾಹಿತಿ-ಕಲಾವಿದರು, ಕನ್ನಡಪರ ಸಂಘಟನೆಗಳಿಂದ ಆರಂಭಗೊಂಡರೂ ರಾಜ್‌ಕುಮಾರ್ ಅವರ ಪ್ರವೇಶದ ನಂತರವೇ ಜನಸಾಮಾನ್ಯರ ಧ್ವನಿಯಾಗಿ ಬದಲಾದದ್ದು. ನಾಡಿನ ಜನತೆಯು ಸಾಮೂಹಿಕವಾಗಿ ಭಾಗವಹಿಸಿದುರಿಂದ ಮನೆ ಮನಗಳ ಧ್ವನಿಯಾಗಿ ಹೊರಹೊಮ್ಮಿತು. ಕೊನೆಯವರೆಗೂ ನಾಡು ನುಡಿಯ ವಿಷಯದಲ್ಲಿ ತಮ್ಮ ಬದ್ಧತೆಯೊಂದಿಗೆ ಅನುಕ್ಷಣವು ರಾಜಿ ಮಾಡಿಕೊಳ್ಳದ ರಾಜ್‌ಕುಮಾರ್ ಅವರು ಚಿತ್ರರಂಗಕ್ಕೆ ಮಾತ್ರ ಸೀಮಿತರಾಗದೆ ಕರ್ನಾಟಕದ ಅನಭಿಷಕ್ತ ದೊರೆಯಾಗಿ ಕನ್ನಡ ಭಾಷೆ, ಸಂಸ್ಕೃತಿಯ ಪ್ರತೀಕವಾಗಿ ರೂಪುಗೊಂಡರು. ಇದರಿಂದ ಆಳುವ ಸರ್ಕಾರವೇ ಉರುಳಿ ಚಳವಳಿಯು ಯಶಸ್ವಿಯಾಗಿ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯುವಂತಾಯಿತು. ಗೋಕಾಕ್ ಚಳವಳಿಯನಂತರ ರಾಜ್ಯದಲ್ಲಿ ನಡೆದ ಇನ್ನಾವುದೇ ಚಳವಳಿಯು ಇಷ್ಟೊಂದು ಪ್ರಮಾಣದಲ್ಲಿ ಸಂಚಲವನ್ನುಂಟುಮಾಡಲಿಲ್ಲ. ಇವರು ತಮಗೆ ದೊರೆತ ಈ ಅವಕಾಶವನ್ನು ಸೂಕ್ತವಾಗಿಯೇ ಬಳಸಿಕೊಂಡು ಯಶಸ್ವಿ ನಾಯಕರಾದರು.

ಈ ಅವಧಿಯಲ್ಲಿ ಅವರು ತಳೆದ ನಿಲುವು, ವಹಿಸಿದ ಪಾತ್ರ, ಆಡಿದಮಾತು, ಅತ್ಯಂತ ಮಹತ್ವದು. ಚಳವಳಿಯ ನೇತೃತ್ವದಿಂದ ಅವರಿಗೊಂದು ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣವಾಯಿತಲ್ಲದೆ, ಈ ಘಟನೆದಿಂದ ಮನೆ ಮನೆಗಳ ಬಂಧುವಾಗಿ ಕನ್ನಡ ನಾಡಿನ ಆತಂಕದ ಸಮಯದಲ್ಲಿ ಸಹಾಯಕ್ಕೆ ಧಾವಿಸುವ ಬಂಧುವಾಗಿ ರೂಪುಗೊಂಡಿದ್ದರಿಂದ ಚಳವಳಿಯ ಬಹುಪಾಲು ಯಶಸ್ಸು ರಾಜಕುಮಾರ್ ಅವರಿಗೆ ಸಲ್ಲುವಂತೆ ಆಯಿತು.

ರಾಜಕುಮಾರು ಅವರು ಇಂದು ಪಂಚಭೂತಗಳಲ್ಲಿ ಲೀನವಾಗಿ ಹೋಗಿದ್ದಾರೆ. ಅವರ ದೇಹಕ್ಕೆ ಆದಂಥ ಸಾವು ಅವರನ್ನು ಭೌತಿಕವಾಗಿ ಮರೆಮಾಡಿದ್ದರೂ ಸಹ ಅವರ ಸಾಧನೆ ಮತ್ತು ಶ್ರೇಷ್ಟತೆಗಳಿಂದ ಜೀವಂತವಾಗಿದ್ದಾರೆ. ಅವರದು ದೈತ್ಯ ಸಂಘಟನಾ ಶಕ್ತಿ, ಸಿನಿಮಾ ರಂಗದಿಂದ ಬಂದ ಜನಪ್ರಿಯತೆಯನ್ನು ನಾಡು ನುಡಿಗಾಗಿ ಬಳಸಿದ ಉದಾಹರಣೆ ಭಾರತ ದೇಶದಲ್ಲಿಯೇ ಮೊದಲು. ಈ ದಿಸೆಯಲ್ಲಿ ಅವರ ಚಿಂತನೆಗಳನ್ನು ಪ್ರಸ್ತುತ ಸಂದರ್ಭದಲ್ಲಿಟ್ಟು, ಪರಿಶೀಲಿಸುವ, ವಿಶ್ಲೇಷಿಸುವ ಹಾಗು ಅಧ್ಯಯನಕ್ಕೆ ಒಳಪಡಿಸುವ ಜರೂರು ಇದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಒಂದು ಕಿರುಪ್ರಯತ್ನ.

ಅಧ್ಯಯನದ ಉದ್ದೇಶ

ಭಾಷಿಕ ಚಳವಳಿಯ ಕೇಂದ್ರಬಿಂದುವಾದ ಡಾ.ರಾಜಕುಮಾರ್ ಅವರು ದೈಹಿಕವಾಗಿ ಇಂದು ನಮ್ಮೊಂದಿಗೆ ಇಲ್ಲವಾದರೂ ಅವರು ಹುಟ್ಟು ಹಾಕಿದ ಕನ್ನಡಪರ ಭಾಷಾಭಿಮಾನ ಮುಂದೆ ನಡೆದ ಹಲವು ಚಳವಳಿಗಳ ಮೇಲೆ ಗಾಢವಾದ ಪರಿಣಾಮಗಳನ್ನುಂಟುಮಾಡಿದೆ. ಆದ್ದರಿಂದ 'ಗೋಕಾಕ್ ಚಳವಳಿಯೆಂದರೆ ರಾಜಕುಮಾರ್ ರಾಜಕುಮಾರ್ ಎಂದರೆ ಗೋಕಾಕ್ ಚಳವಳಿ' ಎನ್ನುವಂಥ ಅನನ್ಯತೆ ಉಳಿದು ಬಂದಿದೆ. ಈ ಚಳವಳಿಗೂ ಅವರಿಗೂ ಉಳಿದು ಬಂದಿರುವ ಅವಿನಾಭಾವ ಸಂಬಂಧ ಆ ಸ್ವರೂಪದ್ದು.

ಗೋಕಾಕ್ ಚಳವಳಿಯು ಇತಿಹಾಸದ ಪುಟ ಸೇರಿ ಇಂದಿಗೆ ಕಾಲುಶತಮಾನ ಉರುಳಿ ಹೋಗಿದ್ದು, ಈ ಚಳವಳಿಯ ಜೀವಂತ ಸಾಕ್ಷಿಯಾಗಿದ್ದ ರಾಜಕುಮಾರ್ ಅವರು ಚಳವಳಿಗೆ ಇಪ್ಪತ್ತೈದು ವರುಷಗಳು ತುಂಬಿದ ಹೊತ್ತಿನಲ್ಲಿಯೇ ಕನ್ನಡಿಗರನ್ನು ಅಗಲಿ ಹೋಗಿದ್ದಾರೆ. ಈ ಚಳವಳಿಯನ್ನು ರಾಜಕುಮಾರ್ ಅವರ ಮೂಲಕ ಅಮೂಲಾಗ್ರವಾಗಿ ಗ್ರಹಿಸುವಂಥ ಕೆಲಸಗಳು ನಡೆದಿರುವುದು ಬಹಳ ವಿರಳ. ಚಳವಳಿಯನ್ನು ಬೇರೆ ಬೇರೆ ರೂಪಗಳಲ್ಲಿ, ಸಾಹಿತಿ ಬರಹಗಾರರ ದೃಷ್ಠಿಯಲ್ಲಿ ಈಗಾಗಲೇ ಗ್ರಹಿಸಲಾಗಿದೆ. ಆದರೆ ರಾಜ್‌ಕುಮಾರ್ ಅವರ ಪಾತ್ರದ ಹಿನ್ನೆಲೆಯಲ್ಲಿ ಚಳವಳಿಯನ್ನು ನೋಡುವ ಪ್ರಯತ್ನಗಳು ನಡೆದಿರುವುದು ತೀರಕಡಿಮೆ. ಅಂಥ ಕೊರತೆಯನ್ನು ನೀಗಿಸಲು ರಾಜಕುಮಾರ್ ಅವರನ್ನು ಪ್ರಸ್ತುತ ಅಧ್ಯಯನದ ಕೇಂದ್ರ ಬಿಂದುವಾಗಿರಿಸಿಕೊಂಡು, ಅವರ ಸಾಧನೆ, ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳಿಗೆ ನೀಡಿರುವ ಕೊಡುಗೆಗಳ ಹಿನ್ನೆಲೆಯಲ್ಲಿ ವಸ್ತುನಿಷ್ಟವಾಗಿ ಅಧ್ಯಯನಕ್ಕೆ ಒಳಪಡಿಸುವ ಆಶಯ ಇಲ್ಲಿನದು. ಈ ಚಳವಳಿಯ ಬಗೆಗೆ ಸ್ಥೂಲವಾಗಿ, ವಿವರವಾಗಿ ಪುಸ್ತಕಗಳು ವಿಮರ್ಶಾತ್ಮಕ ಲೇಖನಗಳು, ಚರ್ಚೆಗಳು ನಡೆದಿವೆ. ಆದರೆ ಗೋಕಾಕ್ ಚಳವಳಿ ಮತ್ತು ರಾಜಕುಮಾರ್ ಅವರ ಈ ಎರಡು ನೆಲೆಗಳನ್ನು ಒಟ್ಟಿಗೆ ಸಮೀಕರಿಸಿ ನೋಡುವ, ಪರಿಶೀಲಿಸುವ, ಕೆಲಸ ನಡೆಯದೇ ಇರುವುದರಿಂದ ಅಂಥ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ರಾಜ್‌ಕುಮಾರ್ ಅವರು ಒಂದು ಚಳವಳಿಯ ಮುಂಚೂಣಿಯಲ್ಲಿದ್ದರೂ ಸಹ ಅದರ ಇತಿಮಿತಿಗಳನ್ನು ಚೆನ್ನಾಗಿ ಅರಿತ್ತಿದ್ದರು. ಈ ದೃಷ್ಟಿಯಿಂದಲು ಚಳವಳಿ ಹಾಗೂ ಹೋರಾಟಗಳ ಮಧ್ಯೆ ಅವರನ್ನು ಕೇಂದ್ರಿಕರಿಸಿ ಚರ್ಚಿಸಲು ಸಾಧ್ಯವಿದೆ. ರಾಜಕುಮಾರ್ ಅವರು ಒಬ್ಬ ಚರಿತ್ರೆಯ ದಾಖಲಾತಿಗೆ ಹೇಳಿ ಮಾಡಿಸಿದಂಥಹ ವ್ಯಕ್ತಿತ್ವ. ದುರಂತವೆಂದರೆ ಅವರ ಬಗ್ಗೆ ಉತ್ತಮವಾದ ಜೀವನ ಚರಿತ್ರೆ ಕೊನೆಯವರೆಗೂ ಬರಲಿಲ್ಲ. ಅದರಲ್ಲಿಯೂ ಗೋಕಾಕ್ ಚಳವಳಿಯಂತಹ ಕನ್ನಡದ ಚೈತ್ರಯಾತ್ರೆಯಲ್ಲಿ ಅವರ ಪಾತ್ರವನ್ನು ದಾಖಲು ಮಾಡುವಂಥ ಪ್ರಯತ್ನಗಳು ಸಹ ನಡೆಯದೇ ಹೋದುದು ಮತ್ತೊಂದು ದುರಂತ. ಇಂಥ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ

ಚಳವಳಿಯ ಮೂಲಕ ಅವರ ಪಾತ್ರವನ್ನು ಸಾಧ್ಯವಾದಷ್ಟು ಮಟ್ಟಿಗೆ ವಿಶ್ಲೇಷಿಸುವ ಪ್ರಯತ್ನವನ್ನು ವಸ್ತುನಿಷ್ಠವಾಗಿ ಮಾಡುವ ಆಶಯ ಇಲ್ಲಿನದು.

'ಎನಗಿಂತ ಕಿರಿಯರಿಲ್ಲ' ಎಂಬ ಭಾವದಿಂದಲೇ ಕೊನೆಯವರೆಗೂ ಕಿರಿಯರಾಗಿ ಬದುಕಿ ಬಾಳಿದ ಅವರ ಪಾತ್ರ ನಿಜಕ್ಕೂ ಅಧ್ಯಯನಕ್ಕೆ ಯೋಗ್ಯವಾದುದು. ಇವರು ಕನ್ನಡ ನಾಡಿನಲ್ಲಿಯೇ ಹುಟ್ಟಿ, ಕನ್ನಡ ನಾಡಿನಲ್ಲಿಯೇ ಎಲ್ಲಾ ಪಡೆದು, ನಾಡಿಗಾಗಿ ಸಾಧಿಸಿ ತೋರಿಸಿದ ವ್ಯಕ್ತಿತ್ವ ಅವರ ಜೀವನ ಸಾಧನೆಯೆ ಒಂದು ವಿಶ್ವವಿದ್ಯಾಲಯ.

ರಾಜ್ಯದಲ್ಲಿ ಪ್ರತಿಭಟನಾ ಸಿದ್ಧಾಂತ ಹಿನ್ನೆಲೆಯಲ್ಲಿ ಭಾಷಾ ಹೋರಾಟ ತೀವ್ರಗೊಂಡ ಹಿನ್ನೆಲೆಯಿಂದ ನೋಡುವುದಾದರೆ ಸಂಸ್ಕೃತ ಭಾಷಾ ವ್ಯಾಮೋಹದಿಂದಾಗಿ ಕನ್ನಡದ ಮಕ್ಕಳಿಗೆ ಶಿಕ್ಷಣದಲ್ಲಿ ಸರಿಯಾದ ಪ್ರಾತಿನಿಧ್ಯ ಇಲ್ಲದ ಸಮಯದಲ್ಲಿ ಚಳವಳಿಗೆ ರಾಜ್‌ಕುಮಾರ್ ಅವರ ಪ್ರವೇಶ ಇಲ್ಲಿ ಪ್ರಧಾನವಾಗುತ್ತದೆ. ಸಂಘಟನಾತ್ಮಕ ಶಕ್ತಿಯನ್ನು ಪಡೆದುಕೊಂಡ ಈ ಚಳವಳಿಯು ಶಿಕ್ಷಣದ ಸ್ವರೂಪವನ್ನು ಬದಲಿಸಲು ಪ್ರಯತ್ನಿಸಿ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಲು ಕಾರಣವಾಯಿತು. ಅವರು ತಮ್ಮ ಸಂಗಡ ಹಿರಿಯ ಕಿರಿಯ ಸಾಹಿತಿ -ಕಲಾವಿದರು ಚಿಂತಕರೊಂದಿಗೆ ಚಳವಳಿಯ ಯಶಸ್ಸಿಗಾಗಿ ಶ್ರಮಿಸಿದರು. ಈ ಸಮಯದಲ್ಲಿ ಅವರು ನಾಡಿನ ಮೇಲೆ ಬೀರಿದ ಪ್ರಭಾವ ಪಾತ್ರ, ಚಿಂತಿಸಿದ ರೀತಿ, ಹೋರಾಟವನ್ನು ಮನ್ನಡೆಸಿದ ಬಗೆ, ನಾಯಕತ್ವದ ಗುಣ ಪ್ರಸ್ತುತ ಕನ್ನಡ ಪರ ಹೋರಾಟಗಾರರಿಗೆ ಮಾದರಿ. ಏಕೆಂದರೆ ಹಿರಿಯ ಸಾಹಿತಿ ಬುದ್ಧಿಜೀವಿಗಳು ತುಂಬಿದ್ದ ಚಳವಳಿ ರಾಜ್‌ಕುಮಾರ್ ಅವರ ಮುಂದಾಳತ್ವದಲ್ಲಿ ಜನಸಾಮಾನ್ಯರೊಂದಿಗೆ ಅಸಾಧ್ಯವಾದುದ್ದನ್ನು ಸಾಧಿಸಿತು. ಇದು ಯಾವ ನೆಲೆಗಟ್ಟಿನ ಮೇಲೆ ಸಾಧ್ಯವಾಯಿತು, ಅಂಥ ಪ್ರೇರಣಾಶಕ್ತಿ ರಾಜ್‌ಕುಮಾರ್ ಅವರಲ್ಲಿತ್ತೆ, ಇವರು ಚಳವಳಿಯ ಮುಖ್ಯವಾಹಿನಿಗೆ ಬಂದ ನಂತರ ಚಳವಳಿ ಯಾವ ರೀತಿ ಬಹುಮುಖಿ ನೆಲೆಗಳನ್ನು ಹೊಂದಿತು, ಅವರ ಮಾತು, ನೋಟ, ಸ್ಪರ್ಶ, ಸ್ಪಂದನೆಗಳಿಗೆ ಜನತೆ ನೀಡಿದ ಪ್ರತಿಕ್ರಿಯೆ ಯಾವ ಬಗೆಯದು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ವಿಶ್ಲೇಷಣೆಗಳಿಂದ ಸಾಧ್ಯವೆನಿಸುತ್ತದೆ. ಅಲ್ಲದೆ ಕನ್ನಡಿಗರಿಗೆ ಚಳವಳಿಯ ಮೂಲಕ ಬಿಡುಗಡೆಯ ಮಾರ್ಗವಾಗಿ ರಾಜ್‌ಕುಮಾರ್ ಅವರು ಕಂಡಿದ್ದೇಕೆ, ಯಾವ ಕಾರಣಕ್ಕಾಗಿ ಜನತೆ ಅವರನ್ನು ಹಿಂಬಾಲಿಸಿದರು ಚಳವಳಿಯ ನಿಲುವುಗಳೇನಾಗಿತ್ತು, ರಾಜ್‌ಕುಮಾರ್ ಅವರು ಚಳವಳಿಯ ಮೂಲಕ ಜನತೆಗೆ ಮತ್ತಷ್ಟು ಹೇಗೆ ಹತ್ತಿರವಾದರು, ಪ್ರತಿಭಟನಾ ರೂಪದಲ್ಲಿ ಉದಯಿಸಿದ ಇವರ ಕೌಶಲ್ಯ ಎಂಥಹದ್ದು ? ಮೊದಲಾದ ಪ್ರಶ್ನೇಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಅವರ ಸಾಧನೆ, ಶಾಂತಿ ,ಸಹನೆ ,ತಾಳ್ಮೆ, ವಿನಯಗಳಂಥ ಗುಣಗಳು ಪ್ರಚಾರಗೊಳ್ಳಬೇಕಾದ ಹಿನ್ನೆಲೆ ಈ ಅಧ್ಯಯನದಲ್ಲಿದೆ. ಒಟ್ಟಾರೆಯಾಗಿ ನಮ್ಮ ವರ್ತಮಾನ ವಾಸ್ತವಗಳಿಗೆ ಗೋಕಾಕ್ ಚಳವಳಿ ಮತ್ತು ರಾಜ್‌ಕುಮಾರ್ ಎಂಬ ಎರಡು ವಸ್ತು ವಿಷಯಗಳನ್ನು ಇದು ಬಳಗೊಂಡಿದೆ.

ಅಧ್ಯಯನದ ವ್ಯಾಪ್ತಿ ಹಾಗೂ ಮಿತಿಗಳು.

ರಾಜ್ಯದಲ್ಲಿ ಅತ್ಯಂತ ಪ್ರಭಾವಿ ಭಾಷಿಕ ಚಳವಳಿಯಾಗಿ ಗುರುತಿಸಿ ಕೊಂಡಿರುವ ೧೯೮೨ರ ಗೋಕಾಕ್ ಚಳವಳಿಯಲ್ಲಿ ರಾಜಕುಮಾರ್ ಅವರ ಪಾತ್ರವನ್ನು ಕೇಂದ್ರಬಿಂದುವನ್ನಾಗಿಸಿ ಕೊಂಡಿರುವ ಪ್ರಸ್ತುತ ಅಧ್ಯಯನವು

ತನ್ನದೇ ಆದ ವ್ಯಾಪ್ತಿ ಹಾಗು ಮಿತಿಗಳಿಗೆ ಒಳಪಟ್ಟಿದೆ. ೧೯೭೯ರ ಅಕ್ಟೋಬರ್‌ನಲ್ಲಿ ಗುಂಡುರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೊರಡಿಸಿದ ಕನ್ನಡಪರ ಅಜ್ಞೆಯಿಂದ ಸಂಸ್ಕೃತಪರ ಹಾಗೂ ಕನ್ನಡಪರವಾದಿಗಳ ನಡುವೆ ಗೊಂದಲವುಂಟಾಗಿ ಚಳವಳಿಯು ಮೊಳಕೆಯೊಡೆಯಿತು. ಆದರೆ ಈ ಚಳವಳಿಯು ಅಂತಿಮವಾಗಿ ಸ್ಪಷ್ಟ ರೂಪ ಪಡೆದಿದ್ದು ೧೯೮೨ರ ಮಾರ್ಚ್‌ನಿಂದ ಜುಲೈವರೆಗೆ ಈ ಅವಧಿಯನ್ನು ಅಧ್ಯಯನಕ್ಕೆ ಮಿತಿಯನ್ನಾಗಿರಿಸಿಕೊಂಡಿದೆ.

ರಾಜ್ಯದಲ್ಲಿ ಚಳವಳಿಯು ಮೊಳಕೆಯೊಡೆದ ಕಾಲ ಘಟ್ಟದಿಂದ ಮೊದಲಗೊಂಡು ಸರ್ಕಾರ ಭಾಷಾವರದಿಯನ್ನು ಪ್ರಕಟಿಸಲು ಮುಂದಾಗಿ ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ನಡೆದ ವಿಜಯೋತ್ಸವದ ವರೆಗಿನ ವಿದ್ಯಮಾನಗಳನ್ನು ಮಾತ್ರ ಅವರ ಪಾತ್ರದ ಹಿನ್ನೆಲೆಯಲ್ಲಿ ಪರಿಶೀಲಿಸುವ ಮಿತಿಗಳಿಗೆ ಒಳಪಡಿಸಲಾಗಿದೆ. ಅಂತೆಯೇ ಇಂದು ಅದರ ಪರಿಣಾಮಗಳನ್ನು ಪರಿಶೀಲಿಸಬೇಕಾದ ಕಡೆಗೂ ಗಮನ ಹರಿಸಲಾಗಿದೆ. ಚಳವಳಿಯ ಹಿನ್ನೆಲೆ, ಹುಟ್ಟು. ಬೆಳವಣಿಗೆ, ರಾಜ್‌ಕುಮಾರ್ ಅವರ ನೇತೃತ್ವ, ಫಲಿತಾಂಶ, ಪರಿಣಾಮಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿವೆ.

ಅಧ್ಯಯನದ ವಿಧಿ ವಿಧಾನಗಳು

ಪ್ರಸ್ತುತ ಅಧ್ಯಯನವು ರಾಜಕುಮಾರ್ ಅವರ ಪಾತ್ರವನ್ನು ಚಾರಿತ್ರಿಕವಾಗಿ ದಾಖಲಿಸಿ, ವಿಮರ್ಶಾತ್ಮಕವಾಗಿ ವಿಶ್ಲೇಷಣೆ ನಡೆಸುವಂತದ್ದು. ಈ ನಿಟ್ಟಿನಲ್ಲಿ ಪೂರಕವಾಗಿ ದೊರಕಿರುವ ಪ್ರಾಥಮಿಕ ಹಾಗೂ ಅನುಷಂಗಿಕ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ರಾಜ್‌ಕುಮಾರ್ ಅವರ ಪಾತ್ರಕ್ಕೆ ಸಂಬಂಧಿಸಿದಂತೆ ನೇರವಾದ ಹಾಗೂ ಪೂರಕವಾಗಿ ದೊರೆತಿರುವ ಎಲ್ಲಾ ಬಗೆಯ ಅಗತ್ಯ ಕಾಗದ ಪತ್ರ, ಸಂದರ್ಶನ ಚಿತ್ರನಟರ ಮೂಲಕ ದೊರೆತಿರುವ ಎಲ್ಲಾ ಬಗೆಯ ಮಾಹಿತಿಗಳನ್ನು ಸಂಗ್ರಹಿಸಿ ಚಾರಿತ್ರಿಕವಾಗಿ, ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡು ಚರಿತ್ರೆಯ ಶಿಸ್ತಿನ ವಿಧಿ-ವಿಧಾನಗಳ ಮೂಲಕ ವಿಶ್ಲೇಷಣೆ ನಡೆಸಿ ಅಂತಿಮವಾಗಿ ನಿಬಂಧ ಸಿದ್ಧಪಡಿಸಲಾಗಿದೆ.

ರಾಜಕುಮಾರ್ ಅವರ ಪಾತ್ರವನ್ನು ವಸ್ತುನಿಷ್ಟವಾಗಿ ದಾಖಲು ಮಾಡುವಾಗ ಚಳವಳಿಯಲ್ಲಿ ಭಾಗವಹಿಸದ್ದಂಥ ಯಾವುದೇ ವ್ಯಕ್ತಿಗಳ ಪಾತ್ರವನ್ನಾಗಲಿ ಅಥವಾ ಚಳವಳಿಯ ಸ್ವರೂಪಕ್ಕೆ ದಕ್ಕೆಬರದ ಹಾಗೆ ಇವರ ಪಾತ್ರವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ನಾಡು-ನುಡಿ, ಚಳವಳಿ, ರಾಜ್‌ಕುಮಾರ್ ಅವರ ವ್ಯಕ್ತಿತ್ವಗಳನ್ನು ಪರಿಗಣಿಸುವ ಈ ಅಧ್ಯಯನವು ಯಾವುದೇ ಬಗೆಯ ಭಾವಾವೇಶಗಳಿಗೆ ಒಳಗಾಗದೆ ವಸ್ತುನಿಷ್ಟವಾಗಿ ವಿಚಾರಗಳನ್ನು ಮಂಡಿಸುವ ಪ್ರಯತ್ನ ಮಾಡಿದೆ. ಅಂತೆಯೇ ಮಂಡಿಸಿದ ವಿಚಾರಗಳನ್ನು ಚರಿತ್ರೆಯ ಜ್ಞಾನ ಶಿಸ್ತಿನ ವೈಧಾನಿಕತೆಯ ಮೂಲಕವೇ ವಿಶ್ಲೇಷಣೆಗೆ ಒಳಪಡಿಸಿರುವುದು ಇಲ್ಲಿನ ವಿಶೇಷತೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ರಾಜಕುಮಾರ್ ಅವರ ಪಾತ್ರವನ್ನು ಕುರಿತು ವಿಶ್ಲೇಷಣೆ ಮಾಡುವುದಾಗಿರುವುದರಿಂದ ಇದರ ಸ್ವರೂಪವನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

ಮೊದಲ ಅಧ್ಯಾಯವು ಚಳವಳಿಯ ಮಹತ್ವ, ಉದ್ದೇಶ, ವ್ಯಾಪ್ತಿ, ಮಿತಿ ಹಾಗೂ ಸ್ವರೂಪಗಳನ್ನು ಸಂಕ್ಷಿಪ್ತವಾಗಿ ಒಳಗೊಂಡಿರುತ್ತದೆ.

ಎರಡನೆ ಅಧ್ಯಾಯನದಲ್ಲಿ ರಾಜಕುಮಾರ್ ಅವರ ಜೀವನ ಪರಿಚಯ, ವ್ಯಕ್ತಿತ್ವ, ಕನ್ನಡ ಭಾಷೆ, ಸಾಹಿತ್ಯದೊಂದಿಗೆ ಹೊಂದಿದ್ದ ಸಂಬಂಧ, ಅವರ ಕನ್ನಡದ ಬದ್ಧತೆ ನಾಡು ನುಡಿಯ ಸಂಕೇತವಾಗಿ ಪರಿವರ್ತಿತವಾದ ರಾಜ್‌ಕುಮಾರ್ ಅವರ ವ್ಯಕ್ತಿತ್ವ ಮುಂತಾದವುಗಳನ್ನು ವಿಶ್ಲೇಷಣೆಗೆ ಒಳಗು ಮಾಡಲಾಗಿದೆ.

ಮೂರನೆ ಅಧ್ಯಾಯನದಲ್ಲಿ ಗೋಕಾಕ್ ಚಳವಳಿ ಪ್ರಾರಂಭವಾಗುವುದಕ್ಕಿಂತ ಮುನ್ನ ಕನ್ನಡ ಭಾಷೆಯು ಪ್ರೌಢ ಶಿಕ್ಷಣ ಹಂತದಲ್ಲಿ ಹೊಂದಿದ್ದ ಸ್ಥಾನಮಾನ, ಚಳವಳಿಯ ಸ್ವರೂಪ, ಮೊದಲು ಪ್ರತಿಭಟನೆಗಳು ನಡೆದ ಸ್ಥಳಗಳು ಭಾಷಾ ತಜ್ಞರ ಸಮಿತಿ ರಚನೆ ವಿವಿಧ ರೂಪಗಳಲ್ಲಿ ಸಂಘ ಸಂಸ್ಥೆಗಳ ಮೂಲಕ ನಡೆದ ಪ್ರತಿಭಟನೆಗಳು ಮುಂತಾದವುಗಳನ್ನು ಚರ್ಚಿಸಲಾಗಿದೆ. ಜೊತೆಗೆ ಚಳವಳಿಯ ಒಳಗೂ ಹೊರಗೂ ಸಾಹಿತಿ-ಕಲಾವಿದರ ಪಾತ್ರಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ.

ನಾಲ್ಕನೆ ಅಧ್ಯಾಯವು ರಾಜಕುಮರ್ ಅವರು ಚಳವಳಿಗೆ ಪ್ರವೇಶ ಪಡೆಯುವುದಕಿಂತ ಮೊದಲು ಇದ್ದ ರಾಜ್ಯದ ಸ್ಥಿತಿಗತಿ, ಚಳವಳಿಯ ಸ್ಥಿತ್ಯಂತರಗಳು, ಅದರ ಸ್ವರೂಪಗಳು ಸಾಹಿತಿ ಕಲಾವಿದರ ನೇತೃತ್ವದಲ್ಲಿ ನಡೆಯುತ್ತಿದ್ದ ನೀರಸ ಪ್ರತಿಭಟನೆಗಳು, ರಾಜ್‌ಕುಮಾರ್ ಅವರಿಗೆ ಕ್ರಿಯಾಸಮಿತಿಯಿಂದ ಬಂದಂಥ ಕರೆ ಮುಂತಾದವುಗಳನ್ನು ಚರ್ಚಿಸಲಾಗಿದೆ. ರಾಜ್‌ಕುಮಾರ್ ಅವರು ಚಳವಳಿಯ ಭಾಗವಾಗುವಂತ ಅನಿವಾರ್ಯತೆ ಏನಿತ್ತು? ಈ ಸಮಯದಲ್ಲಿ ಚಳವಳಿಯನ್ನು ಮುನ್ನೆಡೆಸುವಂಥ ಸಾಂಸ್ಕೃತಿಕ ಹಾಗೂ ರಾಜಕೀಯ ನಾಯಕರು ಇದ್ದು ಇಲ್ಲದಂತಿದ್ದ ಸ್ಥಿತ್ಯಂತರಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಐದನೆ ಅಧ್ಯಾಯವು ರಾಜಕುಮಾರ್ ಅವರು ಚಳವಳಿಗೆ ಪಾದಾರ್ಪಣೆ ಮಾಡಿದ ಸಂದರ್ಭ, ಅವರು ವಿವಿದೆಡೆ ಕನ್ನಡ ಜನತೆಯನ್ನು ಉದ್ದೇಶಿಸಿ ಮಾಡಿದ ಭಾಷಣಗಳು, ಚಳವಳಿಯಲ್ಲಿ ತಾವು ಕೈಗೊಂಡ ಎರಡು ಹಂತದ ರಾಜ್ಯ ಮಟ್ಟದ ಜಾಥಾದಲ್ಲಿ ಅವರ ದಿನಚರಿ, ಇವರ ಜನಶಕ್ತಿ, ನವೀಕರಿಸಿದ ಭಾಷಾ ಸೂತ್ರದ ಪ್ರಕಟಣೆ ಮುಂತಾದವುಗಳನ್ನು ವಿಶ್ಲೇಷಿಸುತ್ತದೆ. ಚಳವಳಿಯಲ್ಲಿ ಅವರು ವಹಿಸಿದ ಪಾತ್ರ ಈ ಸಂದರ್ಭದಲ್ಲಿ ಸಾಹಿತಿ-ಕಲಾವಿದರು ಜನಸಾಮಾನ್ಯರು ರಾಜ್‌ಕುಮಾರ್ ಅವರನ್ನು ಸ್ವೀಕರಿಸಿದ ಬಗೆ, ಅದರ ಪರಿಣಾಮ ಮೊದಲಾದವುಗಳನ್ನು ಚರ್ಚಿಸಲಾಗಿದೆ.

ಆರನೆ ಅಧ್ಯಾಯನದಲ್ಲಿ ರಾಜ್‌ಕುಮಾರ್ ಅವರ ಪ್ರವೇಶದಿಂದ ಕಂಡು ಬಂದ ಚಳವಳಿಯ ಸಫಲತೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಏಳನೆ ಅಧ್ಯಾಯನದಲ್ಲಿ ಅಂತಿಮ ಫಲಿತಗಳನ್ನು ಹೇಳುವ ಸ್ವರೂಪವನ್ನು ಹೊಂದಿದೆ.

ಅಧ್ಯಾಯ ಎರಡು

ನಾಡು-ನುಡಿಯ ಸಂಕೇತವಾಗಿ ಡಾ. ರಾಜ್‌ಕುಮಾರ್

ಅಧ್ಯಾಯ ಎರಡು

ನಾಡು-ನುಡಿಯ ಸಂಕೇತವಾಗಿ ಡಾ. ರಾಜಕುಮಾರ್

೨.೧. ಹಿನ್ನೆಲೆ

ಚಲನ ಚಿತ್ರರಂಗವೂ ಇಂದಿಗೂ ಜಗತ್ತಿನ ಒಂದು ಅದ್ಭುತ ಮಾಧ್ಯಮ ಕ್ಷೇತ್ರವಾಗಿ ಕಾಣುತ್ತದೆ. ಬಡತನ, ಅಸಹಾಯಕತೆ, ಹಿಂಸೆ ಅಸಮಾನತೆ ತುಂಬಿರುವ ಸಮಾಜದ ಪ್ರತಿರೂಪ ಇದಾಗಿದ್ದು, ತಮ್ಮೆಲ್ಲ ಸಂಕಷ್ಟಗಳನ್ನು ಮರೆಮಾಚುವ ಅವ್ಯಕ್ತ ನಿಗೂಢ ಶಕ್ತಿಯ ಸೆಲೆ ಈ ಚಲನ ಚಿತ್ರರಂಗವಾಗಿದೆ. ಸಮಾಜ, ರಾಜಕಾರಣ ಹಾಗು ಶೈಕ್ಷಣಿಕ ವಲಯಗಳಲ್ಲಿನ ಬದುಕನ್ನು ಅಭಿವ್ಯಕ್ತಗೊಳಿಸುವ ಕ್ಷೇತ್ರ ಇದಾಗಿದೆ.

ವಿಶ್ವದಲ್ಲಿ ಚಲನಚಿತ್ರ ಕ್ಷೇತ್ರ ಉದಯವಾಗಿ ಒಂದು ಶತಮಾನವೇ ಆಗಿದೆಯಾದರು ಕತ್ತಲೆ ಭವನದೊಳಗಿನ ಎರಡುವರೆ ಘಂಟೆ ಸಮಯದ ಮೋಡಿಯ ಛಾಯೆ ಮುಸುಕಾಗಿಲ್ಲ. ಟಿ.ವಿ. ಮಾಧ್ಯಮಗಳು ಮನೆಮನೆಗೆ ನುಗ್ಗಿದರೂ ಬೆಳ್ಳಿತೆರೆಯ ಪ್ರಪಂಚ ತನ್ನದೇ ಆದ ಆಕರ್ಷಣೆಯನ್ನು ಹಾಗೆ ಉಳಿಸಿ ಕೊಂಡು ಬಂದಿದೆ. ಈನಡುವೆ ವಿಶ್ವಸಿನಿಮಾ ರಂಗಕ್ಕೆ ನೂರಹದಿನೈದು ವರುಷಗಳು ತುಂಬಿರುವಂತೆ ಕನ್ನಡ ಸಿನಿಮಾರಂಗಕ್ಕೆ ಎಪ್ಪತ್ತೈದು ವರುಷಗಳು ತುಂಬಿದೆ. ಕೈನಿಂದ ತಿರುಗಿಸುವ ಕ್ಯಾಮರದಿಂದ ಹಿಡಿದು ನಾಟಕಗಳನ್ನೇ ಚಿತ್ರೀಕರಿಸಿ 'ಬಯೋಸ್ಕೋಪ್' ಎಂದು ತೋರಿಸುತ್ತಿದ್ದ ಆ ದಿನಗಳಿಂದ ಆರಂಭಿಸಿ, ಇಂದು ಮಾಯಾಲೋಕವನ್ನೇ ಸೃಷ್ಠಿಸುವ ಹಂತಕ್ಕೆ ಚಲನ ಚಿತ್ರರಂಗ ಬೆಳೆದು ನಿಂತಿದೆ.

''ಪ್ಯಾರೀಸ್ ನಗರದಲ್ಲಿ ೧೮೯೫ರಲ್ಲಿ ಚಲನ ಚಿತ್ರ ಮೊದಲಿಗೆ ಉದಯವಾಯಿತು.'' ಕರ್ನಾಟದಲ್ಲಿ ಆಗ ನಾಟಕಗಳೇ ಮನರಂಜನೆಯ ಮಾಧ್ಯಮ.[೧] ಮರು ವರುಷವೇ ಭಾರತಕ್ಕೆ ಕಾಲಿಟ್ಟ ಬಯೋಸ್ಕೋಫ್ ದಕ್ಷಿಣ ಭಾರತಕ್ಕೆ ಬರುಲು ಹತ್ತು ವರುಷಗಳು ಹಿಡಿಯಿತು. ''ಭಾರತದಲ್ಲಿ ೧೮೯೬ ರಿಂದ ೧೯೧೨ರ ಕಾಲಘಟ್ಟವನ್ನು ಚಲನಚಿತ್ರ ಉಗಮದ ಅವದಿಯೆಂದು ಗುರತಿಸಬಹುದು.[೨]'' ೧೯೧೨ರಿಂದ ೧೯೩೪ರ ವರೆಗಿನ ಕಾಲಘಟ್ಟವನ್ನು ಮೂಕಿಚಿತ್ರಗಳ ಯುಗವೆಂದು ವಿಂಗಡಿಸಲಾಗಿದೆ. ೧೯೨೩ ರಿಂದ ೧೯೩೪ರ ಅವಧಿಯಲ್ಲಿ ೧೨೭೯ ಮೂಕಿಚಿತ್ರಗಳು ಭಾರತದಲ್ಲಿ ತಯಾರಾಗಿರುವುದು ತಿಳಿದುಬರುತ್ತದೆ. ಈ ನಡುವೆ ಭಾರತೀಯ ಚಿತ್ರರಂಗವನ್ನು ಬೆಳೆಸಲು ಹಾಗೂ ಶ್ರಿಮಂತಗೊಳಿಸಲು ಕನ್ನಡ ನಾಡು ತನ್ನದೇ ಆದ ಕೊಡುಗೆಯನ್ನು ನೀಡಿದೆ. ೧೯೨೯ರಲ್ಲಿ ಬೆಂಗಳೂರಿನಲ್ಲಿ ಪ್ರಥಮವಾಗಿ ತೆರೆಗೆ ಬಂದ ' ವಂಸತ ಸೇನಾ' ಚಿತ್ರವು ಕನ್ನಡ ನೆಲದಲ್ಲಿ ಮೊದಲ ಮೂಕಿ

ಚಿತ್ರವಾಗಿ ಮೂಡಿಬಂತು. ಈ ವೇಳೆಗೆ ವಿಶ್ವ ಚಿತ್ರೋದ್ಯಮಕ್ಕೆ ೩೪ ವರುಷಗಳು ಕಳೆದಿತ್ತು. ಕನ್ನಡದಲ್ಲಿ 'ಸತಿಸುಲೋಚನಾ' ಮತ್ತು 'ಭಕ್ತದ್ರುವ'ಎನ್ನುವ ವಾಕ್ ಚಿತ್ರಗಳು ತೆರೆಕಾಣುವ ಮುಲಕ ೧೯೩೪ರಲ್ಲಿ ವಾಕ್ ಚಿತ್ರಗಳ ಯುಗ ಆರಂಭವಾಯಿತು. ಮರುವರ್ಷವೇ ಗುಬ್ಬಿ ವೀರಣ್ಣನವರು ' ಸಧಾರಮೆ' ಚಿತ್ರವನ್ನು ತೆರೆಗಿತ್ತರು. ೧೯೩೬ರಲ್ಲಿ ಹೆಚ್.ಎಲ್.ಎನ್. ಸಿಂಹ ಅವರು ದಕ್ಷಿಣ ಭಾರತದ ಪ್ರಥಮ ಸಾಮಾಜಿಕ ಚಿತ್ರವಾದ ' ಸಂಸಾರ ನೌಕೆ' ಯನ್ನು ತಯಾರಿಸಿದರು.ಕನ್ನಡ ಚಿತ್ರರಂಗದಲ್ಲಿ ಈ ಚಿತ್ರವು ಮೂಕಿ ಚಿತ್ರವಾದ ' ವಂಸತಸೇನಾ' ನಂತರ ನಡೆದ ಪ್ರಯತ್ನಪೂರ್ವಕ ಎನ್ನಬಹುದು, ನಂತರ ೧೯೪೩ರಲ್ಲಿ ಗುಬ್ಬಿನಾಟಕ ಕಂಪನಿಯಿಂದ ಸಿದ್ದವಾದ ' ಜೀವನ ನಾಟಕ' ಎನ್ನುವ ಚಿತ್ರದಲ್ಲಿ ನಾಟಕ ಕಂಪನಿಯನ್ನು ಹಿನ್ನೆಲೆಯಾಗಿಟ್ಟು ಕೊಂಡು ಮನುಷ್ಯ ಸ್ವಭಾವದ ಚರಿತ್ರೆಯನ್ನು ಚಿತ್ರಿಸುವ ಪ್ರಯತ್ನ ನಡೆಯಿತು. ೧೯೪೭ರಲ್ಲಿ ತೆರೆಕಂಡ ಮತ್ತೊಂದು ಚಿತ್ರ ' ಮಹಾತ್ಮ ಕಬೀರ್' ಕೋಮುಸೌಹಾರ್ಧತೆ ಕುರಿತ ಸಾಮಾಜಿಕ ಕಳಕಳಿಯುಳ್ಳ ಚಿತ್ರವನ್ನು ಆರ್. ನಾಗೇಂದ್ರರಾವ್ ನಿರ್ದೇಶಿಸಿದರು.

ಈ ವೇಳೆಗಾಗಲೇ ಕರ್ನಾಟಕದಲ್ಲಿ ಹಲವಾರು ಸಾಹಸಿಗಳ ಪ್ರಯತ್ನಗಳಿಂದಾಗಿ ಚಲನಚಿತ್ರ ತಯಾರಿಕಾ ಸಂಸ್ಥೆಗಳು ಮತ್ತು ಸ್ಟುಡಿಯೋಗಳು ನಿರ್ಮಾಣಗೊಂಡವು, ಜೊತೆಗೆ ಕನ್ನಡ ಚಲನ ಚಿತ್ರ ರಂಗಕ್ಕೆ ಭದ್ರವಾದ ಅಡಿಪಾಯ ಹಾಕಲಾಯಿತು. ಸಾಹಿತ್ಯ, ಸಂಗೀತ ನಾಟಕ ರಂಗದ ಈ ಕ್ಷೇತ್ರಕ್ಕೆ ಬಂದು ಹಲವಾರು ಪ್ರತಿಭಾವಂತರು, ಸಾಹಸಿಗಳು, ಪ್ರಯೋಗಶೀಲರು ದುಡಿದಿದ್ದರು. ಇವರೆಲ್ಲರ ಪರಿಶ್ರಮದ ಫಲವಾಗಿ ೧೯೫೪ರಲ್ಲಿ ತೆರೆಕಂಡ ' ಬೇಡರ ಕಣ್ಣಪ್ಪ' ಚಿತ್ರವು ಹೊಸ ಇತಿಹಾಸವನ್ನು ಸೃಷ್ಠಿ ಮಾಡಿತು.

"೧೯೫೪ರಲ್ಲಿ ತೆರೆಕಂಡ 'ಬೇಡರ ಕಣ್ಣಪ್ಪ' ಚಿತ್ರದಿಂದ ಕನ್ನಡ ಚಿತ್ರಜಗತ್ತಿನ ಸುಗ್ಗಿ ಪ್ರಾರಂಭವಾಯಿತು. ಈ ಚಿತ್ರವು ಮೂಕಿಚಿತ್ರವಾದ ' ವಸಂತ ಸೇನಾ' ನಂತರ ರಾಷ್ಟ್ರ ಮಟ್ಟದ ಗಮನ ಸೆಳೆಯಿತು."[೩] ನಮ್ಮ ಈ ಅಧ್ಯಾಯನದ ಕೇಂದ್ರಬಿಂದುವಾದ ರಾಜ್‌ಕುಮಾರ್ ಅವರನ್ನು ತೆರೆಗೆತಂದ ಈ ಚಿತ್ರವು ನಾಯಕನ ತಾರಾಮೌಲ್ಯವನ್ನು ಸೃಷ್ಠಿಸಿತು. ಇಲ್ಲಿಂದ ಮುಂದಕ್ಕೆ ಕನ್ನಡ ಚಿತ್ರರಂಗದ ಬಗ್ಗೆ ಯಾರೇ ಮಾತನಾಡಿದರೂ ರಾಜಕುಮಾರ್ ಅವರನ್ನು ಬಿಟ್ಟು ಮಾತನಾಡು ವಂತಿರಲಿಲ್ಲ.

' ಮುತ್ತುರಾಜ' ಚಲನ ಚಿತ್ರರಂಗಕ್ಕೆ ಪ್ರವೇಶಿಸಿ ' ರಾಜಕುಮಾರ' ನಾಗುವ ಮುನ್ನ ಕನ್ನಡ ಚಲನ ಚಿತ್ರ ರಂಗವು ಹಲವಾರು ಏಳು ಬೀಳುಗಳನ್ನು ಕಂಡಿತ್ತು. ಕನ್ನಡದ ಮೊದಲ ಚಿತ್ರದ ನಾಯಕ ಸುಬ್ಬಯ್ಯನಾಯ್ಡು ನಿರ್ಧೆಶಕರಾದ ವೈ. ವಿ. ರಾವ್, ಆರ್.ನಾಗೇಂದ್ರ ರಾವ್, ಗುಬ್ಬಿವೀರಣ್ಣ. ಬಿ.ಆರ್,ಪಂತುಲು ಹೊನ್ನಪ್ಪ ಭಾಗವತರ್. ಕೆಂಪರಾಜ ಅರಸು, ಹೆಚ್, ಎಲ್,ಎನ್ ಸಿಂಹ, ಜಿ,ಎಸ್,ರಂಗ, ಡಿ, ಶಂಕರ್‌ಸಿಂಗ್, ಮುಂತಾದ ವ್ಯಕ್ತಿಗಳು ಕನ್ನಡ ಚಿತ್ರೋಧ್ಯಮಕ್ಕೆ ನೀರೆರೆದು ಪೋಷಿಸಿ ಬೆಳೆಸಿ ಕೊಂಡು ಬಂದಿದ್ದರು. ಈ ಸಮಯಕ್ಕೆ ಕನ್ನಡದಲ್ಲಿ ೪೧ ಚಿತ್ರಗಳು ಬಿಡುಗಡೆ ಗೊಂಡಿದ್ದವು. ಇಂಥ ಸಂದರ್ಭದಲ್ಲಿ ಮುತ್ತುರಾಜ್ ಅವರು ರಂಗಭೂಮಿಯಿಂದ ಚಲನ ಚಿತ್ರ ರಂಗಕ್ಕೆ ' ಬೇಡರ ಕಣ್ಣಪ್ಪ' ಚಿತ್ರದ ಮೂಲಕ ಪ್ರವೇಶಿಸಿದರು.[೪]

೨.೨. ರಾಜಕುಮಾರ್ ಅವರ ಜೀವನದ ಕಿರು ಪರಿಚಯ

ಕಲೆ ಸಂಸ್ಕೃತಿ ಎನ್ನುವುದು ಆಯಾ ನಾಡು-ನುಡಿಯ ನಾಡಿಯನ್ನು ಪ್ರತಿನಿಧಿಸುತ್ತವೆ. ಭವ್ಯವಾದ ಕಲೆ, ಸಾಹಿತ್ಯ. ಮತ್ತು ಸಂಸ್ಕೃತಿ ಹೊಂದಿರುವ ನಮ್ಮ ಕನ್ನಡನಾಡು ದೇಶದಲ್ಲಿಯೇ ಹೆಗ್ಗಳಿಕೆಯ ಬೀಡು. ಇಲ್ಲಿರುವ ಜನಪದ ಸಂಪತ್ತು. ಕಲಾಪ್ರಕಾರಗಳು, ಖನಿಜಸಂಪತ್ತು ಮುಂತಾದವು ಮತ್ತೆಲ್ಲಿಯೂ ನೋಡಲು ಸಾಧ್ಯವಿಲ್ಲ.

ಇಂಥ ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ನಾಡನ್ನು ಉಳಿಸಿ ಬೆಳೆಸುವಲ್ಲಿ ಇಲ್ಲಿನ ಜನತೆಯ ಶ್ರಮ ಅನನ್ಯವಾದ್ದದು.

ಸಂಯಮ ಶೀಲರಾದ ಕನ್ನಡಿಗರು ಸೃಜನಶೀಲರು, ಕ್ರಿಯಾಶೀಲರು ಎನ್ನುವುದಕ್ಕೆ ಇಲ್ಲಿ ಹುಟ್ಟಿಬೆಳೆದ ಅನೇಕ ಮಹಾನ್ ಕಲಾವಿದರು. ಚಿಂತಕರು, ಸಾಹಿತಿಗಳು ವಿಜ್ಞಾನಿಗಳು, ನಾಡಿನ ಕೀರ್ತಿಯನ್ನು ಉತ್ತುಂಗಕ್ಕೇರಿಸಿರುವುದೇ ಸಾಕ್ಷಿ. ಇಂಥ ವ್ಯಕ್ತಿಗಳಲ್ಲಿ ಇತ್ತೀಚೆಗಷ್ಟೇ ನಿಧನರಾದ ವರನಟ 'ನಾಡೋಜ' ರಾಜ್‌ಕುಮಾರ್ ಅವರು ಸಹ ಒಬ್ಬರು.

ಆಗಿನ ಮೈಸೂರು ಜಿಲ್ಲೆ (ಈಗಿನ ಚಾಮರಾಜನಗರ ಜಿಲ್ಲೆಯ) ಕೊಳ್ಳೆಗಾಲ ಸಮೀಪದ ಗಾಜನೂರಿನಲ್ಲಿ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ಮಗನಾಗಿ ಕನಕಪುರದ ಮುತ್ತತ್ತಿ ಆಂಜನೇಯನ ವರಪ್ರಸಾದಿಂದ ೨೪.೪.೧೯೨೯ರಂದು ರಾಜ್‌ಕುಮಾರ್ ಜನಿಸಿದರು. ತಂದೆ ಹೆಸರಾಂತ ರಂಗಭೂಮಿ ಕಲಾವಿದ. ತಾಯಿ ಲಕ್ಷ್ಮಮ್ಮ. ಬಡತನದ ಹಿನ್ನಲೆಯಲ್ಲಿ ನಾಲ್ಕನೆಯ ತರಗತಿಯನ್ನು ರಾಜ್‌ಕುಮಾರ್ ದಾಟಲಾಗಲಿಲ್ಲ. ಒಂದುದಿನ ಗುಬ್ಬಿ ವೀರಣ್ಣನವರು ಮುತ್ತುರಾಜನ ಕಲಾಗೀಳನ್ನು ಕಂಡು ಬಣ್ಣಬಳಿದು ಕೊಳ್ಳಲು ಹೇಳಿದರು. ಮುತ್ತುರಾಜ್ ನೀಡಿದ ಸಣ್ಣಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದು ಗಮನಸೆಳೆಯಿತು. ನಂತರ ಭಕ್ತ ಪ್ರಹ್ಲಾದ, ಶ್ರೀನಿವಾಸ ಕಲ್ಯಾಣ ಚಿತ್ರಗಳಲ್ಲಿ ಚಿಕ್ಕಪಾತ್ರ ಪಾತ್ರಗಳಲ್ಲಿ ಗುರುತಿಸಿಕೊಂಡ ಮುತ್ತುರಾಜ ೧೯೫೪ರಲ್ಲಿ ರಾಜ್‌ಕುಮಾರನಾಗಿ ಬೇಡರ ಕಣ್ಣಪ್ಪ ಚಿತ್ರದಲ್ಲಿ ಪೂರ್ಣಪ್ರಮಾಣದ ನಾಯಕರಾದರು. ರಾಜ್‌ಕುಮಾರರ ಅದ್ಭುತ ಅಭಿನಯದಲ್ಲಿ ಚಿತ್ರ ಅಪಾರ ಜನಮನ್ನಣೆಗಳಿಸಿತ್ತಲ್ಲದೆ. ಕನ್ನಡಕ್ಕೆ ಮೊಟ್ಟ ಮೊದಲ ರಾಷ್ಟ್ರಪತಿ ಪದಕವನ್ನು ತಂದು ಕೊಟ್ಟಿತು. ಹರಿಭಕ್ತ, ಓಹಿಲೇಶ್ವರ, ಭಕ್ತವಿಜಯ, ಚಿತ್ರಗಳ ಬಳಿಕ ರಾಜ್‌ಗೆ ಹೆಚ್ಚಿನ ಅವಕಾಶಗಳಿರಲಿಲ್ಲ, ಮತ್ತೆ ರಂಗಭೂಮಿಯಲ್ಲಿ ನಟನೆ. ೧೯೬೦ರಲ್ಲಿ ಜಿ.ವಿ. ಅಯ್ಯರ್ ಬಾಲಕೃಷ್ಣ, ನರಸಿಂಹರಾಜು, ಅವರೊಡಗೂಡಿ 'ಕನ್ನಡ ಚಿತ್ರ ಕಲಾವಿದರ ಸಂಘ' ಕಟ್ಟಿ ರಣಧೀರ ಕಂಠೀರವ ಎಂಬ ಐತಿಹಾಸಿಕ ಚಿತ್ರ ನಿರ್ಮಿಸಿ ಹಣ ಮತ್ತು ಹೆಸರು ಗಳಿಸಿದರು.

ಇದೇ ಅವಧಿಯಲ್ಲಿ ಕಲ್ಯಾಣ್ ಕುಮಾರ್, ಉದಯಕುಮಾರ್, ರಾಜ್‌ಕುಮಾರ್ ನಡುವೆ ನಾಯಕನ ಸ್ಥಾನಕ್ಕೆ ಪೈಪೋಟಿ ಪ್ರಾರಂಭವಾಯಿತು. ರಾಜ್‌ಕುಮಾರ ಅವರ ಸಮಯಪ್ರಜ್ಞೆ ತ್ಯಾಗ ಅರ್ಪಣಾ ಮನೋಭಾವದ ಮುಂದೆ ಈ ಕುಮಾರರು ನಿಲ್ಲಲಾರದೆ ಹೋದರು. ನಂತರ ಕರುಣೆಯೇ ಕುಟುಂಬದ ಕಣ್ಣು ನಂದಾದೀಪ, ಸತ್ಯಹರಿಶ್ಚಂದ್ರ, ಎಮ್ಮೆತಮ್ಮಣ್ಣ, ಮೇಯರ್‌ಮುತ್ತಣ್ಣ. ಗೋವಾದಲ್ಲಿ ಸಿ.ಐ.ಡಿ.೯೯೯ ಹೀಗೆ ವಿಭಿನ್ನ ಅಭಿರುಚಿಯ ಪಾತ್ರಗಳಲ್ಲಿ ಸೊಗಸಾದ ಅಭಿನಯ ನೀಡಿ ಟೀಕಾಕಾರರನ್ನು ಮೌನವಾಗಿಸಿದರು. ನಂತರ ಕಸ್ತೂರಿನಿವಾಸ, ಕುಲಗೌರವ, ಸಿಪಾಯಿರಾಮು, ಬಂಗಾರದ ಮನುಷ್ಯ, ಗಂಧದಗುಡಿ, ಸಂಪತ್ತಿಗೆಸವಾಲ್, ಮಯೂರ, ಎರಡುಕನಸು, ಭಕ್ತಕುಂಬಾರ, ಮುಂತಾದ ಯಶಸ್ವಿ ಚಿತ್ರಗಳು ಒಂದರ ನಂತರ ಮತ್ತೊಂದು ಬರ ತೊಡಗಿದವು. ರಾಜ್ ಚಿತ್ರಗಳಿಂದ ಗಲ್ಲಾಪೆಟ್ಟಿಗೆಯಲ್ಲಿ ಹಣ ಝುಣ ಝುಣ ಎಂದಾಗ ಇವರ ಕಾಲ್‌ಶೀಟ್‌ಗಾಗಿ ಹಾತೊರೆದರು. ರಾಜ್‌ಕುಮಾರ್ ಅವರು ಕಲಾವಿದರಾಗಿ ಬೆಳೆದರೆ ಮತ್ತೊಂದು ಕಡೆ ಚಿತ್ರರಂಗ ಗಟ್ಟಿಯಾಗಿ ನೆಲೆನಿಂತಿತು. ಬಂಗಾರದ ಮನುಷ್ಯ ಚಿತ್ರವು ಬೆಂಗಳೂರಿನಲ್ಲಿ ಸತತವಾಗಿ ಎರಡು ವರ್ಷಗಳ ಕಾಲ ಪ್ರದರ್ಶನ ಕಂಡಿದ್ದು ದಕ್ಷಿಣ ಭಾರತದಲ್ಲಿ ಇಂದಿಗೂ ದಾಖಲೆಯಾಗಿದೆ.

ಭಾಗ್ಯವಂತರು ಚಿತ್ರದ ಬಳಿಕ ರಾಜ್‌ಕುಮಾರ್ ಅವರ ಚಿತ್ರಗಳಿಗೆ ಪಾರ್ವತಮ್ಮ ಹಾಗೂ ಸಹೋದರ ವರದರಾಜ್ ಸ್ವತಃ ನಿರ್ಮಾಪಕರಾದರು. ಶಂಕರ್‌ಗುರು, ಹುಲಿಹಾಲಿನಮೇವು, ತಾಯಿಗೆ ತಕ್ಕ ಮಗ, ಹೊಸಬೆಳಕು,

ಹಾಲುಜೇನು, ಚಲಿಸುವ ಮೋಡಗಳು, ಕವಿರತ್ನಕಾಳಿದಾಸ, ದೇವತಾಮನುಷ್ಯ, ಹೀಗೆ ರಾಜ್ ಬ್ಯಾನರ್‌ನಿಂದ ವೈಶಿಷ್ಟ್ಯಪೂರ್ಣ ಚಿತ್ರಗಳು ಮೂಡಿ ಇವರು ಅದ್ವಿತೀಯರಾದರು. ತಾವು ೨೦೦ ಚಿತ್ರ ಪೂರೈಸಿದ ಬಳಿಕ ಬಣ್ಣದ ಗೀಳು ಸಾಕೆಂದು ಮೌನವಾದರು. ಆದರೆ ಅಭಿಮಾನಿಗಳ ಉಪವಾಸ ಸತ್ಯಾಗ್ರಹ ಹೂಡಿದರು. ೧೯೯೨ ರಲ್ಲಿ ಅಭಿಮಾನಿಗಳ ಖುಷಿಗಾಗಿ ಇವರು ಜೀವನ ಚೈತ್ರ ಚಿತ್ರದಲ್ಲಿ ಮತ್ತೆ ಕಂಗೊಳಿಸಿದಾಗ ಇಡೀ ಅಭಿಮಾನ ಸಮೂಹವೇ ಹರ್ಷಗೊಂಡಿತು. ಈ ಚಿತ್ರವು ಒಂದು ವರ್ಷ ಕಾಲ ಸತತ ಪ್ರದರ್ಶನ ಕಂಡು 'ಈ ಲೋಕವೆಲ್ಲ ನಾದಮಯ' ಹಾಡಿಗಾಗಿ ರಾಷ್ಟ್ರಪ್ರಶಸ್ತಿ ಪಡೆದರು. ನಂತರ ಆಕಸ್ಮಿಕ, ಒಡಹುಟ್ಟಿದವರು ಚಿತ್ರಗಳು ರಾಜ್ಯಾದ್ಯಾಂತ ಭಾರಿ ಯಶಸ್ಸು ಪಡೆದವು. ೧೯೯೬ ರಲ್ಲಿ ಇವರ ಸಾಧನೆ ಪ್ರತಿಭೆಯನ್ನು ಗಣನೆಗೆ ತೆಗೆದುಕೊಂಡ ಕೇಂದ್ರಸರ್ಕಾರ ಅವರಿಗೆ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಕನ್ನಡ ನಾಡಿಗೆ ಇವರ ಸೇವೆ ಅಪಾರ. ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕೆಂಬ ಗೋಕಾಕ್ ಚಳವಳಿಯಲ್ಲಿ ಮುಂಚೂಣಿಯ ನಾಯಕರಾಗಿ ಹೋರಾಟ ನಡೆಸಿದರು. ಯಾವಾಗಲೂ ಕನ್ನಡ ನೆಲ, ಜಲ, ಯಾವುದೇ ವಿಷಯವಿದ್ದರೂ ಹೋರಾಟಕ್ಕೆ ಸಜ್ಜಾಗುತ್ತಿದ್ದರು. ತಮ್ಮ ರಸಸಂಜೆ ಕಾರ್ಯಕ್ರಮಗಳ ಮೂಲಕ ಅನೇಕ ಸಂಘ ಸಂಸ್ಥೆಗಳಿಗೆ ಸಹಾಯಹಸ್ತ ನೀಡಿದ್ದಾರೆ. ಇವರು ರಸಮಂಜರಿ ಕಾರ್ಯಕ್ರಮಗಳಿಂದಾಗಿ ನಾಡು ಹೊರನಾಡಿನಲ್ಲಿ ಶಾಲಾ ಕಾಲೇಜು ಕಟ್ಟಡಗಳು ರಂಗಮಂದಿರಗಳು ದೇಗುಲಗಳು ಮತ್ತು ಕ್ರೀಡಾಂಗಣಗಳು ತಲೆಯೆತ್ತಿವೆ ಎಂಬುದು ಅಭಿಮಾನದಿಂದ ಹೇಳುವಂಥ ಮಾತು. ರಾಜ್ಯಕ್ಕೆ ಹೊಸ ಮುಖ್ಯಮಂತ್ರಿಯಾದವರು ರಾಜ್ಯದ ಸಾಂಸ್ಕೃತಿಕ ರಾಯಭಾರಿಯಂತಿದ್ದ ಇವರನ್ನು ಭೇಟಿಯಾಗಿ ಸಮಾಲೋಚಿಸುವ ಸೌಜನ್ಯವಿಟ್ಟುಕೊಂಡರು. ಎಲ್ಲಾ ವರ್ಗದವರಿಗೆ ಬೇಕಾಗಿದ್ದ ರಾಜ್‌ಕುಮಾರ್ ಅವರ ಜನಪ್ರಿಯತೆ ಅವರಿಗೆ ಮುಳುವಾದ ಘಟನೆ ಜುಲೈ ೩೧, ೨೦೦೦ ರಲ್ಲಿ ನರಹಂತಕ ವೀರಪ್ಪನ್‌ನಿಂದ ನಡೆದದ್ದು ವಿಪರ್ಯಾಸ. ಕಾಡುಗಳ್ಳ ವೀರಪ್ಪನ್‌ನಿಂದ ೧೦೮ ದಿನಗಳ ಕಾಲ ಅರಣ್ಯದಲ್ಲಿ ಬಂಧಿಯಾಗಿದ್ದು ನಾಡಿಗೆ ಬಂದ ಇವರು ಎಂದಿನಂತೆ ಲವಲವಿಕೆಯಿಂದ ಇರುವಂತಾಗಲೇ ಇಲ್ಲ. ನಂತರದ ದಿನಗಳಲ್ಲಿ ಬಾಧಿಸಿದ ಮಂಡಿ ನೋವು ಹೆಚ್ಚಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗುವಂತಾಯಿತು. ೨೦೦೪ ರಲ್ಲಿ ಇವರು ಮೊದಲಬಾರಿಗೆ ಹೃದಯಾಘಾತಕ್ಕೆ ಒಳಗಾದರು. ೨೦೦೫ ರಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಸಮ್ಮಿಶ್ರ ಸರ್ಕಾರ ಇವರು ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಗೈದು ಯಶಸ್ವಿ ೫೦ ವರ್ಷಗಳನ್ನು ಪೂರೈಸಿದ್ದಕ್ಕಾಗಿ ಸಾರ್ಥಕ ಸುವರ್ಣ ಕಾರ್ಯಕ್ರಮವನ್ನು ನಡೆಸಿ ಅವರನ್ನು ಹೃದಯಸ್ಪರ್ಶಿಯಾಗಿ ಸನ್ಮಾನಿಸಿತು. ಈ ಸಮಯದಲ್ಲಿ ಮುಖ್ಯಮಂತ್ರಿ ಧರ್ಮಸಿಂಗ್ ಸರ್ಕಾರ ಬಂಗಾರದ ಮನುಷ್ಯ ಎಂಬ ಇವರ ಬದುಕಿನ ಬಗ್ಗೆ ಮಾಹಿತಿ ನೀಡುವ ಪುಸ್ತಕವನ್ನು ಬಿಡುಗಡೆ ಮಾಡಿತು. ಸಾರ್ವಜನಿಕ ಸಮಾರಂಭದಲ್ಲಿ ರಾಜ್‌ಕುಮಾರ್ ಅವರು ಕಾಣಿಸಿಕೊಂಡದ್ದು ಇದೇ ಕೊನೆಯ ಬಾರಿ. ೨೦೦೬ರಲ್ಲಿ ಎರಡು ಬಾರಿ ಆರೋಗ್ಯ ತೊಂದರೆಯಿಂದ ಆಸ್ಪತ್ರೆಗೆ ದಾಖಲಾಗಿದ್ದ ಇವರು ಬಹುಬೇಗನೆ ಚೇತರಿಸಿಕೊಂಡರು. ನಿಧಾನವಾಗಿಯಾದರೂ ರಾಜ್ ಅವರ ಆರೋಗ್ಯ ಸುಧಾರಿಸುತ್ತಿದೆ, ಹೆಚ್ಚಿನ ಲವಲವಿಕೆಯಿಂದ ಇದ್ದು ಭಗವಂತ ಅವಕಾಶ ಕಲ್ಪಿಸಿದರೆ ಭಕ್ತ ಅಂಬರೀಷ ಚಿತ್ರ ನಿರ್ಮಿಸುವ ದಿನಗಳು ದೂರವಿಲ್ಲ ಎನ್ನುವ ದೃಢ ವಿಶ್ವಾಸ ಪಾರ್ವತಮ್ಮನವರು ಹೊಂದಿದ್ದರು. ತಂದೆ ಚೇತೋಹಾರಿಯಾಗಿರುವುದನ್ನು ನೋಡಿಯೇ ಹಿರಿಯ ಪುತ್ರ ಶಿವರಾಜ್‌ಕುಮಾರ್ ಗಂಡುಗಲಿ ರಾಮ ಎಂಬ ಐತಿಹಾಸಿಕ ಕಥಾನಕವುಳ್ಳ ಚಿತ್ರದಲ್ಲಿ ಅಭಿನಯಿಸಲು ಮುಂದಾಗಿದ್ದರು. ಇಂತಹ ಸಮಯದಲ್ಲಿಯೇ ರಾಜ್‌ಕುಮಾರ್ ಅವರು ವಿದಿವಶರಾದದ್ದು ನಿಜಕ್ಕೂ ದುರದೃಷ್ಟಕರ.

'ಏಪ್ರಿಲ್ ೧೨, ೨೦೦೬ ರಂದು ದೀನ ನಾನು ಸಮಸ್ತ ಲೋಕಕೆ, ದಾನಿ ನೀನು'.... ಎನ್ನುವ ಹಾಡನ್ನು ಹೇಳಿ ಸಂತೃಪ್ತರಾಗಿದ್ದ ಇವರಿಗೆ ಹೃದಯಾಘಾತವಾಗಿ ಚಿರನಿದ್ರೆಗೆ ಶರಣಾದರು. ಏಪ್ರಿಲ್ ೧೩ ರಂದು ಅಂತಿಮ ನಮನ ಸಲ್ಲಿಸಲು ರಾಜ್ಯದ ಮೂಲೆ ಮೂಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಅಭಿಮಾನಿಗಳು ಬೆಂಗಳೂರಿನಲ್ಲಿ ಸೇರಿದ್ದು ಅವರು ಪಡೆದಿದ್ದ ಜನಮನ್ನಣೆಗೆ ಸಾಕ್ಷಿಯಾಗಿತ್ತು.

೨.೩. ರಾಜ್‌ಕುಮಾರ್ ಅವರ ವ್ಯಕ್ತಿತ್ವ

ರಾಜ್‌ಕುಮಾರ್ ಅವರು ಚಿತ್ರರಂಗದಲ್ಲಿ ನಡೆದು ಬಂದ ದಾರಿಯೇ ಒಂದು ಇತಿಹಾಸ. ಕನ್ನಡ ಚಿತ್ರರಂಗವನ್ನು ಸುಮಾರು ಐದು ದಶಕಗಳ ಕಾಲ ಬಹಳ ಹತ್ತಿರದಿಂದ ಕಂಡವರು. ತಮ್ಮ ಜೀವನವನ್ನು ಕನ್ನಡ ಚಿತ್ರರಂಗಕ್ಕೆ ಮೀಸಲಿಟ್ಟು ರಾಜಕೀಯ ಕ್ಷೇತ್ರದಿಂದ ದೂರವುಳಿದರು. ಅವರು ನಿತ್ಯ ಜೀವನದಲ್ಲಿ ನಡೆದುಕೊಳ್ಳುವ ರೀತಿ ಸೌಜನ್ಯ, ಹಾಗೂ ಸರಳತೆಗಳು ಅವರ ವ್ಯಕ್ತಿತ್ವವನ್ನು ಹೆಚ್ಚಿಸುತ್ತಾ ಬಂದವು. ರಾಜ್‌ಕುಮಾರ್ ಅವರು ಎಂದಿಗೂ ತಮ್ಮ ನಿಜಜೀವನದಲ್ಲಿ ಬಣ್ಣದ ಬಟ್ಟೆಗಳನ್ನು ಧರಿಸಿದವರಲ್ಲ. ತಾವು ಧರಿಸುತ್ತಿದ್ದ ಕೂಲಿಂಗ್‌ಗ್ಲಾಸ್ ಮೂಲಕ ಹೊರಜೀವನವನ್ನು ಬೇರೊಂದು ಬಣ್ಣದಿಂದ ಹಾಗೂ ದೃಷ್ಟಿಕೋನದಿಂದ ಕಂಡವರಲ್ಲ. ಅವರ ಖಾಸಾ ಒಡನಾಡಿಗಳ ಪ್ರಕಾರ ಅವರು ತನ್ನ ಏಕಾಂತದಲ್ಲಿ ಮತ್ತೊಬ್ಬರನ್ನು ಕುರಿತು ಕೀಳಾಗಿ ಮಾತನಾಡಿದವರಲ್ಲ. ಪ್ರತಿಕ್ಷಣವೂ ತನ್ನ ಕೊರತೆ ಹಾಗೂ ಮಿತಿಗಳನ್ನು ತಾನೇ ಗುರುತಿಸಿಕೊಳ್ಳುತ್ತಾ ಮುನ್ನೆಡೆದರು. ನಾನೇನೂ ಕಲಿತಿಲ್ಲ. ನನಗೇನೂ ತಿಳಿದಿಲ್ಲ ಎನ್ನುತ್ತಲೇ ಅನುಭವದ ಮೂಸೆಯಿಂದ ಹುಟ್ಟುತ್ತಿದ್ದ ಅವರ ಮಾತುಗಳು ನಿರ್ಮಲವಾಗಿರುತ್ತಿದ್ದವು. ಮಾನವೀಯತೆ ನಿಚ್ಚಳವಾಗಿ ಅವರಲ್ಲಿ ನೆಲೆಸಿತ್ತು. ಸದ್ವರ್ತನೆಗಳು ಸಹಜ ಉಸಿರಾಗಿದ್ದವು. ತಮ್ಮ ಪ್ರತಿಭೆ ಪುರಸ್ಕಾರ ಪ್ರಶಸ್ತಿಗಳಿಂದ ಎಂದೂ ಬೀಗಿದವರಲ್ಲ. ಬದಲಾಗಿ ಬಾಗಿದರು. ಬಾಳಿನುದ್ದಕ್ಕೂ ನಾಡಿನ ಜನರ ಪ್ರತಿ ವಿಶ್ವಾಸಗಳನ್ನು ಕಾಯ್ದುಕೊಂಡು ಬಂದಿದ್ದ ಇವರು ಕೊನೆಯವರೆಗೂ ರಾಜ್‌ಕುಮಾರ್‌ನಂತೆಯೇ ಬದುಕಿ ಬಾಳಿದರು. ತಮ್ಮ ಅಂತಿಮ ದಿನಗಳ ಕಾಲಘಟ್ಟದಲ್ಲಿ ಕಾಡುಗಳ್ಳ ವೀರಪ್ಪನ್ ಕಪಿಮುಷ್ಟಿಯಲ್ಲಿದ್ದು ಸಾಕಷ್ಟು ನೋವುಂಡು ಬಂದರೂ ಸಹ ಆತನ ಬಗ್ಗೆ ಕನಿಕರ ತೋರಿದ ವ್ಯಕ್ತಿತ್ವ ಅವರದ್ದು. ಈ ಒಂದು ಘಟನೆಯನ್ನು ಹೊರತು ಪಡಿಸಿದರೆ ಇವರ ಜೀವನ ಬಹಳ ಗಂಭೀರವಾಗಿತ್ತು. ಈ ವ್ಯಕ್ತಿತ್ವವೇ ಅವರನ್ನು ದೊಡ್ಡ ಸ್ಥರಕ್ಕೇರಿಸಿತು.

ಶಾಲಾ ಕಾಲೇಜುಗಳಲ್ಲಿ ಕಲಿಯದೆಯೂ ಆದರ್ಶ ಜೀವನವನ್ನು ರೂಢಿಸಿಕೊಂಡ ಇವರು ಸಾಧಕರಲ್ಲಿ ಸಾಧಕರಾಗಿ ಎನಗಿಂತ ಕಿರಿಯರಿಲ್ಲ ಎನ್ನುತ್ತಲೇ ಬದುಕು ಕಟ್ಟಿಕೊಂಡವರು. ಆಡದೇ ಮಾಡುವವನು ರೂಢಿಯಲ್ಲಿ ಉತ್ತಮನು ಎನ್ನುವ ಸರ್ವಜ್ಞರ ವಚನದಂತೆ ಇವರ ಬದುಕು. ಇವರ ಜೀವನ ಪರಿಯೇ ಒಂದು ವಿಶ್ವವಿದ್ಯಾನಿಲಯ. ಉಡುಗೆ ತೊಡುಗೆಗಳಲ್ಲಿ ಸದಾ ಶ್ವೇತವಸ್ತ್ರಧಾರಿಯಾಗಿದ್ದ ಇವರನ್ನು ಪ್ಯಾಂಟು ಷರ್ಟ್‌ಗಳಲ್ಲಿ ಕಾಣಬೇಕಾದರೆ ಅವರ ಹಳೆಯ ಸಿನಿಮಾನಗಳನ್ನು ನೋಡಬೇಕು. ಜೀವನದ ಮೌಲ್ಯಗಳನ್ನು ಬದುಕಿನಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಇವರು ತಮ್ಮ ಚಿತ್ರಗಳ ಮೂಲಕ ಕಟ್ಟಿಕೊಟ್ಟರು. ಇದರಿಂದಾಗಿ ಸಿನಿಮಾಗಳನ್ನು ನೋಡುನೋಡುತ್ತಲೇ ಬೆಳೆದ ಕನ್ನಡಿಗರ ಪಾಲಿಗೆ ಅವರು ಆದರ್ಶ ವ್ಯಕ್ತಿಯಾಗಿ ಕಾಣಿಸಿಕೊಂಡರು. ರಾಜ್‌ಕುಮಾರ್ ಅವರಿಗೆ ನಟನೆಯೆಂದರೆ ವೃತ್ತಿಯಾಗಿರಲಿಲ್ಲ. ಜೀವನಕ್ಕಾಗಿ ಬಣ್ಣ ಹಚ್ಚುವುದೂ ಆಗಿರಲಿಲ್ಲ. ಅದು ದೇವತಾರ್ಚನೆ, ತ್ರಿಕರಣ ಶುದ್ಧಿಯಿಂದ ಮಾಡುವ ಆರಾಧನೆಯಾಗಿತ್ತು. ಒಂದು ಆರೋಗ್ಯಪೂರ್ಣ

ಸಮಾಜಕ್ಕೆ ತೀರಾ ಅವಶ್ಯಕವಾಗಿದ್ದ ಆಸೆ, ನೆಮ್ಮದಿ, ಭರವಸೆ, ಮಾದರಿ ಈಗ ಬೆಂಗಳೂರಿನ ಕಂಠೀರವ ಸ್ಟುಡಿಯೋ ಆವರಣದಲ್ಲಿ ಚಿರ ನಿದ್ರೆಗೆ ಜಾರಿ ಎರಡು ವರ್ಷಗಳೂ ಉರುಳಿಯಾಗಿದೆ. ಆದರೆ ಎಂದಿಗೂ ಹಿಂಸೆಯನ್ನು ಬಯಸದ ಜೀವ ನಮ್ಮಿಂದ ದೂರವಾಗಿ ಹೋಗುವಾಗ ಕನ್ನಡಿಗರು ಬಹಳ ಸಣ್ಣವರಾಗಿ ನಡೆದುಕೊಂಡರೇನೊ ಎಂಬ ಅಳುಕು ಇದೆ. ಅಂದಿನ ವಿಚಾರದಲ್ಲಿ ಜನರ ವಿಧೇಯತೆ ಅಭಿಮಾನಗಳು ಬೆತ್ತಲಾದವೆಂದೇ ಹೇಳಬೇಕಾಗುತ್ತದೆ. ಅಭಿಮಾನಿಗಳು ಕೊನೆಯ ಬಾರಿಗೆ ನೀಡಿದ ಅಭಿಮಾನದ ಹೆಸರಲ್ಲಿ ಹಿಂಸೆಯ ಮೂಟೆಯನ್ನು ಅವರು ತಮ್ಮೊಂದಿಗೆ ಒಯ್ಯಬೇಕಾಯಿತು. ಈ ಬಗೆಯ ಪ್ರತಿಕ್ರಿಯೆಗಳು ರಾಜ್‌ಕುಮಾರ್ ಅವರ ವ್ಯಕ್ತಿತ್ವಕ್ಕೆ ತೀರಾ ವಿರುದ್ಧವೇ ಆಗಿದ್ದವು. ಜೊತೆಗೆ ಅವಮಾನಕರವೂ ಆದದ್ದು.

೨.೪. ಭಾಷೆ ಹಾಗೂ ಸಾಹಿತ್ಯದೊಂದಿಗಿನ ನಂಟು

ನಾಡುನುಡಿಯ ಬಗ್ಗೆ ಡಾ.ರಾಜ್ ಅವರಲ್ಲಿದ್ದ ಬದ್ಧತೆಯನ್ನು ಎಲ್ಲರೂ ಒಪ್ಪುವಂಥದ್ದು. ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ ಪ್ರಾರಂಭದಿಂದಲೂ ರಾಜಕುಮಾರ್ ಕನ್ನಡತನವನ್ನು ಉಳಿಸಿ-ಬೆಳೆಸಿಕೊಂಡು ಬಂದಿದ್ದರು. ಕನ್ನಡ ನೆಲ-ಜಲ-ಭಾಷೆಯನ್ನು ಪ್ರೀತಿಸಿ, ಗೌರವಿಸಿ ಪೂಜಿಸಿದರು. ತನ್ನೆಲ್ಲಾ ಸಾಧನೆಗಳನ್ನು ಕನ್ನಡ ಭಾಷೆಯ ಮೂಲಕವೇ ಸಾಧಿಸಿದರು. ಅವರ ಚಿತ್ರಗಳಲ್ಲಿ ಒಂದಲ್ಲ ಒಂದು ಸನ್ನಿವೇಶದಲ್ಲಿ ಅದನ್ನು ವ್ಯಕ್ತ ಪಡಿಸಿದರು. ''ಕನ್ನಡ ನಾಡು ಹಾಗೂ ಜನತೆಯನ್ನು ಐದು ದಶಕಗಳಕಾಲ ಕನ್ನಡದ ಮೇಷ್ಟ್ರಾಗಿ ಕೃಷಿ ನಡೆಸಿದರು. "ಕನ್ನಡದ ಜನತೆ ಅವರನ್ನು ನಂಬಿದ್ರು, ರಾಜಕುಮಾರ್ ಅವರು ಜನತೆಯನ್ನು ನಂಬಿದ್ರು, ಕನ್ನಡ ನೆಲವ ಬಿಟ್ಟು ಅನ್ಯ ನೆಲವಿಲ್ಲ ಎನ್ನುತ್ತಾ ತನ್ನೆಲ್ಲಾ ಸಾಧನೆ, ಭವಿಷ್ಯ, ಗುರಿಯನ್ನು ಇಲ್ಲಿಯೇ ಕಂಡುಕೊಂಡರು.[೬]"

ಶ್ರದ್ಧೆ-ಭಕ್ತಿ-ಜವಾಬ್ದಾರಿಯಿಂದ ಕನ್ನಡದ ಉತ್ತಮ ಕಥೆ ಕಾದಂಬರಿಗಳನ್ನು ಚಲನ ಚಿತ್ರವನ್ನಾಗಿ ಪರಿವರ್ತಿಸಿದ್ದರಿಂದ ಉತ್ತಮ ಕಾದಂಬರಿಕಾರರು, ಕಥೆಗಾರರು ಬೆಳಕಿಗೆ ಬರುವಂತಾಯಿತು. ಸಾಹಿತಿಗಳು ಮತ್ತು ಅವರ ಸಾಹಿತ್ಯ ಸುಲುಭವಾಗಿ ಜನಸಮುದಾಯಕ್ಕೆ ಅರ್ಥವಾಗುವಂತಾಯಿತು. ಅವರ ಹಲವಾರು ಪೌರಾಣಿಕ ಹಾಗೂ ಸಾಮಾಜಿಕ ಚಿತ್ರಗಳಲ್ಲಿ ಸಂಸ್ಕೃತಿ, ಹಿರಿಮೆ, ಗರಿಮೆ, ನಿಸರ್ಗ-ನಿನಾದ, ಪುರಾಣ, ದೇಶಭಕ್ತಿ ಮತ್ತು ಐತಿಹಾಸಿಕತೆಯನ್ನು ಹಲವಾರು ರೂಪಗಳಲ್ಲಿ ಮೂರ್ತೀಕರಿಸಿದ್ದಾರೆ. ಕನಕ, ಪುರಂದರ, ಕಂಬಾರ, ಪ್ರಹ್ಲಾದ, ಪುಲಿಕೇಶಿ, ಮಯೂರ, ಕೃಷ್ಣದೇವರಾಯ, ವೀರಕೇಸರಿಯಂತಹ ಚಿತ್ರಗಳ ಮೂಲಕ ರಾಜಕುಮಾರ್ ಅವರನ್ನು ಅಕ್ಷರಸ್ಥ ಮತ್ತು ಅನರಕ್ಷರಸ್ಥ ಎರಡು ಸಮುದಾಯಗಳು ಅರ್ಥೈಸಿಕೊಳ್ಳುವಂತಾಯಿತು. ಈ ಮೂಲಕ ಅವರು ಹುಟ್ಟು, ಹಾಕಿದ ಭಾಷೆಯ ಗೇಯತೆ ಸತ್ವ ಸಾಮೂಹಿಕವಾಗಿ ವೃದ್ಧಿಸಿ ಕನ್ನಡ ಭಾಷೆ ಉಳಿದು ಬೆಳೆದಿದೆ. ಅವರ ಕಂಠದಿಂದ ಹರಿದು ಬಂದಿರುವ ಅನುರೂಪವಾದ ಹತ್ತಾರು ಗೀತೆಗಳು ನಾಡನ್ನು ಸಾಂಸ್ಕೃತಿಕವಾಗಿ ಕಟ್ಟಲು ನೆರವಾಗಿದೆ.

ಬಹುಶಃ ರಾಜಕುಮಾರ್ ಅವರಷ್ಟು ಸ್ಫುಟವಾಗಿ, ಸ್ವಚ್ಛವಾಗಿ ಕನ್ನಡ ಭಾಷೆಯನ್ನು ಉಚ್ಚರಿಸುವ ನಟರು ಮತ್ತೊಬ್ಬರು ಸಿಗಲಾರರು. ಈ ನಾಡನ್ನು ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಬಲಿಷ್ಟವಾಗಿ ನಿರ್ಮಿಸುವುದಕ್ಕಿಂತ ಸಾಂಸ್ಕೃತಿಕವಾಗಿ ನಿರ್ಮಾಣ ಮಾಡುವುದು ಅಷ್ಟೇ ಮುಖ್ಯವಾಗಿರುತ್ತದೆ. ಇಂಥ ಕೆಲಸವನ್ನು ರಾಜ್‌ಕುಮಾರ್ ಚಿತ್ರಗಳು ಯಶಸ್ವಿಯಾಗಿ ನಿರ್ವಹಿಸಿವೆ.

ಸಾಹಿತಿಗಳ ಕಚ್ಚಾಟದಲ್ಲಿ ಗೋಕಾಕ್ ಚಳವಳಿ ದಾರಿತಪ್ಪಿದಾಗ ಚಳವಳಿಯನ್ನು ಕೈಹಿಡಿದವರು. ರಾಜ್‌ಕುಮಾರ್‌ರು. ಇಲ್ಲಿ ದೊರೆತ ರಾಜಕೀಯ ವರ್ಚಸ್ಸು, ನಾಯಕತ್ವವನ್ನು ಸುಲಭವಾಗಿ ತಿರಸ್ಕರಿಸಿ, ಕನ್ನಡಿಗರನ್ನೇ ನಂಬಿಕೊಂಡು ಬದುಕಿ ಬಾಳಿದ ರಾಜ್‌ಕುಮಾರ್ ಅಂಥವರನ್ನು ಎಲ್ಲಿಂದ ಹುಡುಕಿ ತರಲು ಸಾಧ್ಯ.

``ತಾವು ನೀಡಿದ, ಮಾಡಿದ್ದ, ಉತ್ತಮ ಕೆಲಸ ಕಾರ್ಯಗಳು ಪ್ರಚಾರಕ್ಕೆ ಬರಲಿ ಎಂದು ಯಾವತ್ತೂ ಆಶಿಸಿದವರಲ್ಲ. ಎಡಗೈನಲ್ಲಿ ನೀಡಿದ ನೆರವು ಬಲಗೈಗೆ ತಿಳಿಯಬಾರದು ಎನ್ನುವುದು'' ರಾಜ್‌ಕುಮಾರ್ ಅವರ ನಿಲುವಾಗಿತ್ತು. ನನ್ನ ಹುಟ್ಟೂರು ಕರ್ನಾಟಕ. ನನ್ನ ತಾಯ್ನುಡಿ ಕನ್ನಡ ನನ್ನ ಉಸಿರು ಕನ್ನಡ, ಕನ್ನಡಿಗರು ನನ್ನ ಅನ್ನದಾತರು. ನಾಡು ನುಡಿಯ ಅಭಿವೃದ್ಧಿಗಾಗಿ ಸರ್ವತ್ಯಾಗಕ್ಕೂ ಸಿದ್ಧ, ನನ್ನ ಅಭಿಮಾನಿ ದೇವರುಗಳು ತೋರುವ ಹಾದಿಯಲ್ಲಿ ನಡೆಯಲು ಬದ್ಧ'' ಎನ್ನುವಂತಹ ನುಡಿಗಳು ರಾಜಕುಮಾರ್ ಅವರಿಂದ ಬರಲು ಮಾತ್ರಸಾಧ್ಯ. ಕರ್ನಾಟಕ ಏಕೀಕರಣಗೊಳ್ಳಲು ನಡೆದ ಹೋರಾಟ ಹಾಗೂ ಏಕೀಕರಣ ಪೂರ್ಣವಾಗಬಾರದೆಂದು ನಡೆಸಿದ ಸಣ್ಣತನಗಳನ್ನು ಸೂಕ್ಷ್ಮವಾಗಿ ಗಮನಿಸಿದ ಕುವೆಂಪು ಅವರು ಬರವಣಿಗೆಗಳ ಮೂಲಕ ಕನ್ನಡೇತರರ ಸಂಚುಗಳಿಗೆ ಅಂಕುಶವಿಡತೊಡಗಿದರು.

``ಅ.ನ.ಕೃ. ಬಿ.ಎಂ.ಶ್ರೀ, ಹುಯಿಲಗೋಳ ನಾರಾಯಣ, ಆಲೂರು ವೆಂಕಟರಾಯರು, ಮುಂತಾದವರು ಕನ್ನಡದ ಉಳಿವಿಗೆ ಟೊಂಕ ಕಟ್ಟಿ ಹೋರಾಟ ನಡೆಸಿದರು, ಈ ಕಡೆ ಸದ್ದು ಗದ್ದಲವಿಲ್ಲದೆ ರಾಜಕುಮಾರ್ ಕಲೆಯನ್ನು ಕಾಯಕವನ್ನಾಗಿಸಿಕೊಂಡು ತಮಗರಿವಿಲ್ಲದಂತೆಯೇ ಕನ್ನಡ ಪ್ರಜ್ಞೆ ಮೂಡಿಸುವಂತಹ ಕೆಲಸ ಮಾಡುತ್ತಿದ್ದರು''. ರಣಧೀರ ಕಂಠೀರವ, ಕೃಷ್ಣದೇವರಾಯ ಬಬ್ರುವಾಹನ, ವೀರಕೇಸರಿಯಂತಹ ಐತಿಹಾಸಿಕ ಚಿತ್ರಗಳು ಕನ್ನಡಿಗರ ಜಾಗೃತಿಗೆ ಪ್ರೇರಣೆ ನೀಡಿದವು. ಇಂತಹ ಚಿತ್ರಗಳಲ್ಲಿ ಇವರು ವಹಿಸಿದ ಪಾತ್ರಗಳು ಕನ್ನಡ ನೆಲದ ಹೆಚ್ಚಿನ ವೀರಪುರುಷರ ಪೌರುಷದ ಪಾತ್ರಗಳೇ ಆಗಿದ್ದವು.

ಈ ದೃಷ್ಟಿಯಲ್ಲಿ ಗಮನಿಸಿದಾಗ ಭಾಷೆಯ ಶ್ರೀಮಂತಿಕೆಗೆ, ನಾಡಿನ ಹಿರಿಮೆ-ಗರಿಮೆಗೆ ರಾಜ್‌ಕುಮಾರ್ ಅವರ ಸಿನಿಮಾಗಳು ಅಮೂಲ್ಯ ಕೊಡುಗೆ ನೀಡಿವೆ. ಪ್ರತಿಷ್ಟೆ ಹಾಗು ಹೆಮ್ಮೆಯ ಪ್ರತೀಕವಾಗಿದ್ದ ರಾಜ್‌ಕುಮಾರ್ ಅವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಅಘೋಷಿತ ವಕ್ತಾರರಾಗಿದ್ದರಲ್ಲದೆ. ಭಾಷೆ, ನೆಲ, ಜನದ ಪ್ರಶ್ನೆ ಬಂದಾಗ ತೋರುತ್ತಿದ್ದ ಕಾಳಜಿಯನ್ನು ಸಂಘಟಿಸಿದ್ದು ಬಹುದೊಡ್ಡಸಾಧನೆ. ತಮ್ಮ ವೃತ್ತಿ ಜೀವನದಲ್ಲಿ ನಟನೆ ಮತ್ತು ನೈಜತೆಯ ನಡುವೆ ಕಂದಕವಿಲ್ಲದೆ ಬದುಕಿದರು. ಇಂದಿನ ರಾಜಕೀಯ ಜಗಜಟ್ಟಿಗಳ ವರಸೆಗಳನ್ನು ಗಮನಿಸಿರೆ ಇಡೀ ರಾಜಕೀಯ ವಲಯವೇ ಈ ಮೇರು ವ್ಯಕ್ತಿತ್ವದ ಮುಂದೆ ಸಪ್ಪೆಯಾದುದು ನಿಜ.

೧೨ನೇ ಶತಮಾನದ ಬಸವಣ್ಣನವರನ್ನು ಹೊರತು ಪಡಿಸಿದರೆ ರಾಜಕುಮಾರ್ ಅವರನ್ನು ಮಾತ್ರ ಈ ನಾಡಿನ ಜನತೆ 'ಅಣ್ಣಾ' ಎಂದು ಸಂಭೋದಿಸಿರುವುದನ್ನು ಗಮನಿಸಿದರೆ ರಾಜ್‌ಕುಮಾರ್ ಅವರು ಈ ನಾಡಿಗೆ ಭರವಸೆಯ ಬೆಳಕಾಗಿದ್ದರು. ಚಳವಳಿಯನ್ನು ಹುಟ್ಟುಹಾಕಬಲ್ಲ ಶಕ್ತಿಯಾಗಿದ್ದರು. ತಮ್ಮ ವೃತ್ತಿಜೀವನದಲ್ಲಿ. ಯಾವುದೇ ಒಂದು ಪಾತ್ರಕ್ಕೆ ಜಾತಿ-ಮತ-ಪಂಥಗಳಿಗೆ ಅಂಟಿಕೊಂಡವರಲ್ಲ. ಅವರ ಚಿತ್ರಗಳಲ್ಲಿಯಾಗಲಿ, ಅಂತರಂಗದಲ್ಲಿಯಾಗಲಿ ಭಕ್ತಿ ಎಂಬ ಮಾಯೆ ಕೋಮುವಾದದತ್ತ ಮುಖಮಾಡಲಿಲ್ಲ. ತಮ್ಮ ದುಡಿಮೆಯ ಹಣವನ್ನು ಸಾಮಾಜಿಕ ಕೆಲಸ ಕಾರ್ಯಗಳಿಗೆ ಬಳಸಿದಂತೆ ಧಾರ್ಮಿಕ ಕೆಲಸ ಕಾರ್ಯಗಳಿಗೆ ಬಳಸಲಿಲ್ಲ. ದೇಗುಲೀಕರಣದ ಮೂಲಕ ಕೋಮುವಾದವನ್ನು ವೈಭವೀಕರಿಸುತ್ತಿರುವ ಇಂದಿನ ದಿನಗಳಲ್ಲಿ ರಾಜ್‌ಕುಮಾರ್ ಅವರು ಜಾತಿ ಮತಗಳ ಮಧ್ಯೆ ಸಾಮರಸ್ಯವನ್ನು ಮೂಡಿಸುವುದರ ಮೂಲಕ ಬಾಂಧವ್ಯದ ಬೆಸುಗೆ ಹಾಕಿದರು. ಹಾಗಾಗಿ ರಾಜಕುಮಾರ್ ಅವರು ಹಲವಾರು ಮೌಲ್ಯಗಳ ಜೀವಂತ ನಿಧಿಯಾಗಿದ್ದರು. ರಂಗ ಭೂಮಿಯು ಅವರ ನಾಲಿಗೆ, ಮನಸ್ಸು, ದೇಹವನ್ನು ಅಗ್ನಿದಿವ್ಯದಲ್ಲಿ ಹಾಯಿಸಿ ಸಂಸ್ಕರಿಸಿ, ಶುದ್ಧಿಕರೀಸಿ ಕಳುಹಿಸಿ ಕೊಟ್ಟಿತ್ತು. ಅಪಭ್ರಂಶವನ್ನು ದುರ್ಬೀನು ಹಾಕಿ ಹುಡುಕಿದರೂ ಸಿಗದಂತೆ ತಯಾರು ಮಾಡಿತ್ತು. ಬೇಡರ ಕಣ್ಣಪ್ಪನಾಗಿ ತೆರೆಗೆ

ಬರುವ ಮುನ್ನವೇ ಭಾಷೆ ಮತ್ತು ಸಂಗೀತವನ್ನು ಸಿದ್ಧಿಸಿಕೊಂಡಿದ್ದ ಸುದೈವಿ. ಆ ಕಾಲ ಘಟ್ಟದಲ್ಲಿ ಭಾಷೆ ಹಾಗೂ ಸಂಗೀತ ತಿಳಿಯದವನು ನಟರಾಗಲು ಸಾಧ್ಯವೇ ಇರಲಿಲ್ಲ. ಭಾಷೆ ಮತ್ತು ಸಂಗೀತ ಎರಡನ್ನು ಅಂತರ್ಗತಮಾಡಿಕೊಂಡಿದ್ದ ರಾಜ್ ಬೇಡರಕಣ್ಣಪ್ಪ ಚಿತ್ರದಿಂದ ಮೊದಲುಗೊಂಡು ಇತ್ತೀಚಿನ ಶಬ್ದವೇದಿ ಚಿತ್ರದವರೆಗೂ ಎಲ್ಲಿಯೂ ಭಾಷೆಯನ್ನು ತಪ್ಪಾಗಿ ನುಡಿದಿದ್ದಿಲ್ಲ[೯].

ರಾಜಕುಮಾರ್ ಅವರು ಕನ್ನಡಿಗನೊಬ್ಬ ತಾನು ಕನ್ನಡಿಗ ಎಂದು ಆತ್ಮವಿಶ್ವಾಸದಿಂದ ಮತ್ತು ಹೆಮ್ಮೆಯಿಂದ ಗುರುತಿಸಿಕೊಳ್ಳುವುದನ್ನು ಕಲಿಸಿದರು. ಅವರು ಜನತೆಗೆ ನೈತಿಕ ಪಾಠವನ್ನು ಕಲಿಸಿದ್ದು ಬಹಳ ಸರಳ ಮಾರ್ಗದ ಮೂಲಕ. ಇಂಥ ವ್ಯಕ್ತಿತ್ವವು ಅಭಿವ್ಯಕ್ತಿಯಲ್ಲಿ ತೊಡಗಿಕೊಂಡಾಗ ಅದು ಸಹಜವಾಗಿಯೇ ಬೆಳೆಯಿತು. ''ರಾಜಕುಮಾರ್ ಅವರು ಗೋಕಾಕ್ ಚಳವಳಿಯಲ್ಲಿ ಬಾಗವಹಿಸಿದ್ದು ಹಾಗೆಯೇ. ತಾತ್ವಿಕವಾಗಿ ಅದರ ಲಾಭ-ನಷ್ಟಗಳನ್ನು ಲೆಕ್ಕಹಾಕಲಿಲ್ಲ. ಕನ್ನಡದ ಸಾರಸತ್ವಲೋಕದ ಹಿರಿಯರು, ಕಿರಿಯರು, ವಿದ್ವಾಂಸರು ಕನ್ನಡದ ನಿಲುವುಳ್ಳ ಜನಸಾಮಾನ್ಯರು ಧ್ವನಿ ಎತ್ತಿರುವಾಗ ತಾನು ಸಹ ಅವರೊಡನೆ ಧ್ವನಿಗೂಡಿಸಬೇಕೆಂಬುದು ಮಾತ್ರ ಅವರ ನಿರ್ಧಾರವಾಗಿತ್ತು.[೧೦]'' ಜೊತೆಗೆ ಕನ್ನಡ ಭಾಷೆಗೆ ಶಾಲಾ ಪಠ್ಯಕ್ರಮದಲ್ಲಿ ಪ್ರಥಮ ಸ್ಥಾನ ದೊರೆಯ ಬೇಕೆನ್ನುವುದು ಅವರ ನಿಲುವಾಗಿತ್ತು. ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟ ನಡೆಸುವ ಸಂದರ್ಭದಲ್ಲಿ ಅವರ ವರ್ತನೆ ಮಾತು, ವ್ಯವಹಾರ ಎಲ್ಲವು ಎಲ್ಲರಿಗೂ ಮಾದರಿಯಾಗಿತ್ತು. ವಿನಯ, ವಿಶ್ವಾಸಪೂರ್ವಕ ಮಾತುಗಳಿಂದಲೇ ಕನ್ನಡಕ್ಕೆ ಸಾರ್ವಭೌಮ ಸ್ಥಾನಬೇಕೆಂದು ಆಗ್ರಹಿಸಿದರು.

ರಾಜ್‌ಕುಮಾರ್ ಅವರು ಒಬ್ಬ ಉತ್ತಮ ನಟರಷ್ಟೆ ಆಗಿರದೇ ಉತ್ತಮ ಗಾಯಕರಾಗಿ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದವರು. ಅವರ ಪ್ರತಿಭೆಗೆ ಹುಡುಕಿಕೊಂಡು ಬರದ ಪ್ರಶಸ್ತಿ ಗೌರವಗಳಿಲ್ಲ. ಪದ್ಮಭೂಷಣದಿಂದ ಮೊದಲುಗೊಂಡು ಕರ್ನಾಟಕರತ್ನ, ಕನ್ನಡ ವಿಶ್ವವಿದ್ಯಾಲಯವು ನೀಡಿರುವ 'ನಾಡೋಜ' ಪ್ರಶಸ್ತಿ. ಕೇಂದ್ರ ಸರ್ಕಾರದ 'ದಾದ ಸಾಹೇಬ್ ಫಾಲ್ಕೆ' ಪ್ರಶಸ್ತಿಯವರೆಗೆ ನೂರಾರು ಪ್ರಶಸ್ತಿಗಳು ಮುಡಿಗೇರಿವೆ. ಇವರು ೧೫ ಬಾರಿ ರಾಜ್ಯಪ್ರಶಸ್ತಿಗಳನ್ನು ಪಡೆದಿರುವುದಲ್ಲದೆ ತಾವು ಅಭಿನಯಿಸಿದ ೧೪ ಚಿತ್ರಗಳು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿವೆ. ಅಲ್ಲದೆ. ೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ನೀಡಿದ ಗೌರವ 'ಡಾಕ್ಟರೇಟ್' ಪದವಿ, ಹೊರನಾಡಿನ (ಯು.ಎಸ್.ಎ.) 'ಕಿಂಟಕಿ ಕರ್ನಲ್' ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಾಗಿ ಹೊರಹೊಮ್ಮಿದ್ದಾರೆ. ಈ ನಿಟ್ಟಿನಲ್ಲಿ ನೋಡುವುದಾದರೆ ರಾಜಕುಮಾರ್ ಅವರು ಭಾಷೆ ಮತ್ತು ಸಾಹಿತ್ಯವನ್ನು ಅಪಾರವಾಗಿ ತಿಳಿದುಕೊಂಡಿದ್ದರು. ತಮ್ಮ ಚಿತ್ರಗಳಲ್ಲಿ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಇದ್ದ ಅಭಿಮಾನವನ್ನು ಅಬಿವ್ಯಕ್ತಗೊಳಿಸಿದ್ದಾರೆ. ತಮ್ಮ ಚಿತ್ರಗಳ ಶತದಿನೋತ್ಸವದಂಥಹ ಸಮಾರಂಭಗಳಲ್ಲಿ ಸಾಹಿತಿಗಳನ್ನು ಗೌರವಿಸುವ ಪದ್ಧತಿಯನ್ನು ರಾಜ್‌ಕುಮಾರ್ ಅವರು ಇಟ್ಟುಕೊಂಡಿದ್ದರು.

೨.೫ ನಾಡು ನುಡಿಯ ಸಂಕೇತವಾಗಿ ಡಾ.ರಾಜಕುಮಾರ್

ಕರ್ನಾಟಕ ಏಕೀಕರಣಕ್ಕೆ ಮುನ್ನ ನೆರೆಯ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ಕೇರಳ ಪ್ರದೇಶಗಳಲ್ಲಿ ಕನ್ನಡದ ಪ್ರದೇಶಗಳು ಹರಿದು ಹಂಚಿ ಹೋಗಿದ್ದವು. ಏಕೀರಕರಣದ ನಂತರ ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ ಅಧಿಕವಾಗಿದ್ದರೂ ನೆರೆರಾಜ್ಯಗಳ ಭಾಷಾ ಪ್ರಭಾವ ಅಧಿಕವಾಗಿತ್ತು. ಸರ್ಕಾರದ ಮಟ್ಟದಲ್ಲಿಯೂ ಭಾಷೆ ಸಂಸ್ಕೃತಿಯನ್ನು ಸಮಗ್ರವಾಗಿ ಕಟ್ಟುವ ಕೆಲಸ ಮಂದಗತಿಯಲ್ಲಿ ಸಾಗಿತ್ತು. 'ಕನ್ನಡ-ಕನ್ನಡಿಗ-ಕರ್ನಾಟಕ' ಎಂಬ ಸಮಗ್ರ ಭಾವನೆಯನ್ನು ಜನಮನದಲ್ಲಿ ಬಿತ್ತಿ ಕರ್ನಾಟಕವನ್ನು ಬಲಿಷ್ಟವಾಗಿ ಕಟ್ಟಬೇಕಾದ ಅನಿವಾರ್ಯತೆ ಅಂದು ಎದ್ದು ಕಾಣುತಿತ್ತು. ಈ ಸಮಯದಲ್ಲಿ ಉದಯವಾದುದ್ದು ರಾಜ್‌ಯುಗ.

ರಾಜ್‌ಕುಮಾರ್ ಅವರ ಪ್ರಥಮ ಚಿತ್ರ ಬೇಡರ ಕಣ್ಣಪ್ಪ ತೆರೆಗೆ ಬಂದಿದ್ದು ಮತ್ತು ರಾಜ್ಯ ಏಕೀಕರಣಗೊಂಡಿದ್ದು ತುಸು ಹೆಚ್ಚು ಕಡಿಮೆ ೨-೩ ವರುಷಗಳ ಅಂತರದಲ್ಲಿಯೇ. ಈ ಸಮಯದಲ್ಲಿ ಕನ್ನಡದ ಸೊಗಡನ್ನು ಬಲ್ಲವರಾಗಿದ್ದ ರಾಜಕುಮಾರ್ ಅವರು ಕನ್ನಡತನವನ್ನು ಎತ್ತಿಹಿಡಿಯುವ ಚಿತ್ರಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳತೊಡಗಿದರು. ಇದರಿಂದಾಗಿ ಅವರ ಚಿತ್ರಗಳು ಭಾವನಾತ್ಮಕವಾಗಿ ಎಲ್ಲಾ ಕನ್ನಡಿಗರು ಒಂದಾಗಲು ಶ್ರಮಿಸಿದವು. ನಾಡಿನ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳನ್ನು ಒಂದು ಗೂಡಿಸಿದವು. ರಾಜ್ಯಾದ್ಯಂತ ಕನ್ನಡಮಯ ವಾತವರಣವನ್ನು ಇವು ನಿರ್ಮಿಸತೊಡಗಿದವು. ಶಿಕ್ಷಿತರ ಸಂಖ್ಯೆ ಪ್ರತಿಶತ ೧೫:೨೦ ರಷ್ಟಿದ್ದ ಆ ಕಾಲದಲ್ಲಿ ಭಾಷೆಯನ್ನು ಹಳ್ಳಿಹಳ್ಳಿಗಳಲ್ಲಿ ಮನೆ-ಮನಗಳಲ್ಲಿ ರೈತ-ಕೂಲಿ-ಕಾರ್ಮಿಕ, ಮತ್ತು ಮಹಿಳಾ ಕಾರ್ಮಿಕ ಸಮುದಾಯಗಳಲ್ಲಿ ಜನಪ್ರಿಯಗೊಳಿಸಿದ ಅನನ್ಯ ಸಾಧನೆ ಇವರದು. ನಮ್ಮ ಬಹುತೇಕ ಬರಹಗಾರರು. ಸಾಹಿತಿಗಳಿಗಿಂತ ಆಳವಾದ ಕನ್ನಡ ಪ್ರೇಮವನ್ನು ರಾಜ್‌ಕುಮಾರ್ ಅವರು ಚಿತ್ರಗಳ ಮೂಲಕ ಪೋಷಿಸಿ ಬೆಳೆಸಿದರು. "ಏಕೀಕೃತ ಕರ್ನಾಟಕದ ಮೊದಲ ರಾಜಕಿಯೇತರ ಸಾರ್ವಭೌಮರಾದ ರಾಜ್ ಚಿತ್ರಗಳು ಅದರಲ್ಲಿನ ಸತ್ವಯುತ ಪಾತ್ರಗಳು ಆದರ್ಶ ಕನ್ನಡಿಗರ ಭಾವನೆಯಲ್ಲಿ ಸಾಹಿತಿ ಬರಹಗಾರರಿಗಿಂತ ಉತ್ತಮವಾಗಿ ರಾಜ್‌ಕುಮಾರ್ ಅವರ ನೇತೃತ್ವದ ದೃಶ್ಯಮಾಧ್ಯಮ ಪರಿಣಾಮಕಾರಿಯಾದ ಕೊಡುಗೆ ನೀಡಿತು.

ರಾಜ್‌ಕುಮಾರ್ ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ತೀರಾ ಹಿಂದುಳಿದವಲಯದಿಂದ ಬಂದವರು. ಹೆಚ್ಚಾಗಿ ತಿಳಿದಿದ್ದು ಕಲೆಯೆಂಬ ಬದುಕಿನ ಮೂಲಕ. ಜಾತಿ ವರ್ಗ ವ್ಯವಸ್ಥೆಯ ಕರಾಳತೆ ಇರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ತಳಸಮುದಾಯದಿಂದ ಬಂದ ರಾಜ್‌ಕುಮಾರ್ ದೊಡ್ಡ ಪ್ರತಿಭೆಯಾಗಿ ಹೊರಹೊಮ್ಮಿದ್ದು ದೊಡ್ಡಸಾಧನೆ. ಜಾತಿಯ ಹಿನ್ನೆಲೆ, ಶ್ರೀಮಂತಿಕೆಯ ಹಿನ್ನೆಲೆ, ಶಿಕ್ಷಣದ ಒತ್ತಾಸೆಗಳಿಲ್ಲದೆ. ಕೇವಲ ಪ್ರತಿಭೆ ಶ್ರಮ, ಸಾಧನೆ, ಸಂಕಲ್ಪಗಳಿಂದ ವ್ಯವಸ್ಥೆಯ ಕುರಿತ ನಿಯಮಗಳನ್ನು ಎದುರುಸಿ ಬೆಳೆದಿದ್ದು ಗಮನಾರ್ಹವಾದುದು. ಅವರು ಕಲೆಯನ್ನು ಕಸುಬನ್ನಾಗಿಸಿ ಹಸಿವಿಗೆ ಉತ್ತರವನ್ನು ಹುಡುಕ ತೊಡಗಿದರು. ಇಂತಹ ನೀತಿಯಿಂದ ಇವರನ್ನು 'ಬಂಗಾರದ ಮನುಷ್ಯ' ಎನ್ನುವುದಕ್ಕಿಂತ 'ಬೆವರಿನ ಮನುಷ್ಯ'ನೆಂದು ಕರೆದಿರುವ ವಿಮರ್ಶಕರಾದ ಬರಗೂರು ರಾಮಚಂದ್ರಪ್ಪನವರ ಮಾತು ಸೂಕ್ತವಾಗಿಯೇ ಇದೆ.

ತಮ್ಮ ಎಲ್ಲಾ ಬಹುತೇಕ ಚಿತ್ರಗಳಲ್ಲಿ ಕಾಯುವ, ಪೊರೆಯುವ ಮಾತಾ-ಪಿತೃ-ಸಹೋದರ ವಾತ್ಸಲ್ಯ, ಕಾಯಕನಿಷ್ಠೆ ಭಕ್ತಿ, ತ್ಯಾಗ, ಮುಂತಾದ ಆದರ್ಶಗಳನ್ನು ಪ್ರತಿನಿಧಿಸುವ ಪಾತ್ರಗಳನ್ನೇ ಅಭಿನಯಿಸುತ್ತಾ ಬಂದರು. ಭಕ್ತ ಕನಕದಾಸನಾಗಿ, ಬಸವಣ್ಣನಾಗಿ, ಮಯೂರನಾಗಿ, ಕಣ್ಣಪ್ಪ, ಭಕ್ತ ಕಂಬಾರ, ಕೃಷ್ಣ ದೇವರಾಯ, ಪುಲಿಕೇಶಿ, ಶ್ರೀರಾಘವೇಂದ್ರರಾಯರು ಮುಂತಾದ ಪಾತ್ರಗಳ ಮೂಲಕ ರಾಜ್‌ಕುಮಾರ್ ಕನ್ನಡದ ರಾಷ್ಟ್ರೀಯತೆಯನ್ನು ತನ್ನದೇ ಆದ ರೀತಿಯಲ್ಲಿ ಮೂರ್ತೀಕರಿಸಿದರು. ಶಾಲಾ ಪಠ್ಯಗ್ರಂಥಗಳಲ್ಲಿ ಅಡಗಿಹೋಗಿದ್ದ ಈ ಎಲ್ಲಾ ಪಾತ್ರಗಳನ್ನು ತೆರೆಯ ಮೇಲೆ ಜೀವಂತವಾಗಿ ಕಟ್ಟಿಕೊಟ್ಟರು, ನಾಡಿನ ಬಗೆಗಿನ ಅರಿವನ್ನು ಬದುಕಿನ ಅಂತರಾಳಕ್ಕೆ ಇಳಿಸಿದರು. ಪಾತ್ರವೇ ತಾವಾಗಿ ಪುರಾಣ ಪುಣ್ಯ ಪುರುಷರನ್ನು ರಾಜಮಹಾರಾಜರನ್ನು, ನಾಡಿನ ಸಂಸ್ಕೃತಿಯನ್ನು ಕಣ್ಣಮುಂದೆ ತಂದು ನಿಲ್ಲಿಸುವ ಸಾಮಾರ್ಥ್ಯ ಹೊಂದಿದ್ದ ರಾಜ್‌ಕುಮಾರ್ ಜನತೆಯನ್ನು ಮಂತ್ರ ಮುಗ್ಧರನ್ನಾಗಿಸಿದರು.

ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಐಕ್ಯಗೊಳಿಸಿದ್ದು ಕನ್ನಡ ಭಾಷೆಯೇ ಆದರೂ ಏಕೀಕರಣದ ಕನಸನ್ನು ಬಿತ್ತಿದವರು, ಹಂಚಿದವರು ಸಾಂಸ್ಕೃತಿಕ ಕ್ಷೇತ್ರದ ನಾಯಕರೇ. ಇಂದು ಕುಟುಂಬಗಳಲ್ಲಿ ತಂದೆ-ತಾಯಿ-

ಸಹೋದರ-ಸಹೋದರಿ, ನೆರೆಹೊರೆಯವರು ಹೇಗಿರಬೇಕು, ಅವರ ಮಾನವೀಯ ಸಂಬಂಧಗಳ ಸ್ವರೂಪ ಎಂತಹದ್ದು, ಎನ್ನುವುದನ್ನು ಅವರ ಚಿತ್ರಗಳು ಕಟ್ಟಿಕೊಟ್ಟಿವೆ. ನೌಕರ- ಮಾಲೀಕ-ಜಾತಿ-ಮತ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಮುಂತಾದ ಮಾನವಾಚರಣೆಗಳ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರ.

ಕನ್ನಡಿಗರು ತಮ್ಮನ್ನು ತಾವು ಕನ್ನಡಿಗರೆಂದು ಗುರ್ತಿಸಿ ಕೊಳ್ಳುವಂತಾಗಲು ಹೆಚ್ಚಿನ ಕೊಡುಗೆ ನೀಡಿದವರು ರಾಜ್‌ಕುಮಾರ್. ಇವರ ಪೌರಾಣಿಕ ಚಿತ್ರಗಳಲ್ಲಿ ಸಾಮಾಜಿಕ ನೆಲಗಟ್ಟು ಕಂಡು ಬಂದರೆ. ಸಾಮಾಜಿಕ ಚಿತ್ರಗಳಲ್ಲಿ ಪೌರಾಣಿಕ ಶೋಭೆ ಕಾಣುತಿತ್ತು. ಇದು ಕಲಾವಿದನಲ್ಲಿ ಕಾಣಸಿಗುವ ಅಸಾಮಾನ್ಯಗುಣ. ಸಾಹಿತ್ಯದ ಮೂಲಕ ನಾಡನ್ನು ಕಟ್ಟಿದ ಕೀರ್ತಿ ಕುವೆಂಪು, ಬೇಂದ್ರೆ, ಕುಮಾರವ್ಯಾಸರಂಥಾದವರೆ ಸಿನಿಮಾಗಳ ಮೂಲಕ ಕನ್ನಡಪರ ಚಿಂತನೆ, ಸಂಚಲನವನ್ನುಂಟು ಮಾಡಿದ ಕೀರ್ತಿ ರಾಜ್ ಅವರದ್ದು. ಅ.ನ.ಕೃ. ಕುವೆಂಪು ಅವರು ಕನ್ನಡದ ಓದುಗರನ್ನು ಬೆಳೆಸಿದರೆ, ರಾಜ್‌ಕುಮಾರ್ ಅವರು ಚಿತ್ರ ಪ್ರೇಮಿಗಳನ್ನು ಬೆಳೆಸಿದರು. ಈ ನಿಟ್ಟಿನಲ್ಲಿ ರಾಜ್‌ಕುಮಾರ್ ಅವರು 'ರಾಜಪ್ರತಿಭೆ'ಯೆಂದು ಕರೆಯದೆ ಪ್ರಜಾಪ್ರತಿಭೆಯೆಂದು ವಿರ್ಮಶಕರಾದ ಬರಗೂರು ರಾಮಚಂದ್ರಪ್ಪನವರ ಅಬಿಪ್ರಾಯ. ರಾಜ ಎನ್ನುವುದು ಊಳಿಗಮಾನ್ಯ ವ್ಯವಸ್ಥೆಯ ಉನ್ನತ ಶ್ರೇಣಿಯನ್ನು ಮಾತ್ರ ತಿಳಿಸುತ್ತದೆ. 'ಪ್ರಜಾ' ಎನ್ನುವುದು ಎಂದೆಂದಿಗೂ ಜನ ಸಾಮಾನ್ಯರೊಂದಿಗೆ ಸಂವಾದಿಸುತ್ತದೆ.[೧೧]" ಹಾಗಾಗಿ ಇವರಲ್ಲಿ ಕಲಾವಿದ ಕಾಣುತ್ತಾನೆ. ಕವಿ ಮಾತನಾಡುತ್ತಾನೆ. ಆಧ್ಯಾತ್ಮಿ ಆನಂದಿಸುತ್ತಾನೆ. ರಾಜ್‌ಕುಮಾರ್ ಅವರು ಕೇವಲ ಒಬ್ಬ ನಟರಷ್ಟೆ ಆಗಿರಲಿಲ್ಲ. ಅವರು ಈ ನಾಡಿನ ಸಾಂಸ್ಕೃತಿಕ ರಾಯಬಾರಿಯಾಗಿದ್ದರು. ತಮ್ಮ ಚಿತ್ರಗಳ ಮೂಲಕ ನಾಡಿನ ಜನತೆಗೆ ನೈತಿಕಪಾಠ ಹೇಳಿದ ಕನ್ನಡದ ಮೇರು ಪ್ರತಿಭೆಗೆ ತಕ್ಕಂತೆ ಗೌರವ, ಅಂತಸ್ತು, ಪ್ರಶಸ್ತಿಗಳು ಸಾಲುಸಾಲಾಗಿ ಹರಿದು ಬಂದಿದ್ದರೂ ಸಹಿತ ಹಿಗ್ಗಲಿಲ್ಲ ಕುಗ್ಗಲಿಲ್ಲ. ಕನ್ನಡ ಚಿತ್ರರಂಗಕ್ಕೆ ಅವರು ತಂದೊಡ್ಡಿರುವ ಅಸಾಧಾರಣ ಮಾರುಕಟ್ಟೆ ಮೌಲ್ಯ.... ಇತ್ಯಾದಿ ಒಬ್ಬ ವ್ಯಕ್ತಿ ಜೀವನದಲ್ಲಿ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಇವರು ಜ್ವಲಂತ ಸಾಕ್ಷಿಯಾಗಿದ್ದಾರೆ. ಈ ನಾಡಿನ ಮಧ್ಯಮ ಹಾಗೂ ಕೆಳವರ್ಗಗಳಿಗೆ ಒಂದು ಜೀವನಾದರ್ಶ ಕಟ್ಟಿ ಕೊಟ್ಟ ರಾಜ್‌ಕುಮಾರ್ ಅವರು ಕನ್ನಡದ ಸಾಂಸ್ಕೃತಿಕ ಪರಿಕರಗಳನ್ನು ತನ್ನ ವೃತ್ತಿ ಮತ್ತು ಪ್ರವೃತ್ತಿಯ ಮಜಲುಗಳನ್ನಾಗಿ ಸ್ವೀಕರಿಸಿದ ಸ್ವಾಭಿಮಾನಿ ಕನ್ನಡಿಗ. ಕನ್ನಡ ನಾಡಿನ ಜನರ ರಕ್ತ ನರನಾಡಿಗಳಲ್ಲಿ ಬೆರೆತು ಹೋಗಿರುವ ರಾಜಕುಮಾರನೊಳಗೆ ತಮ್ಮನ್ನು ತಾವು ಕಂಡು ರಾಜಕುಮಾರನಂತೆ ಆಗಿ ಸಂಭ್ರಮಿಸುತ್ತಿರುವುದು ಈ ನಾಡಿನ ಚರಿತ್ರೆ. ರಾಜ್‌ಕುಮಾರ್ ಅವರು ಕಂಡ ಐದು ದಶಕಗಳ ಚಿತ್ರರಂಗದ ಬದುಕು ಖಂಡಿತವಾಗಿಯೂ ಒಂದು ವಿಶ್ವವಿದ್ಯಾಲಯದ ಪಠ್ಯಪುಸ್ತಕಕ್ಕೆ ಅಳವಡಿಸಬಹುದಾಗಿರುವ ಸರಕು ಅವರದು. ಕನ್ನಡ ಚಿತ್ರರಂಗದ ಮುಕ್ಕಾಲುಭಾಗ ಸ್ವತಃ ಕಣ್ಣಿಂದ ನೋಡಿರುವ ರಾಜ್‌ಕುಮಾರ್ ಅವರು ಒಬ್ಬ ನಡೆದಾಡುವ ರಂಗಕೋಶ ಎಂದರೆ ತಪ್ಪಾಗಲಾರದು.[೧೨]

ರಾಜ್‌ಕುಮಾರ್ ಅವರು ತಮ್ಮ ಚಿತ್ರಗಳ ಮೂಲಕ ನೇರವಾಗಿ ಜನರನ್ನು ತಲುಪಿದವರು. ಮಾಧ್ಯಮಗಳು ಎಂದೂ ಇವರಿಗೆ ಸೇತುವೆಯಾಗಲಿಲ್ಲ. ಇವರ ಪ್ರತಿಭೆಗೆ ತಕ್ಕ ಪುರಸ್ಕಾರ, ಗೌರವ, ಅಂತಸ್ತು ದೊರೆತ ನಂತರ ಸರಳತೆ ಅವರ ಕೈಹಿಡಿಯಿತು. ಶ್ರೀಮಂತಿಕೆಯ ಸೋಂಕು ಸ್ಪರ್ಶಿಸದಂತೆ ಸದಾ ಜಾಗೃತರಾಗಿದ್ದರು. ಅವರ ಆತ್ಮದ ಒಳಗೆ 'ಮುತ್ತರಾಜ' ನೆಂಬ ಮನುಷ್ಯ ಸದಾ ಜಾಗೃತ ಪ್ರಜ್ಞೆಯಾಗಿ ಅಂತರಂಗದ ಬೆಳಕಾಗಿದ್ದರು. ಅಂತರಂಗದಲ್ಲಿ ಮುತ್ತುರಾಜನಿದ್ದರೆ ಬಹಿರಂಗದಲ್ಲಿ ಸಹೋದರ ವರದರಾಜು ಮತ್ತು ಪತ್ನಿ ಪಾರ್ವತಮ್ಮನವರಿದ್ದರು. ರಾಜ್‌ಕುಮಾರ್ ಅವರು ತಾವು ಬದುಕಿರುವವರೆಗೂ ಈ ನಾಡಿಗೆ ಭರವಸೆಯ ಬೆಳಕಾಗಿದ್ದರು, ಒಂದು

ಚಳವಳಿಯನ್ನು ರೂಪಿಸಬಲ್ಲ ಶಕ್ತಿಯಾಗಿದ್ದರು. ಕನ್ನಡವನ್ನು ಪ್ರಶ್ನಿಸುವವರ ಭಯವಾಗಿ, ನೆಲ ಜಲ ಭಾಷೆಗೆ ಧಕ್ಕೆಯೊದಗಿದಾಗ ಹೋರಾಡಬಲ್ಲ ಕ್ರಾಂತಿಯ ಸಂಕೇತವಾಗಿದ್ದರು. ಇವರು ಅಭಿನಯಿಸಿದ ಪಾತ್ರಗಳು ಈ ನೆಲೆದ ಸಂಸ್ಕೃತಿಯ ಸಾರವನ್ನು ಹೀರಿ ಬೆಳೆದಂತವಾಗಿದ್ದವು ಇವರು ಯಾವುದೇ ಚಿತ್ರದಲ್ಲಿ ಅಶ್ಲೀಲತೆ, ಮಧ್ಯಪಾನ, ಧೂಮಪಾನದತಂಹ ಸನ್ನಿವೇಶಗಳಿಲ್ಲದೆ ಸಮಾಜಮುಖಿಯಾಗಿರುವುದು ವಿಶೇಷ.

ರಾಜ್‌ಕುಮಾರ್ ಅವರು ಮತ್ತು ನಾಡಸೇವೆ ವಿಚಾರ ಬಂದಾಗ ಅಥವಾ ಪ್ರಶ್ನೆ ಎದುರಾದಾಗ ಅವರ ಚಿತ್ರಗಳೇ ಉತ್ತರವಾಗಿ ನಿಲ್ಲುತ್ತವೆ. ನಾಡು-ನುಡಿಯ ಸ್ವಾಭಿಮಾನವನ್ನು ಪ್ರತಿಯೊಬ್ಬರ ಅಭಿಮಾನವನ್ನಾಗಿ ಅವರ ಚಿತ್ರಗಳು ರೂಪಿಸಿವೆ. ತೆಲುಗು ಭಾಷೆಯಲ್ಲಿ ಎನ್.ಟಿ.ಆರ್. ತಮಿಳು ಭಾಷೆಯಲ್ಲಿ ಎಂ.ಜಿ.ಆರ್. ಅಂತಹವರು ಸಿನಿಮಾರಂಗದಲ್ಲಿ ಖ್ಯಾತ ನಾಯಕರಾಗಿ ರಾಜಕೀಯ ಕ್ಷೇತ್ರದಲ್ಲಿ ರಾಜಕೀಯ ಚುಕ್ಕಾಣಿ ಹಿಡಿದರೆ. ರಾಜ್‌ಕುಮಾರ್ ಅವರು ಮಾತ್ರ ರಾಜಕಾರಣವನ್ನು ಗೌರವಿಸುತ್ತಾ ವಿನಮ್ರವಾಗಿ ತಿರಸ್ಕರಿಸಿ ದೂರ ಉಳಿದರು. ಇಂತಹ ವ್ಯಕ್ತಿತ್ವದಿಂದಾಗಿಯೇ ಇವರು ಸಾಂಸ್ಕೃತಿಕ ವಲಯದಲ್ಲಿ ರಾಜನಾಗಿಯೇ ಮಿಂಚಿ ಮರೆಯಾದರು. ರಾಜ್‌ಕುಮಾರ್ ಅವರನ್ನು ನಾಡಿನ ಜನತೆ ಸಾಂಸ್ಕೃತಿಕ ನಾಯಕನೆಂದು ಪರಿಬಾವಿಸಿದೆ. ಅವರ ಸಾಕ್ಷಾತ್ಕಾರ, ಕಸ್ತೂರಿ ನಿವಾಸ, ಮಣ್ಣಿನಮಗ, ಚಂದವಳ್ಳಿಯ ತೋಟ, ಭಕ್ತಕನಕದಾಸ, ಭಕ್ತ ಕುಂಬಾರ, ಬಂಗಾರದ ಮನುಷ್ಯ, ಗಂಧದಗುಡಿ, ಸಂಪತ್ತಿಗೆ ಸವಾಲ್ ಮುಂತಾದ ಚಿತ್ರಗಳು ಜನತೆಯಲ್ಲಿ ಸೃಜನ ಶೀಲತೆ, ಸಂಸ್ಕೃತಿ, ಸಂಸ್ಕಾರವನ್ನು ಮೂಡಿಸಿವೆ. "ಆಧ್ಯಾತ್ಮಿಕ ಚಿತ್ರಗಳು ಚಾರಿತ್ರಿಕ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿದಿವೆ. ಜಾನಪದದ ಆಶಯಗಳನ್ನು ಅರ್ಥೈಸಿ ಕೊಳ್ಳುವಂತೆ ಕಟ್ಟಿ ಕೊಟ್ಟಿದ್ದಾರೆ. ಕನ್ನಡ ಚರಿತ್ರೆಯನ್ನು ಸುಲುಭವಾಗಿ ಅರ್ಥೈಸಿ ಕೊಳ್ಳುವಂತೆ ಕಟ್ಟಿ ಕೊಟ್ಟಿದ್ದಾರೆ. ಕನ್ನಡ ಚರಿತ್ರೆಯನ್ನು ಜನ ಕೋಟಿಗೆ ತಲುಪಿಸುವಂತಹ ಕೆಲಸವನ್ನು ಒಂದು ಅಭಿಯಾನದ ರೀತಿಯಲ್ಲಿ ಮಾಡಿರುವುದು ಚಾರಿತ್ರಿಕ ಕೊಡುಗೆಯೆಂದು ಹೇಳಬಹುದು. ಹಾಗಾಗಿ ಕನ್ನಡ ಪರಂಪರೆಯನ್ನು ಜನಸಮಾನ್ಯರ ಮಟ್ಟಕ್ಕೆ ಇವರಷ್ಟು ಸಮರ್ಥವಾಗಿ ತಲುಪಿಸಿದವರು ಮತ್ಯಾರು ಇಲ್ಲವೆಂದು.[೧೩] ಹೇಳಬಹುದಾಗಿದೆ.

ರಾಜ್‌ಕುಮಾರ್ ಅವರು ಚಿತ್ರರಂಗದಲ್ಲಿ ಪ್ರಬಲವಾಗಿ ಬೆಳೆಯುತ್ತಾ ಹೋದಂತೆಲ್ಲಾ ಎಲ್ಲಾ ಭಾಷೆಗಳ ನಟರು ನಿರ್ಮಾಪಕರು ನಿರ್ದೇಶಕರುಗಳೊಂದಿಗೆ ಆತ್ಮೀಯತೆ ಏರ್ಪಟ್ಟಿತು. ಇವರು ಬಯಸಿದ್ದರೆ ನೆರೆರಾಜ್ಯಗಳ ಬಾಗಿಲು ತೆರೆಯುತ್ತಿದ್ದವು. ಆದರೆ ರಾಜ್‌ಕುಮಾರ್ ಅಭಿಮಾನಿದ ಹೊಸ್ತಿಲು ದಾಟಿ ಯಾರ ಮನೆಯ ಬಾಗಿಲು ತೆರೆಯಲಿಲ್ಲ. ಇಲ್ಲಿಯೇ ಉಳಿದು ಇಲ್ಲಿಯೇ ಬೆಳೆದರು. ತಮ್ಮ ಅಸ್ತಿತ್ವವನ್ನು ಕನ್ನಡ ಭಾಷೆ ಸಂಸ್ಕೃತಿಯ ಮೂಲಕ ಕಂಡು ಕೊಂಡರು. "ಚಿತ್ರರಂಗದ ಉಳಿವಿಗೆ ಅದರ ಬೆಳವಣಿಗೆಗೆ ಮತ್ತು ಕನ್ನಡದ ಪ್ರಸರಣೆಗೆ ಕಾರಣರಾದ ರಾಜ್‌ಕುಮಾರ್ ಇಂದು ನಮ್ಮೊಂದಿಗೆ ಇಲ್ಲವಾದರೂ ಅವರು ನೆಟ್ಟ ಸಸಿ ಹೆಮ್ಮರವಾಗಿ ಬೆಳೆದು ಸಮೃದ್ಧವಾಗಿ ಫಲನೀಡುತ್ತಿದೆ." ಎನ್ನುವ 'ದೇವನೂರು ಮಹಾದೇವ' ಅವರು ಮಾತು ಸತ್ಯಕ್ಕೆ ಹತ್ತಿರವಾಗಿದೆ[೧೪]. ಸಮುದಾಯ ಅರ್ಥೈಸಿಕೊಂಡ ಜನಪ್ರಿಯ ಬಿಂಬವನ್ನೇ ರಾಜ್‌ಕುಮಾರ್ ಅವರು ಅಭಿವ್ಯಕ್ತಿಸಿದ್ದರಿಂದ ಸಹಜವಾಗಿಯೇ ಸಮೂಹ ಅವರನ್ನು ಸ್ವೀಕರಿಸಿತು. ತಾಯಿಯನ್ನು ಆರಾಧಿಸುವ ವಾತ್ಸಲ್ಯಮಯಿ ಮಗ, ಜನಸಮುದಾಯ ಮೆಚ್ಚುವಂತಹ ಸಾಹಸ, ತ್ಯಾಗ, ನಿಷ್ಠೆ, ಸ್ತ್ರೀ ಸಮುದಾಯ ಇಷ್ಟಪಡುವ ಒಲವಿನ ಅಣ್ಣಾ ಇತ್ಯಾದಿಯಾಗಿ ಅಭಿನಯಿಸಿರುವುದು ಅವರ ಜನಪ್ರಿಯತೆಯ ವಿಸ್ತರಣೆಗೆ ಮೂಲ ಕಾರಣವಾಯಿತು. ಬಂಗಾರದ ಮನುಷ್ಯ ಚಿತ್ರವನ್ನು ಕಂಡ ಅನೇಕ ಸಹೋದರಿಯರು ತಮ್ಮ ಸಹೋದರರಲ್ಲಿ 'ರಾಜೀವಪ್ಪ'ನನ್ನು ಹುಡುಕಿದ ಉದಾಹರಣೆಗಳಿವೆ. 'ಜೀವನ ಚೈತ್ರ'

ಚಿತ್ರದಿಂದ ಪ್ರಭಾವಿತರಾದ ಜನತೆ ಹೆಂಡದಂಗಡಿ, ಸಾರಾಯಿ ಅಂಗಡಿಗಳನ್ನು ತೆರವುಗೊಳಿಸಿದ ಪ್ರಸಂಗಗಳು ನಮ್ಮ ಕಣ್ಣ ಮುಂದಿವೆ. ಈ ಹಿನ್ನೆಲೆಯಲ್ಲಿ ರಾಜ್‌ಕುಮಾರ್ ಅವರು ಏಕೆ ಸಮುದಾಯದ ಸಾಂಸ್ಕೃತಿಕ ನಾಯಕರಾದರು ಎನ್ನುವ ಪ್ರಶ್ನೆಗೆ ಉತ್ತರ ಅಡಗಿದೆ.

೨೦೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ರಾಜ್‌ಕುಮಾರ್ ಅವರ ಅಭಿನಯ ನೋಡುಗರಿಗೆ ಮಾತ್ರವಲ್ಲದೆ ವಿಮರ್ಶಕರಿಗೆ ವಿಸ್ಮಯವೆನಿಸದಿರದು. ಅಂತರಾಷ್ಟ್ರೀಯ ಚಲನ ಚಿತ್ರೋತ್ಸವವೊಂದರಲ್ಲಿ ರಾಜ್‌ಕುಮಾರ್ ಅವರ ಚಿತ್ರವನ್ನು ವೀಕ್ಷಿಸಿದ ಆಂಗ್ಲ ವಿಮರ್ಶಕರೊಬ್ಬರು "ಇಂಥಹ ಮಹಾನ್ ಕಲಾವಿದರನ್ನು ನಮ್ಮ ಜೀವಮಾನದಲ್ಲಿ ನೋಡಿಯೇ ಇಲ್ಲ. ಹಾಲಿವುಡ್‌ನಲ್ಲಿ ೨೦-೩೦ ಸಿನಿಮಾ ಪೂರೈಸುವುದರೊಳಗೆ ನಾಯಕ ನಟರು ತಮ್ಮ ತಾರಾ ವರ್ಚಸ್ಸನ್ನು ಕಳೆದು ಕೊಂಡಿರುತ್ತಾರೆ. ಆದರೆ ಇಲ್ಲಿ ಈ ನಟ ಬಹಳ ಭಿನ್ನವಾದ ಶೈಲಿಯನ್ನು ರೂಪಿಸಿ ಕೊಂಡಿದ್ದಾರೆ. ಇಂತಹ ನಟರನ್ನು ಮುಂದೆ ನಾವು ನೋಡಲಾರೆವು"[೧೫] ಎಂದು ಉದ್ಗರಿಸಿದರಂತೆ.

ರಾಜ್‌ಕುಮಾರ್ ಎಲ್ಲಾ ಬಗೆಯ ಪಾತ್ರಗಳಿಗೆ ಜೀವತುಂಬಿ ದೀರ್ಘಕಾಲ ಚಿತ್ರರಂಗದಲ್ಲಿ ಉಳಿದಂತೆ ತೆಲುಗು ಭಾಷೆಯಲ್ಲಿ ಎನ್.ಟಿ.ಆರ್. ಅವರಂತೆ ಎಲ್ಲಾ ಬಗೆಯ ಪಾತ್ರಗಳಿಗೆ ನಾಗೇಶ್ವರರಾವ್ ಹೊಂದಾಣಿಕೆ ಯಾಗಲೇ ಇಲ್ಲ. ತಮಿಳು ಚಿತ್ರರಂಗದಲ್ಲಿ ಶಿವಾಜಿಗಣೇಶನ್ ಅವರಂತೆ ಎಂ.ಜಿ.ಆರ್. ಭಕ್ತಿ ಪಾತ್ರಗಳಲ್ಲಿ ಮಿಂಚಲು ಸಾಧ್ಯವಾಗಲೇ ಇಲ್ಲ. ಆದರೆ ರಾಜ್ ಎಲ್ಲಾ ಬಗೆಯ ಪಾತ್ರಗಳಿಗೆ ಜೀವಂತುಂಬಿ, ಗುರುಹಿರಿಯರು, ಸಾಹಿತಿ, ಅಭಿಮಾನಿಗಳಿಗೆ ಗೌರವ ತೋರುವಂತಹ ಮತ್ತು ತ್ರಿಕರಣ ಶುದ್ಧಿಯಿಂದ ವರ್ತಿಸುವ ಗುಣ ಇವರಲ್ಲಿ ಕಂಡುಬರುವ ಮತ್ತೊಂದು ವಿಶೇಷ.

ರಾಜ್‌ಕುಮಾರ್ ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ಕನ್ನಡ ರಂಗಭೂಮಿಯಲ್ಲಿ ದೊಡ್ಡ ದಿಗ್ಗಜರಾಗಿದ್ದರಲ್ಲದೆ, ಭಾಷೆಯ ಬಗ್ಗೆ ತುಂಬಾ ಕಾಳಜಿಹೊಂದಿದ್ದರು. ರಾಜ್‌ಕುಮಾರ್ ಅವರ ಭಾಷೆ ಮತ್ತು ಸಂಸ್ಕೃತಿಯನ್ನು ಶುದ್ಧೀಕರಿಸಿದವರು ಇವರೇ. ಸದಾ ಕಾಲ ರಾಜ್‌ಕುಮಾರ್ ಅವರಿಗೆ ಜೀವನ ವಿಧಿ-ವಿಧಾನಗಳ ಬಗ್ಗೆ ತಿಳುವಳಿಕೆ ನೀಡಿದರಲ್ಲದೆ ಅವರ ಜೀವನದಲ್ಲಿ ನಂದಾ ದೀಪವಾದರು. ಇದರ ಪರಿಣಾಮವಾಗಿಯೇ ರಾಜ್ ಭಾಷೆಯ ಮೇಲೆ ಹಿಡಿತ ಸಾಧಿಸಿದ್ದರು. ಸಾಹಿತಿ-ಬರಹಗಾರರಿಗೆ ಹೆಚ್ಚಿನ ಗೌರವ ಮನ್ನಣೆ ನೀಡುವ ಪದ್ಧತಿ ಅಳವಡಿಸಿಕೊಂಡಿದ್ದರು. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಸಾಹಿತಿಗಳ ಒಡನಾಟದಿಂದಾಗಿ ಸಾಹಿತಿಗಳ ಬಗ್ಗೆ ಅಭಿಮಾನ ಭರವಸೆ ಮೂಡಲು ಕಾರಣವಾಯಿತು. ಪ್ರಾರಂಭದಿಂದಲೂ ತನ್ನ ಚಿತ್ರಗಳಲ್ಲಿ ನಾಡಿನ ಬರಹಗಾರರ ಉತ್ತಮ ಕಾದಂಬರಿಗಳನ್ನು ಚಲನಚಿತ್ರಗಳನ್ನಾಗಿ ಪರಿವರ್ತಿಸಿ ತೆರೆಯ ಮೇಲೆ ತಂದರು. ಕುವೆಂಪು. ಬೇಂದ್ರೆಯಂತಹ ಹಿರಿಯ, ಕಿರಿಯ ಸಾಹಿತಿಗಳ ಕಾವ್ಯರಚನೆಯನ್ನು ಚಿತ್ರಗೀತೆಗಳನ್ನಾಗಿ ರೂಪಿಸಿ ಜನಪ್ರಿಯಗೊಳಿಸುವುದರ ಮೂಲಕ ಅವರಿಗೊಂದು ಸಾಂಸ್ಕೃತಿಕ ವ್ಯಕ್ತಿತ್ವ ಮೂಡಿಸಿದರು. ರಾಜ್‌ಕುಮಾರ್ ಅವರು ಸಿನಿಮಾ ಮಾಧ್ಯಮದ ಮೂಲಕ ಅಕ್ಷರಸ್ಥ, ಅನಕ್ಷರಸ್ಥ, ಕೂಲಿಕಾರ್ಮಿಕ, ರೈತ, ಮಹಿಳಾ ಸಮುದಾಯ ಮುಂತಾದ ಎಲ್ಲಾ ವಲಯಗಳನ್ನು ಯಶಸ್ವಿಯಾಗಿ ತಲುಪಿದರು. ದೇಶ, ಕಾಲ, ಭಾಷೆಯನ್ನು ಮೀರಿ ಬೆಳೆದರು. ಅದರ ಮೂಲಕ ನಾಡಿನ ಸಂಸ್ಕೃತಿಯನ್ನು ಬಿತ್ತರಿಸಿದರು. ಇದರಿಂದಾಗಿ ನಾಡಿನ ಮೂಲೆ ಮೂಲೆಯಲ್ಲಿಮನೆ ಮನೆಗಳಲ್ಲಿ ಹಿರಿಯರಲ್ಲಿ ಕಿರಿಯರಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಕನ್ನಡದ ಇಂಪು-ಸೊಂಪು ಹರಡುವಂತಾಯಿತು. ರಾಜ್‌ಕುಮಾರ್ ಚಿತ್ರಗಳ ಮೂಲಕ ನಿಜವಾದ 'ಕನ್ನಡದ ಮೇಸ್ಟ್ರಾಗಿ' ಆ ಕೆಲಸವನ್ನು ಪೂರ್ಣಗೊಳಿಸಿದರು. 'ಕನ್ನಡ ಕನ್ನಡಿಗ', ಕರ್ನಾಟಕ ಎಂಬ ಮೂರು ಅಂಶಗಳನ್ನು ರಾಜಕುಮಾರ್ ಅವರ ವ್ಯಕ್ತಿತ್ವ ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ಅವರೊಬ್ಬ ನಾಡು ನುಡಿಗೆ ಹೇಳಿಮಾಡಿಸಿದ ಸಂಕೇತವೆ ಸರಿ.

ಟಿಪ್ಪಣಿಗಳು

೧. ಗಂಗಾಧರ ಮೊದಲಿಯಾರ್ (೧೯೯೮) *ಕನ್ನಡ ಸಿನಿಮಾ ಇತಿಹಾಸದ ಪುಟಗಳಲ್ಲಿ* ಪುಟ. ೧

೨. ***ಅದೇ.,*** ಪುಟ.೨

೩. ಪರಮೇಶ್ವರ ಗುರುಸ್ವಾಮಿ., (೧೯೯೮) ***ಕನ್ನಡ ಚಿತ್ರರಂಗದ ಪ್ರಾರಂಭದ ಹೆಜ್ಜೆ ಗುರುತುಗಳು,*** ಪುಟ ಸಂಖ್ಯೆ ೫೦ ೫೩

೪. ***ಅದೇ.,*** ಪುಟ ಸಂಖ್ಯೆ ೫೩

೫. ಪ್ರಹ್ಲಾದ್‌ರಾವ್ ಆ.ನಾ, (೨೦೦೫) **ಬಂಗಾರದ ಮನುಷ್ಯ,** ಪುಟ ೩

೬. ಗಣಪತಿ ಕೆ., (೨೦೦೬) ***ಕನ್ನಡ ಮುತ್ತಿನ ಕಥೆ ಡಾ.ರಾಜ್‌ಕುಮಾರ್,*** ಪು ೧೬೭

೭. ***ಅದೇ.,*** ಪುಟ ೧೭

೮. ಸಂಪತ್ ಕುಮಾರ್., (೨೦೦೭) ***ಅಣ್ಣಾ ನೀನಿಲ್ಲದ ಹೊತ್ತು,*** ಪು ೮

೯. ವಿಜಯ ಕರ್ನಾಟಕ ದಿನಪತ್ರಿಕೆ., ೧೩.೪.೨೦೦೬ ನಾಗತೀಹಳ್ಳಿ ಚಂದ್ರಶೇಖರ್ ಅವರ ಲೇಖನ ಪು.೬

೧೦. ಗೌರಿಸುಂದರ್., (ಸಂ) (೨೦೦೬) ***ಕನ್ನಡ ಕಲಾಕಂಠೀರವ ಡಾ.ರಾಜಕುಮಾರ್,*** ಪು. ೯೪

೧೧. ರಾಮಚಂದ್ರಪ್ಪ ಬರಗೂರು., (೨೦೦೩) ***ಸಂಸ್ಕೃತಿ ಶ್ರಮ ಮತ್ತು ಸೃಜನ ಶೀಲತೆ,*** ಪು. ೪೭೮

೧೨. ಗಣಪತಿ. ಕೆ., ***ಮೇಲಿನದೆ,*** ಪುಟ ಸಂಖ್ಯೆ ೧೭೮

೧೩. ***ಅದೇ .,*** ಪು ೧೫೭

೧೪. ಲಕ್ಷ್ಣಣ್‌ರಾವ್ ಕೆ., (ಸಂ) (೨೦೦೭) ***ಸಾಂಸ್ಕೃತಿಕ ಜೀವನದಿ ಡಾ.ರಾಜ್,*** ಪು ೪

೧೫. ದಿಕ್ಸೂಚಿ ಮಾಸದಿನಪತ್ರಿಕೆ ಮೇ (೨೦೦೬) ಪು. ೩

ಅಧ್ಯಾಯ ಮೂರು

ಗೋಕಾಕ್ ಚಳವಳಿಯ ಹುಟ್ಟು ಮತ್ತು ಸ್ವರೂಪ

ಅಧ್ಯಾಯ ಮೂರು

ಗೋಕಾಕ್ ಚಳವಳಿಯ ಹುಟ್ಟು ಮತ್ತು ಸ್ವರೂಪ

ಶೋಷಣೆ ಇರುವ ತನಕ ಹೋರಾಟ, ಚಳವಳಿಗಳು ನಿಲ್ಲುವುದಿಲ್ಲ ಎಂಬುದನ್ನು ಇದುವರೆಗಿನ ಮಾನವ ಚರಿತ್ರೆ ಸಾಬೀತುಪಡಿಸಿದೆ. ಹೋರಾಟಗಳನ್ನು ದೇಶಾಭಿಮಾನಿ, ದೇಶದ್ರೋಹಿ, ಸಂವಿಧಾನಾತ್ಮಕ-ಸಂವಿಧಾನತ್ಮಕ ವಿರೋಧಿ, ಕಾನೂನುರೀತಿ-ಕಾನೂನುಭಾಹಿರ, ಪ್ರಜಾತಾಂತ್ರಿಕ-ಅಪ್ರಜಾತಾಂತ್ರಿಕ ಎಂದು ವಿಂಗಡಿಸಿ ನೋಡುವ ಪ್ರವೃತ್ತಿ ಇಂದುಹೆಚ್ಚಾಗಿದೆ. ಚಳವಳಿಯೊಂದು ನ್ಯಾಯೋಚಿತವೊ ಇಲ್ಲವೊ ಎಂಬುದನ್ನು ತೀರ್ಮಾನಿಸುವುದನ್ನು ಬಿಟ್ಟು ಅದು ಕಾನೂನಿನ ಚೌಕಟ್ಟಿನೊಳಗೆ ನಡೆಯುತ್ತಿದೆಯೋ ಇಲ್ಲವೊ ಎಂದು ಪ್ರಶ್ನಿಸುವ ಪರಿಸ್ಥಿತಿ ಇಂದು ಎದುರಾಗಿದೆ. ಚಳವಳಿಗಳು ಕಾನೂನುಗಳನ್ನು ಪಾಲಿಸಬೇಕು, ಕಾನೂನು ಚೌಕಟ್ಟಿನೊಳಗೆ ನಡೆಯಬೇಕು ಎಂದು ಪ್ರಜಾಪ್ರಭುತ್ವ ಆಶಿಸುತ್ತದೆ. ಆದರೆ ಮತ್ತೊಂದು ಕಡೆ ನಮ್ಮಲ್ಲಿ ಪ್ರಭುತ್ವವೇ ಕಾನೂನುಗಳನ್ನು ಗಾಳಿಗೆತೂರುತ್ತಿದೆ. ೧೨ನೇ ಶತಮಾನದ ಶರಣ ಚಳುವಳಿಯೇ ಮೂಲಬೇಕು. ಚಳವಳಿಗೆ ನಿಚ್ಚಳ ತಾಯ್ತನ ಪಾರದರ್ಶಕತೆ ಆತ್ಮಾವಲೋಕನದ ಶಕ್ತಿ ಸೆಕ್ಯುಲರ್ ಸದ್ಗುಣಗಳನ್ನು ಪೂರ್ಣದೃಷ್ಟಿಯಿಂದ ದಕ್ಕಿಸಿಕೊಳ್ಳಲು ಇಂದಿಗೂ ಸಾಧ್ಯವಾಗುತ್ತಿಲ್ಲ.

೩.೧ ಚಳವಳಿಯ ಅರ್ಥ

ಚಳವಳಿ ಎಂಬ ಪದವು 'ಚಲನ ಮತ್ತು ವಲನ' ಎಂಬ ಎರಡು ಪದಗಳಿಂದ ಕೂಡಿದೆ. ಈ ಎರಡು ಪದಗಳು ಅಲುಗಾಟವನ್ನು ಸೂಚಿಸಿದರು. ಚಲನೆ ಎಂಬುದು ಮುಂದೆ ಸರಿಯುವುದನ್ನು ಸೂಚಿಸಿದರೆ ವಲನೆ ಎಂಬುದು ಅತ್ತಿತ್ತ ಚಲಿಸುವುದನ್ನು ಸೂಚಿಸುತ್ತದೆ. ಹೀಗಾಗಿ "ಚಳವಳಿ ಒಟ್ಟಿಗೆ ನಡೆಯುವ ಎರಡು ಬಗೆಯ ಚಲನೆಗಳನ್ನು ಹೇಳುವ ಶಬ್ದವಾಗಿದೆ. ಮೊದಲನೆಯದು ಕಾಲಾನು ಕ್ರಮದಲ್ಲಿ ಮುಂದೆ ಸಾಗುವುದಾಗಿರುತ್ತದೆ. ಎರನೆಯದು ವ್ಯಾಪ್ತಿಯನ್ನು ಸೂಚಿಸುವುದಾಗಿರುತ್ತದೆ. ಅಂದರೆ ಯಾವುದೋ ಒಂದು ಕಾರಣ ಮತ್ತು ಸಮಸ್ಯೆಯ ನಿರ್ಮೂಲನಕ್ಕೆ ಸುತ್ತಮುತ್ತಲ ಜನರನ್ನು ಒಳಗೊಂಡು ಸಂಭವಿಸುವ ಘಟನೆಯೇ ಚಳವಳಿಯಾಗಿದೆ. ಮತ್ತು ಯಾವುದೋ ಸಾಕ್ಷಾತ್ಕಾರಕ್ಕಾಗಿ ನಡೆಯುವ ಜನರ ಒಂದು ಉದ್ದೇಶ ಅಥವಾ ಆದರ್ಶದ ಚಳವಳಿಯಾಗಿದೆ"ಮತ್ತು ಯಾವುದೋ ಒಂದು ಉದ್ದೇಶ ಅಥವಾ ಆದರ್ಶದ ಸಾಕ್ಷ್ಯಾಕ್ಕಾಗಿ ನಡೆಯುವ ಜನರ ಪ್ರಜ್ಞಾಪೂರ್ವಕ ಪ್ರಯತ್ನವು ಸಹ ಹೋರಾಟವಾಗುತ್ತದೆ. ಪ್ರತಿಹಂತದಲ್ಲಿ ಒಂದು ಸಮುದಾಯವನ್ನು ವ್ಯಾಪಿಸುವುದು ಚಳವಳಿಯ ಮುಖ್ಯ ಲಕ್ಷಣ. ಇದು ತನಾಗಿಯೇ ರೂಪುಗೊಳಬಹುದು.ಹಾಗಾಗಿ ಚಳವಳಿಯು ವೈಯುಕ್ತಿಕ ಆಶೋತ್ತರಗಳನ್ನು

ಹೊಂದದೆ ಸಾಮುದಾಯಿಕ ಆ ಕಾಂಕ್ಷೆಯ ಪೂರೈಕೆಗಾಗಿ ನಡೆಯುವ ಪ್ರಯತ್ನವಾಗಿರುತ್ತದೆ. ಕಳೆದ ಹತ್ತಾರು ವರುಷಗಳಿಂದ ಕನ್ನಡದ ಹೆಸರಲ್ಲಿ ನಡೆಯುತ್ತಿರುವ ಚಳವಳಿಗಳು ಇದೆ ಸ್ವರೂಪದಲ್ಲಿ ವ್ಯಕ್ತವಾಗುತ್ತಿರುವುದರಿಂದ ಜನ ಸಾಮಾನ್ಯರು ಹಾಗೆ ಭಾವಿಸಿರುವುದು ಸಹಜವಾಗಿವೆ.

ಕನ್ನಡಿಗರೆಂದರೆ ಯಾರು? ಕನ್ನಡದಿಂದಲೇ ತಮ್ಮ ಬದುಕನ್ನು ಗ್ರಹಿಸುವವರು, ಅನನ್ಯವಾದುದನ್ನು ಈ ಮೂಲಕವೇ ಪಡೆಯುವವರು, ಇಂತಹ ಜನರು ಬದುಕನ್ನು ಹಸನುಗೊಳಿಸುವ ಕನಸನ್ನು ಹೊತ್ತ ಎಲ್ಲಾ ಆಂದೋಲನಗಳು ಕನ್ನಡ ಚಳವಳಿಗಳಾಗಿ ಗುರ್ತಿಸಿಕೊಳ್ಳುತ್ತವೆ. ಕನ್ನಡ ಭಾಷೆಯ ಹೆಸರಲ್ಲಿ ದಲಿತರು, ಕಾರ್ಮಿಕರು, ರೈತರು, ಮುಂತಾದವರು ನಡೆಸುವ ಚಳವಳಿಗಳು ಕನ್ನಡ ಚಳವಳಿಗಳಾಗಿವೆ. ಇವೆಲ್ಲ ಅದರ ಬೇರೆ ಬೇರೆ ಮುಖಗಳು ಅಷ್ಟೇ. ಜನಸಾಮಾನ್ಯರ ಬದುಕಿಗೆ ಮತ್ತು ಭಾಷೆಗೆ ಕುತ್ತು ಬಂದಾಗ, ಕಾರ್ಮಿಕರಿಗೆ, ಕೃಷಿಕರಿಗೆ ಸಮಸ್ಯೆ ಎದುರಾದಾಗ, ದಲಿತರು ಶೋಷಿತರಿಗೆ ಆತ್ಮಭಿಮಾನದ ಪ್ರಶ್ನೆ ಎದುರಾದಾಗ, ಕನ್ನಡ ಭಾಷೆಯ ಮೇಲೆ ಅನ್ಯಭಾಷೆಗಳು ಸವಾರಿ ಮಾಡಿದಾಗ ಘೋಷಣೆಗಳು ಬದಲಾಗ ಬಹುದೇ ಹೊರತು ಅಂತರ್ಯದಲ್ಲಿ ಅವೆಲ್ಲ ಜನಪರವೇ ಆದ್ದರಿಂದ ಈ ಎಲ್ಲಾ ಅಂಶಗಳಿಗೆ ಸಮಾನ ಮಹತ್ವ ನೀಡುವುದೇ ನಿಜವಾದ ಕನ್ನಡ ಚಳವಳಿಯಾಗಿದೆ.[೨]''

ಚದುರಿ ಹೋಗಿದ್ದ ಕನ್ನಡ ಭೂ ಪ್ರದೇಶಗಳು ಆಡಳಿತಾತ್ಮಕವಾಗಿ ಒಂದಾಗಿ ಐವತ್ತು ವರುಷಗಳು ಕಳೆದು ಸುವರ್ಣ ಕರ್ನಾಟಕೋತ್ಸವವನ್ನು ದಾಟಿ ಮುನ್ನೆಡೆಯುತ್ತಿರುವ ಈ ಹೊತ್ತಿನಲ್ಲಿ ನಮ್ಮ ಸಮಸ್ಯೆಗಳ ನಿವಾರಣೆಗೆ ಚಳವಳಿಗಳನ್ನು ಹೂಡಬೇಕಾದ ಅನಿವಾರ್ಯತೆ ಕನ್ನಡಿಗರದ್ದು, ಮತ್ತ್ಯಾವ ಭಾಷಿಕರಿಗೆ ಇರದ ಸ್ಥಿತಿ ನಮ್ಮದು. ಏಕೀಕರಣ ಚಳವಳಿಯ ನಂತರ ಅದೇ ಬಗೆಯಲ್ಲಿ ಅಥವಾ ಅದಕ್ಕಿಂತಲೂ ಮಿಗಿಲಾಗಿ ನಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡ ಚಾರಿತ್ರಿಕ ಕಾಲ ಘಟ್ಟವೆಂದರೆ ೧೯೮೦ರ ದಶಕದ ಗೋಕಾಕ್ ಚಳವಳಿ ಮಾತ್ರ. ಈ ಚಳವಳಿ ಜರುಗಿ ಇಂದಿಗೆ ಕಾಲುಶತಮಾನವೇ ಉರುಳಿಹೋದರು ಆದರ ಆಸ್ಮಿಯತೆಯ ಪ್ರಭಾವ ಇನ್ನು ಕಡಿಮೆಯಾಗಿಲ್ಲ.

೩.೨ ಚಳವಳಿಯ ಹುಟ್ಟು-ಸ್ವರೂಪ

ಕನ್ನಡ ಭಾಷೆ-ಸಂಸ್ಕೃತಿಯ ಮೇಲ್ಮೈಯನ್ನು ಕಾಪಾಡಲು ಮತ್ತು ಪ್ರೌಢ ಶಿಕ್ಷಣದಲ್ಲಿ ಸಂಸ್ಕೃತ ಭಾಷೆಯ ಪ್ರಭಾವನ್ನು ತಡೆದು ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡುವ ಸಲುವಾಗಿ ೧೯೮೨ರಲ್ಲಿ ಡಾ.ರಾಜ್‌ಕುಮಾರ್ ಅವರ ಮುಂದಾಳತ್ವದಲ್ಲಿ ನಡೆದ 'ಗೋಕಾಕ್ ಚಳವಳಿ' ೧೯೫೬ರ ನಂತರ ನಡೆದ ಮೊದಲ ಭಾಷಿಕ ಚಳವಳಿಯಾಗಿ ಚರಿತ್ರೆಯಲ್ಲಿ ದಾಖಲಾಗಿದೆ. ೧೯೬೦ರ ದಶಕದಲ್ಲಿ ಮೊಳಕೆಯೊಡೆದ ಕನ್ನಡ ಚಳವಳಿ ೧೯೮೦ರ ವೇಳೆಗಾಗಲೆ ಚಳವಳಿ ತಣ್ಣಗಾಗಿತ್ತು. ಈ ಸಮಯಕ್ಕಾಗಲೇ ಬೆಂಗಳೂರಿನಂಥ ನಗರಗಳಲ್ಲಿ ಕನ್ನಡಿಗ ಸ್ಥಳಿಯ ನಿರಾಶ್ರಿತನಾಗಿದ್ದ ಮತ್ತು ಕನ್ನಡ ಭಾಷೆಯ ಮೇಲೆ ಸಂಸ್ಕೃತ ಭಾಷೆಯ ಕಾರ್ಮೋಡ ದಟ್ಟವಾಗಿ ಆವರಿಸಿತ್ತು. ಆಗ ಎಚ್ಚೆತ್ತ ಕನ್ನಡಿಗರು ನಾಡಿನಾದ್ಯಂತ ಭಾಷೆಯ ಬಗ್ಗೆ ಜನರನ್ನು ಸಂಘಟಿಸಿ ಚಳವಳಿಗೆ ಮುಂದಾದರು. ಮುಂದೆ ಇದೇ ಗೋಕಾಕ್ ಚಳವಳಿ ಎಂದು ಪ್ರಸಿದ್ದಿ ಪಡೆದು ಕರ್ನಾಟಕ ಇತಿಹಾಸದಲ್ಲಿ ಚಳವಳಿಗಳ ತಾಯಿಯಾಗಿ ಗುರ್ತಿಸಿಕೊಂಡಿತು[೩]''

೧೯೫೬ರ ಏಕೀಕರಣದ ನಂತರ ಕನ್ನಡಿಗರು ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಣ ಉಸಿರು ತುಂಬುವುದನ್ನು ಕಾಣಲು ತವಕದಿಂದ ಕಾತರಿಸಿದ್ದ ಕಾಲ. ಶಿಕ್ಷಣದಲ್ಲಿ, ಆಡಳಿತದಲ್ಲಿ, ಕನ್ನಡ ಭಾಷೆಯು ಪೂರ್ಣವಾಗಿ ಬಳಕೆಯಾಗಬೇಕು, ಅದು ಶಿಕ್ಷಣದಿಂದಲೇ ಎನ್ನುವ ಮೂಲ ಆಸೆಯವನ್ನು ಕನ್ನಡಿಗರು ಹೊಂದಿದ್ದರು. ಎಲ್ಲಾ

ಕ್ಷೇತ್ರಗಳಲ್ಲಿ ಏಕರೂಪತೆಯನ್ನು ರೂಪಿಸಿ, ಕನ್ನಡಿಗರಲ್ಲಿ ಐಕತ್ಯೆ ಮೂಡಿಸುವುದು ಅಂದು ಅನಿವಾರ್ಯವಾಗಿತ್ತು. ''ಈ ಉದ್ದೇಶ ಸಾಧನೆಗಾಗಿ ಸರ್ಕಾರ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಏಕತ್ಯಾ ಸಮಿತಿ ನೇಮಕಮಾಡಿತು. ಈ ಸಮಿತಿ ಪ್ರೌಢಶಾಲಾ ಹಂತದಲ್ಲಿ ಸಂಸ್ಕೃವನ್ನು ೨ ಹಂತದಲ್ಲಿ ಕಲಿಯಲು ವ್ಯವಸ್ಥೆಮಾಡಿತು. ಈ ವ್ಯವಸ್ಥೆ ೧೯೬೩ಮತ್ತು ೧೯೭೯ರಲ್ಲಿ ಪಠ್ಯಕ್ರಮವನ್ನು ಪರಿಷ್ಕರಿಸಿದಾಗಲೂ ಮುಂದುವರೆಯಿತು.[೪]'' ಈ ಸಂಸ್ಕೃತ ಭಾಷೆಯನ್ನು ಪ್ರೌಢಾಶಾಲಾ ಹಂತದಲ್ಲಿ ಪ್ರಥಮ ಭಾಷೆಯಾಗಿ ಆರಿಸಿಕೊಂಡವರಿಗೆ ತುಂಬ ಅನುಕೂಲಗಳಿತ್ತು. ಇದರ ಪಠ್ಯವಸ್ತು ಬಹಳ ಸುಲುಭವಾಗಿತ್ತು. ಸಂಸ್ಕೃತ ಭಾಷೆಯಲ್ಲಿ ಉತ್ತರ ಬರೆಯುವ ಬದಲು ಅವರ ಮಾತೃಭಾಷೆಯಲ್ಲಿಯೇ ಉತ್ತರಿಸಬಹುದಾಗಿತ್ತು. ಇನ್ನು ಹಲವಾರು ಅನುಕೂಲಗಳಿಂದಾಗಿ ಮತ್ತು ಹೆಚ್ಚುಅಂಕಗಳನ್ನುಗಳಿಸುವ ಉದ್ದೇಶದಿಂದಲೇ ಸಂಸ್ಕೃತವನ್ನು ಆರಿಸಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗತೊಡಗಿತು. ಇದರಿಂದಾಗಿ ಪ್ರೌಢಶಾಲೆ-ಕಾಲೇಜುಗಳಲ್ಲಿ ಕನ್ನಡ ಭಾಷೆಯನ್ನು ಮೊದಲ ಭಾಷೆಯಾಗಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಗಮನೀಯವಾಗಿ ಇಳಿಯ ತೊಡಗಿತು. ಈನಡುವೆ ಸಂಸ್ಕೃತವನ್ನು ವಿದ್ಯಾರ್ಥಿಯು ಮಾಧ್ಯಮವಾಗಿ ಶಾಲೆಯಲ್ಲಿ ಕಲಿಯುವುದು ೩ವರ್ಷಮಾತ್ರ ಆದರೆ ಕನ್ನಡದ ವಿದ್ಯಾರ್ಥಿಯು ಕನ್ನಡ ಭಾಷೆಯನ್ನು ಮಾತೃಭಾಷೆಯಾಗಿ ಅಲ್ಲದೆ ಹತ್ತು ವರುಷಗಳ ಕಾಲ ತರಗತಿಯಲ್ಲಿ ಕಲಿಯತೊಡಗುತ್ತಾನೆ. ಹಾಗಾಗಿ ಕನ್ನಡ ಭಾಷೆಯನ್ನು ಮೂರುವರ್ಷ ಕಲಿತ ಸಂಸ್ಕೃತ ಭಾಷೆಯೊಂದಿಗೆ ಶಿಕ್ಷಣದಲ್ಲಿ ಸರಿಸಮನಾಗಿ ಪರಿಗಣಿಸುವುದು ಸಮಂಜಸವಲ್ಲ. ಎಂಬುದು ಪೋಷಕರ ಮತ್ತು ಶಿಕ್ಷರ ತಜ್ಞರ ಅಭಿಪ್ರಾಯವಾಯಿತು.

ಈ ನಡುವೆ ೧೯೭೮-೭೯ರಲ್ಲಿ ಪರಿಷ್ಕೃತ ಪಠ್ಯವಸ್ತು ಜಾರಿಗೆಬಂದಾಗ ತ್ರಿಭಾಷಾ ಸೂತ್ರದಂತೆ ಕನ್ನಡ ಭಾಷೆಯನ್ನು ಕನ್ನಡೇತರ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯಾಗಿ ಅಭ್ಯಸಿಸಲು ಆವಕಾಶಮಾಡಿ ಕೊಡಲಾಯಿತು. ಹಾಗೂ ಸಂಸ್ಕೃತ ಭಾಷೆಯಾಗಿ ಅಭ್ಯಸಿಸಲು ಅವಕಾಶಮಾಡಿಕೊಡಲಾಯಿತು. ಹಾಗೂ ಸಂಸ್ಕೃತದ ಸ್ಥಾನಮಾನ ಹಾಗೆ ಮುಂದುವರೆಯುವಂತಾಯಿತು. ಈಗ ಅನುಷ್ಠಾನಕ್ಕೆ ಬಂದ ವ್ಯವಸ್ಥೆ ಕನ್ನಡೇತರ ಮಕ್ಕಳಿಗೆ ಯಾವ ಹಂತದಲ್ಲಿಯೂ. ಕಡ್ಡಾಯವಾಗಿ ಕನ್ನಡ ಭಾಷೆ ಅಭ್ಯಾಸವಾಗಿ ಉಳಿಯಲಿಲ್ಲ ಈ ವ್ಯವಸ್ಥೆಯನ್ನು ಕನ್ನಡಿಗರು ಪ್ರಬಲವಾಗಿ ವಿರೋಧಿಸಿದರಲ್ಲದೆ. ಸಾರ್ವಜನಿಕ ವೇದಿಕೆಗಳಲ್ಲಿ, ಮಾಧ್ಯಮಗಳ ಮೂಲಕ ಜನ ಸಾಮಾನ್ಯರು ಸರ್ಕಾರವನ್ನು ಒತ್ತಾಯಿಸತೊಡಗಿದರು. ''ಕೂಡಲೇ ಎಚ್ಚೆತ್ತ ದೇವರಾಜ ಅರಸು ನೇತೃತ್ವದ ಕಾಂಗ್ರೇಸ್ ಸರ್ಕಾರ ಈ ಅವೈಜ್ಞಾನಿಕ ಕ್ರಮವನ್ನು ೧೯೭೯ರಲ್ಲಿ ರದ್ದು ಪಡಿಸಿತು[೫]'' ಸರ್ಕಾರದ ಈ ಕನ್ನಡ ಪರ ನೀತಿಯಂತೆ ಸಂಸ್ಕೃತ ಭಾಷಾ ಸ್ಥಾನವನ್ನು ಪ್ರಥಮ ಸ್ಥಾನದಿಂದ ತೆಗೆದು ಮೂರನೇ ಸ್ಥಾನ ಕಲ್ಪಿಸಿತು. ಸರ್ಕಾರದ ಈ ಕನ್ನಡ ಪರ ಧೋರಣೆಯಿಂದ ಕನ್ನಡ ಪರವಾದಿಗಳು ಸಂಸ್ಕೃತ ಪರವಾದಿಗಳೆಂಬ ಎರಡು ಬಣಗಳು ಸೃಷ್ಟಿಯಾದವು. ಈನಡುವೆ ಸರ್ಕಾರದ ಈ ನೀತಿಯನ್ನು ಖಂಡಿಸಿ ಸಂಸ್ಕೃತ ಪರವಾದಿಗಳು ನ್ಯಾಯಾಲಯ ಹಾಗು ಶಾಸನ ಸಭೆಗಳಲ್ಲಿ ಈ ವಿಚಾರವನ್ನು ಚರ್ಚಿಸಿ, ನ್ಯಾಯಾಲಯದಲ್ಲಿ ಪ್ರಶ್ನಿಸುವಂತೆ ಮಾಡಿದರು.

''ಹಿಂದಿನ ಸರ್ಕಾರ ಭಾಷೆಯ ವಿಚಾರದಲ್ಲಿ ತಗೆದುಕೊಂಡಿದ್ದ ನಿರ್ಣಯ ಏಕಪಕ್ಷಿಯವಾಗಿದ್ದು, ತಜ್ಞರೊಡನೆ ವ್ಯವಸ್ಥಿತವಾಗಿ ವ್ಯವಸ್ಥಿತವಾಗಿ ಸಮಾಲೋಚಿಸದೇ ತೀರ್ಮಾನ ತೆಗೆದುಕೊಂಡಿದ್ದರು. ನಾವು ಈ ಸಮಸ್ಯೆಯ ತೀರ್ಮಾನಕ್ಕೆ ಭಾಷಾತಜ್ಞರ ಸಮಿತಿಯೊಂದನ್ನು ನೇಮಿಸಿ ತೀರ್ಮಾನಿಸುವುದಾಗಿ ಸಾರ್ವಜನಿಕವಾಗಿ. ಶಾಸನಸಭೆಗಳಲ್ಲಿ ಗುಂಡುರಾವ್ ಅವರು ಹೇಳಿದುಂಟು.[೬]'' ಇದಕ್ಕೆ ಸಂಬಂಧ ಪಟ್ಟಂತೆ ''ಸರ್ಕಾರ ೧೯೮೦ ಜುಲೈ ೫ ರಂದು ಭಾಷಾ ತಜ್ಞರ ಸಮಿತಿಯನ್ನು ವಿ.ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ರಚಿಸಿ ಆಜ್ಞೆಯೊಂದನ್ನು

ಹೊರಡಿಸಿತು[೭]'' ಶಿಕ್ಷಣ ತಜ್ಞರಾಗಿದ್ದ ವಿ.ಕೃ.ಗೋಕಾಕ್ ಅವರನ್ನೊಳಗೊಂಡಂತೆ ಏಳು ಸದಸ್ಯರ ತಂಡ ಸಮಿತಿಯಲ್ಲಿ ಕಾರ್ಯ ನಿರ್ವಹಿಸುವಂತಾಯಿತು.

೩.೩ ವಿವಿಧೆಡೆಗಳಲ್ಲಿ ಪ್ರತಿಭಟನೆ ಮತ್ತು ವರದಿ ಸಲ್ಲಿಕೆ

ಭಾಷಾ ಸಮಿತಿ ರಚನೆಯಾದ ನಂತರ ಸಮಿತಿಯಲ್ಲಿ ಬಹುಪಾಲು ಸದಸ್ಯರು ''ಸಂಸ್ಕೃತಪರ ನಿಲುವುಳ್ಳ ಬ್ರಾಹ್ಮಣರ ಸಂಖ್ಯೆಯು ಆಧಿಕವೆಂದು ಕನ್ನಡಪರ ನಿಲುವುಗಳ್ಳವರಿಗೆ ಅನುಮಾನಗಳು ಬರದೇ ಇರಲಿಲ್ಲ. ಇದರಬಗ್ಗೆ ಮೊದಲ ಪ್ರತಿಭಟನೆಗಳು ಬೆಂಗಳೂರಿನಲ್ಲಿ ಕಾಣಿಸಿಕೊಂಡವು[೮]'' ಈ ಮಧ್ಯದಲ್ಲಿ ಸಮಿತಿಯು ಮೊದಲಿಗೆ ಅಭಿಪ್ರಾಯ ಸಂಗ್ರಹಣೆಗಾಗಿ ೨೩-೧೦-೧೯೮೦ರಂದು ಧಾರವಾಡಕ್ಕೆ ತೆರಳಿತು. ಆಗ ಗೋಕಾಕ್ ಅವರ ಶಿಷ್ಯರಾದ ಚಂದ್ರಶೇಖರ ಪಾಟೀಲ, ಬಸವರಾಜ ಕಟ್ಟೀಮನ, ಪಾಟೀಲ ಪುಟ್ಟಪ್ಪ. ಎಂ.ಎಂ.ಕಲುಬುರ್ಗಿ, ಚನ್ನವೀರ ಕಣವಿ, ಗುಂಜೆಟ್ಟೆ ಮೊದಲಾದವರು 'ಗೋಕಾಕರೇ ಹಿಂತಿರುಗಿ' (ಗೋಕಾಕ್‌ಗೋಬ್ಯಾಕ್) ಎಂಬ ಘೋಷಣೆಯೊಂದಿಗೆ ಪ್ರತಿಭಟಿಸಿದರು. ಸಮಿತಿ ಈ ಪ್ರತಿಭಟನೆಯ ನಡುವೆ ರಾಜ್ಯದ ನಾನಾಭಾಗಗಳಲ್ಲಿ ಸಂಚರಿಸಿ ಮಾಹಿತಿ ಸಂಗ್ರಹಿಸಿತು. ಕೆಲವು ಕಡೆ ಮಾಹಿತಿ ಸಂಗ್ರಹಣೆಗೆ ಅಡಚಣೆ ಉಂಟಾಯಿತು. ಕೆಲವು ಕಡೆ ಜನಸಾಮಾನ್ಯರಿಂದ ಮಾಹಿತಿ ಸಂಗ್ರಹಿಸಿ, ತನ್ನೆಲ್ಲಾ ಆಲೋಚನೆ, ಆಭಿಪ್ರಾಯಗಳನ್ನು ಕ್ರೂಢೀಕರಿಸಿ ಒಂದು ವ್ಯವಸ್ಥಿತವಾದ ವರದಿಯನ್ನು ಸಮಿತಿ ಸರ್ಕಾರಕ್ಕೆ ಸಲ್ಲಿಸಿತು. ಈ ಭಾಷಾ ವರಧಿಯನ್ನು ಗೋಕಾಕ್ ವರದಿ ಎಂದು ಕರೆಯಲಾಯಿತು. ಈ ವರದಿಯ ಪೂರ್ಣಅನುಷ್ಠಾನಕ್ಕಾಗಿ ಆಗ್ರಹಿಸಿ ಸರ್ಕಾರದ ವಿರುದ್ಧ ನಡೆಸಿದ ಚಳವಳಿಯನ್ನು 'ಗೋಕಾಕ್ ಚಳವಳಿ' ಎಂಬುದಾಗಿ ಮುಂದೆ ಕರೆಯಲಾಯಿತು.

ಗೋಕಾಕ್‌ರು ಮಂಡಿಸಿದ ವರದಿಯಲ್ಲಿ ಕನ್ನಡ ಭಾಷೆಗೆ ಪ್ರೌಢಶಾಲಾ ಶಿಕ್ಷಣದಲ್ಲಿ ಪ್ರಥಮಸ್ಥಾನ ನಿಗದಿಪಡಿಸಿದರೆ, ಸಂಸ್ಕೃತ ಭಾಷೆಗೆ ೩ನೇ ಸ್ಥಾನ ನಿಗದಿಪಡಿಸಿತ್ತು. ಈ ವರದಿಯು ತ್ರಿಭಾಷಾ ಸೂತ್ರದ ತಳಹದಿಯ ಮೇಲೆ ೧೫೦+೧೦೦+೫೦ ಅಂಕಗಳೆಂದು ನಿಗದಿಯಾಗಿತ್ತು. ಈ ವರದಿಯು ಒಂದು ರಾಜ್ಯಭಾಷೆಗೆ ಇರಬೇಕಾದ ಸ್ಥಾನಮಾನವನ್ನು ನಿರ್ಧರಿಸುವುದರಲ್ಲಿ ಒಂದು ಮೈಲಿಗಲ್ಲಾಯಿತು. ಅಲ್ಲದೆ ವರದಿಯಲ್ಲಿ ಸಂಸ್ಕೃತ ಭಾಷೆಯ ಮಹತ್ವವನ್ನು ಹೇಳಿದ್ದಲ್ಲದೆ, ಅದಕ್ಕೆ ಪ್ರಾದೇಶಿಕ ಭಾಷೆಯ ಮಹತ್ವ ಇರಲಾರದು ಎನ್ನುವುದನ್ನು ಎತ್ತಿ ಹಿಡಿಯಿತು.[೯]'' **''ಗೋಕಾಕ್ ವರದಿಯ ಮುಖ್ಯಶಿಫಾರಸುಗಳು ಮತ್ತು ಭಾಷಾ ಸಮಿತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕೃತಿಯನ್ನು ಪರಿಶೀಸಬಹುದು[೧೦]''**

೩.೪ ವರದಿಯ ಅನುಷ್ಠಾನದಲ್ಲಿ ವಿಳಂಬ-ಚಳವಳಿಯ ಪ್ರಾರಂಭ

ಗೋಕಾಕ್‌ರು ವರದಿಯನ್ನು ಸಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸಿದರು. ಆದರೆ ಈ ವರದಿಯನ್ನು ಅನುಷ್ಠಾನಕ್ಕೆ ತರುವ ಧೈರ್ಯವನ್ನು ಸರ್ಕಾರ ತೋರಲಿಲ್ಲ. ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆಯಾಗಿ ಮಾಡಬೇಕೆಂದು ಶಿಫಾರಸು ಮಾಡಿದ್ದಸಮಿತಿ ಶಿಕ್ಷಣದಲ್ಲಿ ಕನ್ನಡಕ್ಕೆ ದೊರೆಯಬೇಕಾಗಿದ್ದ ಪ್ರಾಶಸ್ತ್ಯವನ್ನು ನೀಡಿದ್ದರಿಂದ ಸಮಿತಿಯಬಗ್ಗೆ ಇದ್ದ ಅನುಮಾನಗಳು ಸಂಶಯಗಳು ದೂರವಾದವು. ಆದರೆ ವರದಿಯನ್ನು ಸರ್ಕಾರ ಒಪ್ಪಿಕೊಂಡು ಜಾರಿಗೊಳಿಸದೇ ವಿಳಂಬ ಧೋರಣೆ ಅನುಸರಿಸಿದ್ದರಿಂದ ಸರ್ಕಾರದ ಪ್ರಾಮಾಣಿಕತಯೆ ಬಗ್ಗೆ ಅನುಮಾನಗಳು ಪ್ರಾರಂಭವಾದವು.

ವರದಿಯಲ್ಲಿನ ಕೆಲವು ಅಂಶಗಳು ಅಲ್ಪಸಂಖ್ಯಾತರ ಹಿತಕ್ಕೆ ಧಕ್ಕೆ ತರುತ್ತವೆಂದು ಇದರಲ್ಲಿ ಕೆಲವು ತಿದ್ದುಪಡಿ ಮಾಡಬೇಕಾಗುತ್ತದೆಂದು. ಅಲ್ಪಸಂಖ್ಯಾತರ ಪರ ಸರ್ಕಾರ ಮೃದುದೋರಣೆ ಅನುಸರಿಸ ತೊಡಗಿತು. ಓಟುಗಳ

ದೃಷ್ಟಿಯಿಂದ ಸರಕಾರ ಮುಸ್ಲಿಂ ಜನಾಂಗವನ್ನು ಎದುರು ಹಾಕಿಕೊಳ್ಳಲಿಲ್ಲ. ಇದರಿಂದ ಕನ್ನಡ ಪರವಾದಿಗಳು, ಸಾಹಿತಿ-ಕಲಾವಿದರು, ಬುದ್ದಿಜೀವಿಗಳು, ಮಾಧ್ಯಮಗಳ ಮೂಲಕ ಒತ್ತಾಯಿಸಿ ಸರ್ಕಾರದ ಮೇಲೆ ಒತ್ತಡ ಹೇರಿದರು. ಇದಾವುದಕ್ಕೂ ಸರ್ಕಾರದ ಮಣಿಯಲಿಲ್ಲ. ಇದು ಸರ್ಕಾರಕ್ಕೆ ಮತ್ತು ಶಿಕ್ಷಣದ ಸಚಿವರಿಗೆ ನುಂಗಲಾರದ ಬಿಸಿತುಪ್ಪವಾಯಿತು. ಅಲ್ಲದೆ. ಸಾರ್ವಜನಿಕ ವೇದಿಕೆಗಳಲ್ಲಿ, ಶಾಸನಸಭೆಗಳಲ್ಲಿ ಹಿಂದೆ ಆಡಿದ್ದ ಮಾತನ್ನು ಮುಖ್ಯ ಮಂತ್ರಿಗಳು ನುಂಗಲಾರಂಭಿಸುದರು. ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿ ವರುಷ ಕಳೆದರೂ ಜಾರಿಗೆ ಬರಲಿಲ್ಲ. ೧೯೮೧-೮೨ ನೇ ಸಾಲಿನಿಂದ ವರದಿಯ ಒಂದು ಭಾಗ ಅನುಷ್ಠಾನಕ್ಕೆ ಬರಬೇಕಾಗಿತ್ತು ಅದು ಸಾಧ್ಯವಾಗಲಿಲ್ಲ. ೧೯೮೨ರ ಶೈಕ್ಷಣಿಕ ವರುಷದ ಪ್ರಾರಂಭದಲ್ಲಿಯೂ ಸರ್ಕಾರ ಕಾರ್ಯ ಪ್ರವೃತ್ತರಾಗದೆ ಹೋದಾಗ ಸರ್ಕಾರದ ಮೇಲೆ ಎಲ್ಲಾ ಕಡೆಗಳಿಂದಲೂ ಒತ್ತಡಗಳು ಪ್ರಾರಂಭವಾದವು. ಸಾರ್ವಜನಿಕರ ಮತ್ತು ಸಾಹಿತಿಗಳ ಪ್ರತಿಭಟನೆಗೆ ಪ್ರತಿಕ್ರಿಯಯಾಗಿ ಸರ್ಕಾರ ತಾನು ನೀಡಿದ್ದ ಕನ್ನಡದ ಆಗ್ರಮಾನ್ಯಪಟ್ಟಕ್ಕೆ ಆದೇಶ ನೀಡುವ ಆಜ್ಞೆಗೆ ತಡೆಯಾಜ್ಞೆ ನೀಡಿತು. ''ಬಹಳ ಹಿಂದಿನಿಂದಲೂ ತಾನು ಅಲ್ಪಸಂಖ್ಯಾತರ ಹಿತರಕ್ಷರನೆಂದು ವಾದಿಸುತ್ತಾ ಬಂದಿದ್ದ ಸರ್ಕಾರ ಯಾವ ಉದ್ದೇಶಸಾಧನೆಗಾಗಿ ತಾನು ರಚಿಸಿದ್ದ ಗೋಕಾಕ್ ಸಮಿತಿಯ ವರದಿಯನ್ನು ಅಂಗೀಕರಿಸಿತ್ತೋ ಆ ಉದ್ದೇಶವನ್ನು ಮರೆತು ಕನ್ನಡಿದ ಪ್ರಶ್ನೆಯನ್ನು ಬೀದಿಗಳೆದು ರಾಜಕೀಯ ಪ್ರಶ್ನೆಯನ್ನಾಗಿಸಿತು. ಯಾವಾಗ ಸರ್ಕಾರ ಸಹೃದಯ ಕನ್ನಡಿಗರ ಭಾವನೆಗಳನ್ನು ಕಡೆಗಣಿಸಿತೋ ಅಲ್ಲಿಂದ ಚಳವಳಿಗಳು ಪ್ರಾರಂಭವಾದವು. ಆಗ ಈ ಹಿಂದೆ ತಾನೇ ಒಪ್ಪಿದ ಗೋಕಾಕ್ ವರದಿಯನ್ನು ''ಸರ್ಕಾರ ಕೂಡಲೇ ಅಮಾನತ್ತಿನಲ್ಲಿಟ್ಟಿತು.'' ಮುಸ್ಲಿಮರು ಗೋಕಾಕ್ ವರದಿ ವಿರುದ್ಧ ಆಕ್ಷಪಣೆ ಎತ್ತಿದಾಗ ಸಮಾದಾನ ಪಡಿಸುವ ಯಾವ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಮುಖ್ಯಮಂತ್ರಿಗಳಾಗಲಿ, ಶಿಕ್ಷಣ ಸಚಿವರಾಗಲಿ, ವರದಿಯಲ್ಲಿ ಏನಿದೆ ಎಂದು ವಿವರಿಸುವ ಗೋಜಿಗೆ ಹೊಗಲಿಲ್ಲ. ಇದರಿಂದ ಮುಸ್ಲಿಂ ಚಳವಳಿಯು ಸರ್ಕಾರ ಮಲಗುವುದಕ್ಕೆ ಚಾಪೆ ಹಾಸಿ ಕೊಟ್ಟಂತಾಯಿತು.

ವರದಿಯನ್ನು ಸರಿಯಾಗಿ ಅರ್ಥಮಾಡಿ ಕೊಳ್ಳದ ಮುಸ್ಲಿಂ ಬಾಂಧವರನ್ನು ಕೆಲವರು ದಿಕ್ಕುತಪ್ಪಿಸಿದರು. ವರದಿಯನ್ನು ವಿರೋಧಿಸಿ ವಿಧಾನಸೌಧದ ಬಳಿ ಪ್ರದರ್ಶನ, ಧರಣಿ, ಪ್ರತಿಭಟನೆಗಳು ಎಫ್,ಎಂ,ಖಾನರ ನೇತೃತ್ವದಲ್ಲಿ ನಡೆಯತೊಡಗಿದವು. ಸರ್ಕಾರ ಆಗ ಮುಸ್ಲಿಂ ಬಾಂಧವರನ್ನು ನಿಯಂತ್ರಿಸದೇ ಕನ್ನಡಿಗರನ್ನು ಸಂತೈಯಿಸಿತು. ಇದರಿಂದ ಕನ್ನಡಪರ ಸಂಘಟನೆಗಳು ಸಾಹಿತಿ-ಕಲಾವಿದರು ಹೋರಾಟಕ್ಕೆ ಸಜ್ಜಾದರು. ಇದಾವುದಕ್ಕೂ ಸರ್ಕಾರ ಮಣಿಹಾಕಲಿಲ್ಲ. ಪ್ರತಿಕ್ರಿಯೆಯಾಗಿ ಪ್ರಮುಖ ಜಿಲ್ಲಾ ಕೇಂದ್ರ ತಾಲ್ಲೂಕು ಕೇಂದ್ರಗಳಲ್ಲಿ ಚಳವಳಿ ಪ್ರಾರಂಭವಾದವು. ವರದಿಯ ಅನುಷ್ಠಾನಕ್ಕೆ ನಡೆದ ಈ ಚಳವಳಿಯನ್ನು ಗೋಕಾಕ್ ಚಳವಳಿಯೆಂದು ಕರೆಯಲಾಯಿತು. ನಿಸ್ವಾರ್ಥ ಹೋರಾಟಕ್ಕೆ ತಾಯಿಯ ಮಾನಭಿಮಾನಗಳನ್ನು ರಕ್ಷಿಸುವ ಪಣತೊಟ್ಟು, ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗದೆ ಕೊನೆಯ ತನಕ ಹೋರಾಡಲು ಸಾಹಿತಿ ಕಲಾವಿದರು, ಅಧ್ಯಾಪಕರು, ವಕೀಲರು, ಸಂಘ ಸಂಸ್ಥೆಗಳು ಪ್ರಾರಂಭಿಸಿದ ಚಳವಳಿ ದಿನದಿಂದ ದಿನಕ್ಕೆ ಕಾವೇರತೊಡಗಿತು. ನಾಡಿನ ದಿನ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಲಂಕೇಶ್, ಡೆಕ್ಕನ್‌ಹೆರಾಲ್ಡ್, ಜನವಾಣಿ, ಮುಂತಾದವು ಸರ್ಕಾರದ ವಚನ ಭ್ರಷ್ಟತೆಯನ್ನು ಎತ್ತಿತೋರಿಸುತ್ತಾ ಬಂದವು. ಇವು ಸರ್ಕಾರದ ನಿಷ್ಕ್ರಿಯತೆಯನ್ನು ಖಂಡಿಸಿದ್ದಲ್ಲದೆ, ಕನ್ನಡ ಚಳವಳಿಗಾರರನ್ನು ಹುರಿದುಂಬಿಸುವ ಲೇಖನಗಳು ಪ್ರಕಟಿಸತೊಡಗಿದವು. ಚಳವಳಿ ಹೆಚ್ಚು ಪ್ರಖರತೆ ಪಡೆದಂತೆಲ್ಲಾ ಸರ್ಕಾರ ದಮನಕಾರಿ ನೀತಿಯನ್ನು ಚಳವಳಿಗಾರರ ಮೇಲೆ ಪ್ರಯೋಗಿಸತೊಡಗಿತು.

ಪ್ರತಿಭಟನಾಕಾರರನ್ನು ಬೆದುರಿಸಲು ಪೋಲಿಸ್ ಶಕ್ತಿಯನ್ನು ಪ್ರಯೋಗಿಸತೊಡಗಿತು. ಪ್ರತಿಭಟನಾಕಾರರನ್ನು ಏಕಾಏಕಿ ಬಂದಿಸಿ ಹುಸಿ ಅಪರಾದಗಳನ್ನು ಅವರ ಮೇಲೆ ಹೇರತೊಡಗಿತು. ಈ ಚಳವಳಿಗೆ ಜನಸಾಮಾನ್ಯರ ಬೆಂಬಲವಿಲ್ಲ, ಇದು ಸಾಹಿತಿ ಕಲಾವಿದರರ ಸಮಸ್ಯೆಯಾಗಿದೆ. ಮತ್ತು ಚಳವಳಿಯೂ ಯಾವ ಅರ್ಥದಿಂದಲೂ ಕೂಡಿಲ್ಲವೆಂದು ಸರ್ಕಾರ ತಿರುಗೇಟು ನೀಡತೊಡಗಿತು. ಚಳವಳಿಗಾರರು ಚಳವಳಿ ನಿಲ್ಲಿಸದ ಹೊರತು ಸರಕಾರ ಅವರೊಂದಿಗೆ ಯಾವ ಮಾತು ಕತೆಯನ್ನು ನಡೆಸದು. ತನ್ನ ನೀತಿ ಬದಲಾಗದು ಎಂದು ಸರಕಾರ ತಟಸ್ಥ ದೋರಣೆಯನ್ನು ಅನುಸರಿಸ ತೊಡಗಿತು.

೩.೫. ಧಾರವಾಡದಲ್ಲಿ ಕನ್ನಡ ಕ್ರಿಯಾಸಮಿತಿ ರಚನೆ

ಗೋಕಾಕ್ ಸಮಿತಿಯು ಅಭಿಪ್ರಾಯ ಸಂಗ್ರಹಣೆಗಾಗಿ ಹಿಂದೆ ಧಾರವಾಡಕ್ಕೆ ಆಗಮಿಸಿತ್ತು. ಆಗ ಚಂದ್ರಶೇಖರಪಾಟೀಲ. ಪಾಟೀಲಪುಟ್ಟಪ್ಪ ನಂತರ ಹತ್ತಾರು ಹಿರಿಯ ಸಾಹಿತಿಗಳು 'ಗೋಕಾಕರೇ ಹಿಂತಿರುಗಿ' ಎಂಬುದಾಗಿ ವಿರೋಧ ವ್ಯಕ್ತಪಡಿಸಿದ್ದರು. ಈಗ ಹೋರಾಟಗಳು ಹೊಸ ರೂಪಪಡೆದ ನಂತರ ಸರ್ಕಾರದ ವಿರುದ್ಧ ಪ್ರತಿಭಟಿಸಲು ಶಾಶ್ವತವಾದ ಸಂಘಟನೆ ಇಲ್ಲದೆ ಇರುವುದನ್ನು ಮನಗಂಡು ಧಾರವಾಡದಲ್ಲಿ ಚಂದ್ರಶೇಖರ ಪಾಟೀಲ, ಚನ್ನವೀರ ಕಣವಿ, ಪಾಟೀಲ ಪುಟ್ಟಪ್ಪ ಮತ್ತು ಎಂ.ಎಂ.ಕಲಬುರ್ಗಿಯಂತಹ ಸಾಹಿತಿಗಳು ಸೇರಿ "ಕನ್ನಡ ಕ್ರಿಯಾ ಸಮಿತಿ"ಯನ್ನು ವಿದ್ಯಾವರ್ಧಕ ಸಂಘದ ಅವರಣದಲ್ಲಿ ಹುಟ್ಟು ಹಾಕಿದರು. ಈ ಸಮಿತಿಗೆ ಹಿರಿಯ ಸಂಶೋಧಕರಾದ ಶಂಭಾಜೋಶಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿಲಾಯಿತು. ಚಂದ್ರಶೇಖರ ಪಾಟೀಲ, ಎಂ. ಎಂ.ಕಲುಬರ್ಗಿ ಯವರನ್ನು ಕ್ರಿಯಾ ಸಮಿತಿಯ ಸ್ಥಾಪನ ಕಾರಣ ಕರ್ತರೆಂದ ಗುರ್ತಿಸಲಾಯಿತು. ಪಾಟೀಲ ಪುಟ್ಟಪ್ಪ, ಬಸವರಾಜಕಟ್ಟೀಮನಿ, ಡಾ.ಆರ್,ಸಿ ಹಿರೇಮಠ ಚನ್ನವೀರ ಕಣವಿ, ಡಾ. ರಾಮವಾಡೇಕರ್, ಡಾ.ವೃಷಬೇಂದ್ರಸ್ವಾಮಿ, ವಿ.ಎಸ್. ಹೀರೆಗೌಡ ಇವರನ್ನು ಉಪಾಧ್ಯಕ್ಷರಾಗಿ ಗುಂಜೆಟ್ಟೆಯವರು ಕೋಶಾಧಿಕಾರಿಯಾಗಿ ನಿಯುಕ್ತಿಯಾದರು.

ಕನ್ನಡದ ಕೆಲಸಕ್ಕಾಗಿ ಹಿಡಿದ ಕಾರ್ಯ ಪೂರೈಸುವ ಸಲುವಾಗಿ ಚಂಪಾ, ಕಲಬುರ್ಗಿ, ಪಾಟೀಲ ಪುಟ್ಟಪ್ಪ ನವರು ಅನೇಕ ಅವಮಾನ ತೊಂದರೆಗಳನ್ನು ಅನುಭವಿಸಿದರು. ಈ ಕ್ರಿಯಾ ಸಮಿತಿಯಂತೆ ಚಳವಳಿಯ ಸಂದರ್ಭದಲ್ಲಿ ಅನೇಕ ಕನ್ನಡ ಕ್ರಿಯಾ ಸಮಿತಿಗಳು ಹುಟ್ಟಿಕೊಂಡವು. ಅದರಲ್ಲಿ ಧಾರಾವಾಡ ಕ್ರಿಯಾ ಸಮಿತಿಯು ಹೆಚ್ಚು ಚಲನ ಶೀಲವಾಗಿದ್ದು ಕಂಡುಬರುತ್ತದೆ.

೩.೬. ಸಾಹಿತಿ-ಕಲಾವಿದರುಗಳ ಬಳಗದ ಉದಯ

ಸಾಹಿತಿ-ಕಲಾವಿದರ ಬಳಗ ಬೆಂಗಳೂರಿನಲ್ಲಿ ಚಳವಳಿಗೆ ಹಿನ್ನೆಲೆಯಾಗಿ ಉದಯವಾಗುವುದಕ್ಕಿಂತ ಮುನ್ನ ೧೯೭೮ರ ಸುಮಾರಿನಲ್ಲಿ ಚಿದಾನಂದಮೂರ್ತಿಯವರು "ಕನ್ನಡ ಉಳಿಸಿ ಕ್ರಿಯಾಸಮಿತಿ" ಹೆಸರಿನಲ್ಲಿ ಕೆಲವು ಕನ್ನಡಪರ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಸೇರಿಸಿ ಕೊಂಡು ಆಗಾಗ ಕನ್ನಡ ಪರ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇವರು ಹೆಚ್ಚಿನ ಪ್ರಮಾಣದಲ್ಲಿ ಕನ್ನಡಪರ ಹೋರಾಟದ ಮೂಲಕ ತೊಡಗಿಸಿಕೊಂಡು ಪ್ರಸಿದ್ದಿಗೆ ಬಂದಿದ್ದು ಗೋಕಾಕ್ ಚಳವಳಿಯ ಸಂದರ್ಭದಲ್ಲಿಯೇ[೧೨]" ಚಿದಾನಂದಮೂರ್ತಿ ಒಳಗದಲ್ಲಿ ಸಾಹಿತಿಗಳು ವಿಚಾರವಂತರು ಬೆಂಗಳೂರು ನಗರದಲ್ಲಿ ಮಾತ್ರ ಸಣ್ಣಪುಟ್ಟ ಧರಣಿ ಸತ್ಯಾಗ್ರಹಗಳನ್ನು ನಡೆಸುತ್ತಾ ಬರುತ್ತಿದ್ದರು. ತಮ್ಮದೇ ಆದ ಕಾರ್ಯ ಚಟುವಟಿಕೆಗಳನ್ನು ರೂಪಿಸಿ. ಮಾಧ್ಯಮಗಳ ಮೂಲಕ ಸರ್ಕಾರಕ್ಕೆ ಒತ್ತಡವನ್ನು ಹಾಕುತ್ತಿದ್ದರು.

ಏಪ್ರಿಲ್ ೧೩, ೧೯೮೨, ಕನ್ನಡ ಜಾಗೃತಿಯ ದೃಷ್ಟಿಯಿಂದ ಅತ್ಯಂತ ಮಹತ್ವವಾದದಿನ. ಕನ್ನಡ ಚಳವಳಿಗೆ ಹೊಸ ಆಯಾಮ ನೀಡಿದ `ಸಾಹಿತಿ ಕಲಾವಿದರ ಬಳಗೆ` ಹೊಸರೂಪ ಪಡೆದಿದ್ದು ಅದೇ ದಿನ. ರಾಜಧಾನಿ ಬೆಂಗಳೂರಿನಲ್ಲಿ ಸಾಹಿತಿಗಳು ಕಲಾವಿದರು ಬೀದಿಗಳಿದು ಸರ್ಕಾರದ ವಿರುದ್ಧ ತಮ್ಮ ಸಾತ್ವಿಕ ಸಿಟ್ಟನ್ನು ತೋರ್ಪಡಿಸಿದರು. ಅದೇ ದಿನ ಸೆಂಟ್ರಲ್ ಕಾಲೇಜು ಅವರಣದಿಂದ ವಿಧಾನಸೌಧದವರೆಗೆ ಮೌನ ಮೆರವಣಿಗೆ ಏರ್ಪಾಡಾಗಿತ್ತು. ''ಈ ಮೆರವಣಿಗೆಯಲ್ಲಿ ರಂ. ಶ್ರೀ ಮುಗಳಿ, ಗೋರೂರು ರಾಮಸ್ವಾಮಿಅಯ್ಯಂಗಾರ್, ಸಿದ್ದಯ್ಯಪುರಾಣಿಕ್, ಲಂಕೇಶ್, ಜಿ.ಎಸ್. ಶಿವರುದ್ರಪ್ಪ, ಎಂ.ಚಿದಾನಂದಮೂರ್ತಿ, ಕೋ.ಚನ್ನಬಸಪ್ಪ ನಿಸ್ಸಾರ್ ಅಹ್ಮದ್, ಎಸ್.ಆರ್.ಮುಳಗಿ, ಮಾವಿನಕೆರೆ ರಂಗನಾಥ್ ಲಕ್ಷ್ಮಿನಾರಾಯಾಣಭಟ್ಟ, ಬರಗೂರು ರಾಮಚಂದ್ರಪ್ಪ, ಕೆ.ವಿ.ನಾರಾಯಣ, ಪಿ.ವಿ. ನಾರಾಯಣ, ಶ್ರೀನಿವಾಸರಾಜು, ಜಿ.ನಾರಾಯಣಕುಮಾರ್, ಮುಂತಾದ ನೂರೂರು ಮಂದಿ ಪಾಲ್ಗೊಂಡಿದ್ದರು[೨]''. ಬೀದಿಗಿಳಿದ ಸಾಹಿತಿ ಚಲಿಸುವ ಜ್ವಾಲಾಮುಖಿ', ಸಾಹಿತಿಗಳ ಮೌನಮೆರವಣಿಗೆ ಆಸ್ಫೋಟದ ಮುನ್ಸೂಚನೆ,' ಕನ್ನಡ ಒಂದೇ ಕರ್ನಾಟಕ ಪ್ರಥಮ ಭಾಷೆ; ಗೋಕಾಕ್ ವರದಿ ವಿರೋಧಿ ಕನ್ನಡದ್ರೋಹಿ; ಎಂಬ ಭಿತ್ತಿ ಫಲಗಳನ್ನು ಚಳವಳಿಗಾರಾರು ಹಿಡಿದಿದ್ದರು. ''ಕನ್ನಡಕ್ಕೆ ಜಯವಾಗಲಿ ಕರ್ನಾಟಕಕ್ಕೆ ಜಯವಾಗಲಿ, 'ಗುಂಡುರಾವ್‌ಗೆ ದಿಕ್ಕಾರ; ಎಫ್.ಎಂ.ಖಾನ್ ಗೆದಿಕ್ಕಾರ; ಎಂದು ಕೂಗುತ್ತಾ ಪೋಲಿಸರ ತಡೆಬೇಲಿ ಬೇದಿಸಿ ಚಳವಳಿಗಾರರು ವಿಧಾನ ಸೌಧದತ್ತ ಮುನ್ನುಗ್ಗಿದರು. ಈ ಮೆರವಣಿಗೆ ಗೋಪಾಲಗೌಡ ವೃತ್ತದ ಬಳಿ ಅಂತ್ಯವಾಯಿತು. ಹೀಗೆ ಹಲವಾರು ಕಾರ್ಯಕ್ರಮಗಳನ್ನು ಬೆಂಗಳೂರಿನಲ್ಲಿ ರೂಪಿಸುವಲ್ಲಿ ಸಾಹಿತಿ ಕಲಾವಿದರ ಬಳಗ ಚಳವಳಿಗೆ ಹೊಸ ರೂಪ ನೀಡುತ್ತಾ ಬಂದಿತು. ಅಂಥದ್ದೆ ಕೆಲಸವನ್ನು ಮಾಡುತ್ತಾ ಧಾರವಾಡದ ಕನ್ನಡ ಕ್ರಿಯಾ ಸಮಿತಿ ಉತ್ತರ ಕರ್ನಾಟಕದಲ್ಲಿ ಯಶ್ವಸಿಯಾಗಿ ಹೊರಹೊಮ್ಮಿತು.

೩.೭. ಬಂಡಾಯ ಸಾಹಿತ್ಯ ಸಂಘಟನೆ-ಹೋರಾಟ

ಇದೇ ಅವದಿಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯು ಬೆಂಗಳೂರಿನಲ್ಲಿ ಅಸ್ತಿತ್ವಪಡೆದು ಚಳವಳಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸತೊಡಗಿತು. ಜನಭಾಷೆಗಳು ಮಾತ್ರ ರಾಜ್ಯದಲ್ಲಿ ಪ್ರಥಮ ಭಾಷೆ ಆಗಬೇಕೆಂದು ಒತ್ತಾಯಿಸಿ, ಸಂಸ್ಕೃತ ವಿರೋಧಿ ವಾರವನ್ನು ಅಚರಿಸುವುದರ ಮೂಲಕ ಕನ್ನಡಪರ ನಿಲುವು ತಳೆಯುವವಲ್ಲಿ ಕೆಲಸ ಮಾಡಿತು. ಸಂಘಟನೆಯ ಸಂಚಾಲಕರಾದ ಬರಗೂರು ರಾಮಚಂದ್ರಪ್ಪನವರು ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಜೊತೆಗೂಡಿ ಪ್ರಮುಖ ಸ್ಥಳಗಳಲ್ಲಿ ಸಂಚರಿಸಿ ರಾಜ್ಯಾದ್ಯಂತ ಸಂಸ್ಕೃತ ಏರಿಕೆಯನ್ನು ವಿರೋಧಿಸಿ ಸಭೆ, ಧರಣಿ, ಪ್ರತಿಭಟನೆಗಳು ನಡೆಯುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಗೋಕಾಕ್ ವರದಿ ಹೊರಬಿದ್ದಾಗ ಅದು ಕನ್ನಡ ಪರ ಇರುವುದುನ್ನು ಗಮನಿಸಿ ವರಿದಿಯ ಅನುಷ್ಠಾನಕ್ಕೆ ಸಂಘಟನೆಯು ಸಾವಿರಾರು ಕರಪತ್ರಗಳನ್ನು ಹಂಚತೊಡಗಿತು. ಇದೇ ಸಮಯದಲ್ಲಿ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಏರ್ಪಾಡಾಗಿತ್ತು. ಒಂಡಾಯ ಸಾಹಿತ್ಯ ಸಂಘಟನೆ ವ್ಯವಸ್ಥೆ ಮಾಡಿದ್ದ ಈ ಸಭೆಯಲ್ಲಿ ಬರಗೂರು ರಾಮಚಂದ್ರಪ್ಪನವರ 'ಕನ್ನಡ ಹೋರಾಟ' ಎಂಬ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಈ ಸಭೆಯಲ್ಲಿ ಹಿರಿಯ ಸಾಹಿತಿಗಳಾದ ಪಾಟೀಲ ಪುಟ್ಟಪ್ಪನವರು ಭಾಗವಹಿಸಿದ್ದರು. ಇಂತಹ ಹಲವಾರು ಕಾರ್ಯಕ್ರಮಗಳನ್ನು ಬಂಡಾಯ ಸಾಹಿತ್ಯಸಂಘಟನೆ ನಗರದಲ್ಲಿ ಹಮ್ಮಿಕೊಂಡು ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸುತ್ತಾ ಬರತೊಡಗಿತು.

೩.೮. ರಹಮಾನ್‌ಖಾನ್ ಮತ್ತು ಜಿ. ನಾರಾಯಣ ಕುಮಾರ್ ಅವರಿಂದ ಪ್ರತಿಭಟನೆ

"ಗೋಕಾಕ್ ಚಳವಳಿ ಬೆಂಗಳೂರು ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ಜರುಗಲು ಕನ್ನಡ ಪಕ್ಷವು ತನ್ನದೇ ಆದ ಶ್ರಮವನ್ನು ಬಸಿದಿದೆ. ಕನ್ನಡ ಕಾರ್ಯಕರ್ತರು ನಿತ್ಯವು ಚಳವಳಿಯನ್ನು ಒಂದಲ್ಲ ಒಂದು ರೂಪದಲ್ಲಿ ಒಂದಲ್ಲ ಒಂದು ಕಡೆ ನಡೆಸುತ್ತಿದ್ದರು. ಈ ಕಾರ್ಯಕ್ರಮಗಳು ದೊಡ್ಡ ಪ್ರಮಾಣದಲ್ಲಿ ನಡೆದು ಜನತೆಯನ್ನು ಜಾಗೃತಿಗೊಳಿಲುವಲ್ಲಿ ಪ್ರಮುಖ ಪಾತ್ರವಹಿಸಿದೆ[೪೪]". ವರದಿಯು ಪ್ರಕಟಗೊಂಡು ಸರ್ಕಾರ ದಿವ್ಯಮಾನ ವಹಿಸಿದ್ದರಿಂದ ಕನ್ನಡಭಿಮಾನಿಗಳಲ್ಲಿ ಅನುಮಾನದ ಅಲೆಗಳನೆಬ್ಬಿಸಿತು. ತಡಮಾಡಿದರೆ. ಮತ್ತೊಂದು ವರ್ಷ ಕಾಯಬೇಕೆನ್ನುವದುನ್ನು ಮನಗಂಡ ಕನ್ನಡಪರ ವ್ಯಕ್ತಿಗಳು, ಕನ್ನಡ ಪಕ್ಷದ ಕಾರ್ಯಕರ್ತರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಪತ್ರಿಕೆಗಳಿಗೆ ಬರೆಯುವ ಮೂಲಕ ಸರ್ಕರದ ಗಮನ ಸೆಳೆದರು. ಇದರಲ್ಲಿ ರಹಮಾನ್ ಖಾನ್ ರಂತ ವ್ಯಕ್ತಿಗಳು ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ. ಅಬಿಪ್ರಾಯಸಂಗ್ರಹಣೆ ಕಾರ್ಯದಲ್ಲಿ ತೊಡಗಿದ್ದರು.

೧೯೮೧ ನೆಸಾಲಿನ ಶಿಕ್ಷಣ ಕ್ರಮದಲ್ಲಿ ಗೋಕಾಕ್‌ವರದಿಯಲ್ಲಿನ ಒಂದು ಭಾಗವನ್ನು ಅಳವಡಿಸಲು ಸಮಿತಿಯೇ ಸೂಚಿಸಿತ್ತು. ೧೯೮೨ರ ಶೈಕ್ಷಣಿಕ ವರ್ಷ ಹತ್ತಿರ ಬಂದರೂ ಯಾವುದೇ ಸರ್ಕಾರಿ ಆದೇಶ ಹೊರ ಬರಲಿಲ್ಲ. ಇದರಿಂದ ಬೇಸತ್ತ ಕನ್ನಡ ಪಕ್ಷದ ಕಾರ್ಯಕರ್ತರು ಸರ್ಕಾರದೊಂದಿಗೆ ನೇರಾವಾದ ಹೋರಾಟಕ್ಕೆಸಿದ್ದರಾದರು. ಇದರ ಪರಿಣಾಮ ೧೯೮೨ ಮಾರ್ಚ್ ೧೩ರಂದು ಆರಂಭವಾದ ಅಮರಣ ಉಪವಾಸ ಪ್ರತಿಭಟನೆ. ಈ ನಿರಶನವನ್ನು ಕನ್ನಡ ಪಕ್ಷವು ವಿಧಾನಸೌಧದ ಮುಂಭಾಗ ತನ್ನ ಕಾರ್ಯಕರ್ತರೊಂದಿಗೆ ಬೃಹತ್ ಪ್ರಮಾಣದಲ್ಲಿ ಆಯೋಜಿಸಿತ್ತು. ಮೊದಲನೆ ದಿನವೇ ರಹಮಾನ್‌ಖಾನ್ ಅಮರಣಂತರ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಇವರ ಜೊತೆಯಲ್ಲಿ ಕನ್ನಡ ಪಕ್ಷದ ಸಕ್ರಿಯಕಾರ್ಯಕರ್ತರಾದ ಗೋವಿಂದ್ನಳ್ಳಿ ದೇವೆಗೌಡ, ಜಿ.ಎಸ್. ರೇಣುಕಪ್ಪ, ಸುಧಾಮ, ಮಾಜಿಶಾಸಕರಾದ ಕೆ. ಪ್ರಭಾಕರರೆಡ್ಡಿ, ಶಿವಪ್ರಸಾದ್, ಸತ್ಯನಾರಾಯಣ ಮಾನೇ ಮೊದಲಾದವರು ಭಾಗವಹಿಸಿದ್ದರು.ಮಾರ್ಚ್೧೭ರಂದು ವಿಜಾಪುರದಲ್ಲಿ "ಗಂಗಾಧರ ಕೊರಳ್ಳಿ"ಯವರು ಅಮರಣಾಂತರ ಉಪವಾಸ ಸತ್ಯಾಗ್ರವನ್ನು ಆರಂಭಿಸಿ. ಸರ್ಕಾರದ ಗಮನ ಸೆಳೆಯುತ್ತಿದ್ದರೆ ಮಾರ್ಚ್೧೮ ರ ವೇಳೆಗೆ ರಹಮಾನ್‌ಖಾನ್ ತುಂಬಾ ಬಳಲಿದರು. ಅವರ ಕಿವಿಯಲ್ಲಿ ರಕ್ತಸ್ರಾವವಾಗಿ ವಿಧಾನ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಯಿತು. ಜೆ.ಎಚ್. ಪಟೇಲ್ ವಿಧಾನಸಭೆಯಲ್ಲಿ ಮಾತನಾಡುತ್ತಾ ರಹಮಾನ್ ಸ್ಥಿತಿಗಂಭೀರವಾಗಿದೆ. "ಆತನ ಉಳಿವಿಗೆ ಏನು ಕ್ರಮ ತಗೆದು ಕೊಳ್ಳುವಿರಿ" ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು ಆದರೆ ಸರ್ಕಾರ ಏನುಕ್ರಮ ತಗೆದುಕೊಳ್ಳದೆ ದಿವ್ಯಮೌನವಹಿಸಿತ್ತು.

ಗೋಕಾಕ್ ಚಳವಳಿಗೆ ಮುನ್ನವೇ ನಾರಾಯಣ್‌ಕುಮಾರ್ ಅವರು ಕನ್ನಡಪರ ಹೋರಾಟಗಳಲ್ಲಿ ಧ್ವನಿ ಎತ್ತುತ್ತಾ ಬಂದಿದ್ದರು. ವರದಿ ಜಾರಿಗಾಗಿ ಪ್ರತಿಭಟನೆ ವ್ಯಕ್ತಿ ಪಡಿಸಿದವರಲ್ಲಿ ಇವರು ಪ್ರಮುಖರು. ಸರ್ಕಾರದ ನಿಷ್ಕ್ರಿಯತೆ ಬಗ್ಗೆ ಮೊದಲ ಬಾರಿಗೆ ಧ್ವನಿ ಎತ್ತಿದವರು ಜಿ.ನಾರಾಯಣಕುಮಾರ್. ಸಾಹಿತಿ ಕಲಾವಿದರು ಜಾಗೃತರಾಗುವ ಮುನ್ನವೆ ೪ ದಿನಗಳ ಕಾಲ ಮುಷ್ಕರ ಹೂಡಿ ಕನ್ನಡ ಪರ ನಿಲುವನ್ನು ವ್ಯಕ್ತಪಡಿಸುತ್ತಾ ಬಂದರು. ಆಗ ಯಾವ ಸಾಹಿತಿ. ಬುದ್ದಿಜೀವಿಗಳು ರಾಜಕಾರಣಿಗಳು ಇವರಿಗೆ ಬೆಂಬಲ ವ್ಯಕ್ತಪಡಿಸಲಿಲ್ಲ. ಇವರು ಕೂಗು ಸರ್ಕಾರಕ್ಕೆ ಕೇಳಿಸುವುದೋ ಇಲ್ಲವೋ ಎಂಬಂತೆ ಅನಿಸಿಕೆಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದವು. ಪ್ರಾರಂಭದ ದಿನಗಳಲ್ಲಿ ಜನಸಾಮಾನ್ಯರಿಂದ ಇವರಿಗೆ ಹೇಳಿಕೊಳ್ಳುವಂತಹ ಬೆಂಬಲ ದೊರೆಯಲಿಲ್ಲ. ಮತ್ತೊಬ್ಬ ಚಳವಳಿಯ

ನಾಯಕರಾಗಿದ್ದ 'ವಾಟಾಳ್‌ನಾಗರಾಜು' ನಾರಾಯಣಕುಮಾರರಿಗೆ ಬೆಂಬಲ ವ್ಯಕ್ತಪಡಿಸಲಿಲ್ಲ. ವಾಟಾಳ್‌ನಾಗಾರಾಜು ಮುಖ್ಯಮಂತ್ರಿಗಳಾದ ಗುಂಡುರಾವ್ ಅವರೊಂದಿಗೆ ಆತ್ಮೀಯವಾಗಿದ್ದುದೆ ಚಳವಳಿಗೆ ಬರದೆ ಇರಲು ಪ್ರಮುಖ ಕಾರಣವೆಂದು ಕೆಲವರ ಅಭಿಮತವಾಗಿತ್ತು.

ಬೆಂಗಳೂರಿನಲ್ಲಿ ೬.೪.೧೯೮೨ರಂದು 'ಕನ್ನಡ ಜಾಗೃತಿ' ಸಮಾವೇಶವೊಂದು ನಡೆಯಿತು. ಜಿ.ನಾರಾಯಣ ಅವರು ಕರೆದಿದ್ದ ಸಮಾವೇಶದಲ್ಲಿ ಹಿರಿಯ ಸಾಹಿತಿ ಕಲಾವಿದರು ಭಾಗವಹಿಸಿದ್ದರು. ಈ ಸಮಿತಿ ನಡೆಸುವ ಕಾರ್ಯ ಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ನಾರಾಯಣಕುಮಾರ್ ಚಳವಳಿಗೆ ಹೊಸ ಆಯಾಮ ನೀಡತೊಡಗಿದರು. ಮುಂದಿನ ದಿನಗಳಲ್ಲಿ ಇವರು ಇದೇ ವೇದಿಕೆಯಡಿ ತಮ್ಮನ್ನು ಗುರ್ತಿಸಿಕೊಂಡರು. ಪಂಜಿನ ಮೆರವಣಿಗೆ, ಪಾದಯಾತ್ರೆ, ಧರಣಿಗಳಲ್ಲಿ ಭಾಗವಹಿಸಿ ಚಳವಳಿಗಾರರನ್ನು ಹುರುದುಂಬಿಸತೊಡಗಿದರು.

೩.೯. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಹುಟ್ಟು ಮತ್ತು ಹೋರಾಟ

ಗೋಕಾಕ್ ವರದಿ ಅನುಷ್ಠಾನಕ್ಕಾಗಿ ಸರ್ಕಾರದ ಮೇಲೆ ಒತ್ತಡ ತರಲೊಸುಗ ನಾಡಿನಾದ್ಯಂತ ಅನೇಕ ಕನ್ನಡ ಕ್ರಿಯಾಸಮಿತಿಗಳು ಹುಟ್ಟಿಕೊಂಡವು. ಅದರಂತೆ ಧಾರಾವಾಡದಲ್ಲಿ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಹುಟ್ಟು ಚಳವಳಿಗೆ ಹೊಸರೂಪು ನೀಡಿತು. ಉತ್ತರ ಕರ್ನಾಟಕದ ಚಳವಳಿಯ ಕೇಂದ್ರವಾಗಿದ್ದ ಈ ಸಮಿತಿಯಲ್ಲಿ ನಾಡಿನ ಹಿರಿಯ ಸಾಹಿತಿಗಳಾದ ಚಂದ್ರಶೇಖರ ಪಾಟೀಲ, ಎಂ,ಎಂ.ಕಲಬುರ್ಗಿ, ಕಟ್ಟೀಮನಿ, ಆರ್.ಸಿ. ಹೀರೆಮಠ ಶಂಭಾಜೋಷಿ ಮುಂತಾದವರ ಪಾತ್ರ ಇದರಲ್ಲಿ ಹಿರಿದಾಗಿತ್ತು. ಗೋಕಾಕ್ ಚಳವಳಿ ಕನ್ನಡ ಚಳವಳಿಯಾಗಿ ಪರಿವರ್ತನೆಗೊಂಡಿದ್ದು ಇದೇ ಧಾರಾವಾಡದಲ್ಲಿ. ಇದರಲ್ಲಿ ನಾಡಿನ ಎಲ್ಲಾ ಕ್ರಿಯಾಸಮಿತಿಗಳು ಒಂದು ಗೂಡಿದ್ದು ಮತ್ತೊಂದು ವಿಶೇಷ. ಈ ಕೇಂದ್ರ ಕ್ರೀಯಾ ಸಮಿತಿಯನ್ನು ಮುನ್ನಡೆಸುವಲ್ಲಿ ಪಾಟೀಲಪುಟ್ಟಪ್ಪ ಚಂದ್ರಶೇಖರ ಪಾಟೀಲ ಎಂ.ಎಂ.ಕಲಬುರ್ಗಿ ಯಂತಹ ಹಿರಿಯರ ಪಾತ್ರ ಸ್ಮರಣೀಯವಾದುದ್ದು.

ಈ ಸಮಿತಿಯಿಂದ ರಾಜ್ಯದ ಕೆಲವು ಜಾಲ್ಲಾ ಕೇಂದ್ರಗಳಲ್ಲಿ ಉಪಕೇಂದ್ರಗಳ ರಚನೆಯಾಗಿ ವಿಭಿನ್ನವಾದ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಯಿತು. ರಾಜಕುಮಾರ್ ಚಳವಳಿಗೆ ಬಂದನಂತರ, ಈ ಕ್ರಿಯಾಸಮಿತಿಯ ಎಲ್ಲಾ ಘುಟಕಗಳು ಸಕ್ರಿಯಾವಾಗಿ ಕಾರ್ಯನಿರ್ವಹಿಸ ತೊಡಗಿದವು.

ಈ ಮದ್ಯದಲ್ಲಿ ಚಂದ್ರಶೇಖ ಪಾಟಿಲ, ಪಾಟೀಲ ಪುಟ್ಟಪ್ಪ, ಕಲಬುರ್ಗಿ, ಗುರುಲಿಂಗಕಾಪಸೆ, ಮುಂತಾದವರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದರು. ಕನ್ನಡದ ಕೆಲಸಕ್ಕಾಗಿ ಈ ನಾಯಕರು ಅನೇಕ ಕಷ್ಟ ನಷ್ಟಗಳ ಜೊತೆಗೆ ಅವಮಾನಗಳನ್ನು ಸಹಿಸಿಕೊಳ್ಳಬೇಕಾಯಿತು. ಸಾಹಿತಿ ಕಲಾವಿದರು. ಶಿಕ್ಷಕರು, ವಕೀಲರು, ವಿದ್ಯಾರ್ಥಿ, ಯುವಕರನ್ನು ಚಳವಳಿ ಆಕರ್ಷಿಸಿದರ ಪರಿಣಾಮವಾಗಿ ಇದರ ಪ್ರತಿಧ್ವನಿ ಎಲ್ಲಾಕಡೆ ಕೇಳಿಬಂತು.

ಧಾರಾವಾಡದಲ್ಲಿ ಆರಂಭಿಸಿದ ಜಾಗಟೆ ಗಂಗಳದ ಚಳವಳಿಯನ್ನು ಹಿರಿಯ ಸಾಹಿತಿಗಳಾದ ಆರ್.ಸಿ. ಹಿರೇಮಠ ಚನ್ನವೀರ ಕಣವಿ. ಎಸ್.ಎಸ್.ಶೆಟ್ಟರ್. ಮುತಾದವರು ಗಂಗಳ ಬಾರಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ನಡುವೆ ಕನ್ನಡ ಕೇಂದ್ರ ಕ್ರಿಯಾ ಸಮಿತಿಯು ಏಪ್ರಿಲ್ ೧೮ ರೊಳಗೆ ಸರ್ಕಾರದ ಸಾಂಸ್ಕೃತಿಕ ಸಮಿತಿಗಳಿಗೆ ರಾಜೀನಾಮೆ ನೀಡದವರನ್ನು ಕನ್ನಡ ದ್ರೋಹಿಗಳೆಂದು ಕರೆಯಲಾಗುವುದೆಂದು ತಿಳಿಸಿತು.ಪು.ತಿ.ನ. ಅವರು 'ಚಳವಳಿಗೆ ಧುಮುಕಿ' ಎಂದು ಕರೆನೀಡಿದರು. ಅನಂತಮೂರ್ತಿ ಹಾ.ಮಾ.ನಾಯಕ, ಹಂ.ಪ. ನಾ. ವಾಟಾಳ್ ನಾಗರಾಜ್ ಚಳವಳಿಯಿಂದ ದೂರ ಉಳಿದರು. ಅನಂತಮೂರ್ತಿಯವರು ಚಳವಳಿಯನ್ನು 'ಸಮೂಹಸನ್ನಿ' ಎಂದು ಕರೆದು ಚಳವಳಿಗಾರರನ್ನು ಛೇಡಿಸಿದರು.

ಗದುಗಿನ ತೋಂಟದಾರ್ಯ ಮಠದ ಸ್ವಾಮಿಜೀ, ಹುಬ್ಬಳ್ಳಿಯ ಮೂರುಸಾಪಿರ ಮಠದ ಸ್ವಾಮೀಜಿಗಳು ಚಳವಳಿಗೆ ಬೆಂಬಲ ವ್ಯಕ್ತ ಪಡಿಸಿದರು. ದೇವರಾಜ ಅರಸು ಅವರು ಬೇಷರತ್ತಾಗಿ ಬೆಂಬಲ ವ್ಯಕ್ತಪಡಿಸಿದರು. ರಾಜ್ಯದ ಇತರೆ ಜಿಲ್ಲಾ ಕೇಂದ್ರಗಳಾದ ಕೋಲಾರ, ಮಂಡ್ಯ, ತುಮಕೂರು. ಹೊಸಕೋಟೆ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ನೆಲಮಂಗಲ ಮುಂತಾದ ಭಾಗಗಳಲ್ಲಿ ಕ್ರೀಯಾಸಮಿತಿಯ ನೇತೃತ್ವದಲ್ಲಿ ಹಲವಾರು ಕಾರ್ಯ ಕ್ರಮಗಳನ್ನು ಹಮ್ಮಿಕೊಂಡ ಪರಿಣಾಮವಾಗಿ ಹಲವಾರು ಚಳವಳಿಗಾರರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.ಇನ್ನು ಹಲವು ರೀತಿಯಲ್ಲಿ ಚಳವಳಿಯು ರಾಜ್ಯದ ಕೆಲವು ಭಾಗಗಳಲ್ಲಿ ಬೇರೆ ಬೇರೆ ರೂಪದ ಸ್ವರೂಪವನ್ನು ಪಡೆಯತೊಡಗಿತು. ರಾಜ್‌ಕುಮಾರ್ ಅವರು ಚಳವಳಿಗೆ ಬರುವ ಹೊತ್ತಿಗೆ ಚಳವಳಿ ತನ್ನ ಸ್ವರೂಪದಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳತೊಡಗಿತು.

ಚಳವಳಿ ತೀವ್ರಗೊಂಡಂತೆ ರಾಜ್ಯದ ನಾನಾ ಭಾಗಳಲ್ಲಿ ಸಾಂಕೇತಿಕವಾಗಿ ಧರಣಿಗಳು, ಉಪವಾಸ ಸತ್ಯಾಗ್ರಹ, ಪ್ರತಿಭಟನೆಗಳು ಸಾಮಾನ್ಯವಾದವು. ಇದು ಸರ್ಕಾರದ ಮೇಲೆ ಯಾವುದೇ ರೀತಿಯ ಪರಿಣಾಮಗಳನ್ನು ಬೀರಲಿಲ್ಲ. ಇಲ್ಲಿ ಚಳವಳಿಗಾರರು ದಿಕ್ಕುಕಾಣದೆ ಕಂಗಾಲಾದರು. ತಾಲ್ಲೂಕು ಕೇಂದ್ರಗಳಿಂದ ಪ್ರತಿಭಟನೆಗಾಗಿ ಜಿಲ್ಲಾಕೇಂದ್ರಕ್ಕೆ ನೂರಾರು ಮಂದಿ ಬಂದು ಸರ್ಕಾರದ ಮೇಲೆ ಒತ್ತಡ ಹಾಕಿದರೂ ಸರ್ಕಾರ ಬಗ್ಗಲಿಲ್ಲ. ಮಾನವ ಶ್ರಮ, ಶಕ್ತಿ ವ್ಯರ್ಥವಾಯಿತೆ ಹೊರತು ಚಳವಳಿಗೆ ಜಯ ಕಾಣಾದಾಯಿತು. ಆಗ ನಾಡಿನ ಹಿರಿಯ ಸಾಹಿತಿಗಳು-ಚಿಂತಕರು ಹೊಸದಿಕ್ಕಿನೆಡೆ ಯೋಚಿಸತೊಡಗಿದರು. ಈ ಎಲ್ಲಾ ಸಂದರ್ಭಗಳು ರಾಜ್‌ಕುಮಾರ್ ಅವರು ಚಳವಳಿಗೆ ಧುಮುಕಲು ವೇದಿಕೆಯನ್ನು ನಿರ್ಮಿಸಿದವು.

ಟಿಪ್ಪಣಿಗಳು

೧. ಹೊಸತು, ಜನವರಿ (೨೦೦೬) ಪು.೩೫

೨. ಅದೇ., ಪುಟ-೩೯

೩. ಅನಂತ ರಾಮರಾವ್.,(೨೦೦೬) ಕರ್ನಾಟಕ ಸುವರ್ಣದರ್ಶನ, ಪು-೨

೪. ಕನ್ನಡ ಸಾಹಿತ್ಯ ಪರಿಷತ್ತು., (೧೯೮೧) ಭಾಷಾ ಸಮಿತಿ ವರದಿ ಪು-೧೪೭

೫. ಗೋವಿಂದರಾಜು ಸಿ.ಆರ್., (೨೦೦೬) ಗೋಕಾಕ್ ವರದಿ ಪು-೩

೬. ಸಿದ್ದಲಿಂಗಪ್ಪ ಸಿ., (ಸಂ) (೧೯೮೨) ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಸಂಪುಟ ೬, ಸಂಚಿಕೆ-೬ ಪು-೧೫

೭. ಗೋವಿಂದ ರಾಜು ಸಿ.ಆರ್. ಮೇಲಿನದೆ ಪುಟ-೬

೮. ಅದೇ ಪುಟ ೬

೯. ಪಾಟೀಲ ಪುಟ್ಟಪ್ಪ., (೨೦೦೨) ಗೋಕಾಕ್ ವರದಿ ಹೋರಾಟದ ಕಥೆ, ಪುಟಸಂಖ್ಯೆ ೧೪

೧೦. ಗೋವಿಂದ ರಾಜು ಸಿ,ಆರ್., (೨೦೦೬) ಗೋಕಾಕ್ ವರದಿ, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು

೧೧. ಸಿದ್ದಲಿಂಗಪ್ಪ ಸಿ., (೧೯೮೨) ಮೇಲಿನದೆ ಸಂಚಿಕೆ ೧. ಸಂಪುಟ ೪೫ ಪುಟ-೨೫

೧೨. ಅದೇ., ಸಂಚಿಕೆ ೭, ಸಂಪುಟ ೪೫ ಪುಟ-೧೨

೧೩. ಚಂದ್ರಶೇಖರ್ ರಾ.ನಂ., (೧೯೯೯) ಕನ್ನಡದ ಹೋರಾಟಗಳು ಒಂದುನೋಟ ಪುಟ-೩೫

೧೪. ಹುಚ್ಚಪ್ಪ., (೧೯೮೩) ಗೋಕಾಕ್ ವರದಿ ಅನುಷ್ಠಾನಕ್ಕಾಗಿ ನಡೆದ ಹೋರಾಟಗಳು, ಪುಟ ಸಂಖ್ಯೆ-೪೫

ಅಧ್ಯಾಯ ನಾಲ್ಕು

ಚಳವಳಿಗೆ ಡಾ.ರಾಜ್‌ಕುಮಾರ್ ಅವರ ಪ್ರವೇಶ - ಹಿನ್ನೆಲೆ - ಸ್ವರೂಪ

ಅಧ್ಯಾಯ ನಾಲ್ಕು

ಚಳವಳಿಗೆ ಡಾ.ರಾಜಕುಮಾರ್ ಅವರ ಪ್ರವೇಶ ಹಿನ್ನೆಲೆ-ಸ್ವರೂಪ

೪.೧ ಹಿನ್ನಲೆ

ಡಾ.ರಾಜ್‌ಕುಮಾರ್ ಅವರು ಚಳವಳಿಯ ಮನುಷ್ಯರಲ್ಲ, ಅವರೊಬ್ಬ ಅಪ್ಪಟ ಕಲಾವಿದರು. ಕಲೆಯೇ ಉಸಿರು ಎಂಬುದಾಗಿ ಭಾವಿಸಿದ್ದಂತಹ ವ್ಯಕ್ತಿ. ಚಳವಳಿಯ ಗಂಧ-ಗಾಳಿ ತಿಳಿಯದ ಮನುಷ್ಯ ಚಳವಳಿಗೆ ಬಂದು ಮಾಡುವುದಾದರು ಏನು, ಎಂಬುದಾಗಿ ಯೋಚಿಸಿದವರೂ ಇರಲಿಲ್ಲ. ಜಾತಿಯ ಪ್ರಕೋಪ ಪ್ರಖರವಾಗಿದ್ದ ಕಾಲಘಟ್ಟದಲ್ಲಿ ಏನೇ ಆದರೂ ಸರಿ ಚಳವಳಿಗೆ ಸ್ಪಷ್ಟ ರೂಪವನ್ನು ನೀಡಬೇಕೆಂದು ಬಹಳ ಮಹತ್ವಕಾಂಕ್ಷಿಯಾಗಿ ರಾಜ್‌ಕುಮಾರ್ ಅವರು ಚಳವಳಿಗೆ ಪಾದಾರ್ಪಣೆ ಮಾಡಿದ್ದು, ಉತ್ತಮ ಚಾಲನೆ ಎಂದೇ ಹೇಳಬಹುದು.

ರಾಜ್‌ಕುಮಾರ್ ಅವರು ಚಳವಳಿಗೆ ಪಾದರ್ಪಣೆ ಮಾಡಿದ ನಂತರ ಅದರ ಸ್ವರೂಪವೇ ಬದಲಾಯಿತು. ಚಳವಳಿಯ ನಾಯಕತ್ವ ಹೇಗಿರಬೇಕು, ಜನತೆಯನ್ನು ಸೆಳೆಯುವುದು ಹೇಗೆ, ಅವರಲ್ಲಿ ಹೋರಾಟದ ಕಿಚ್ಚನ್ನು ಹಚ್ಚಿ ವ್ಯವಸ್ಥೆಯ ವಿರುದ್ಧ ಬಂಡೆಬ್ಬಿಸುವ ರೀತಿಯನ್ನು ರಾಜ್‌ಕುಮಾರ್ ಅವರು ತೋರಿಸಿಕೊಟ್ಟರು. ಚಳವಳಿಯಲ್ಲಿ ಸ್ವಲ್ಪವೂ ಏರುಪೇರಾಗದೆ ತಾವು ಅಂದುಕೊಂಡ ರೀತಿಯಲ್ಲಿ ಸಾಧಿಸಿ ತೋರಿಸಿದ ರಾಜ್‌ಕುಮಾರ್ ಅವರ ನಾಯಕತ್ವವನ್ನು ಈ ನಾಡಿನ ಜನತೆ ಆಗಲೇ ಒಪ್ಪಿಕೊಂಡಿತ್ತು. ಕಾರಣವೆಂದರೆ ರಾಜ್‌ಕುಮಾರ್ ಅವರ ಬರುವಿಕೆಯನ್ನು ಜನತೆ ಬಹಳ ನೀರಿಕ್ಷೆಯಿಂದ ಸ್ವಾಗತಿಸಿದರು. ಸಾಂಸ್ಕೃತಿಕ ನಾಯಕರಾದ ರಾಜ್‌ಕುಮಾರ್ ಅವರು ಯಾವ ರೀತಿ ಚಳವಳಿಯನ್ನು ಮುನ್ನಡೆಸಬಲ್ಲರು ಎಂಬುದು ಎಲ್ಲರ ನೀರಿಕ್ಷೆಯಾಗಿತ್ತು. ರಾಜ್‌ಕುಮಾರ್ ಅವರು ಬಹಿರಂಗವಾಗಿ ಈ ಹಿಂದೆ ಈ ರೀತಿ ಗುರ್ತಿಸಿಕೊಂಡವರಲ್ಲ. ತೆರೆಯ ಮೇಲೆ ಹೋರಾಟದ ಕಿಚ್ಚು ರೋಷವನ್ನು ತುಂಬಿದಂತಹವರು ಚಳವಳಿಯಲ್ಲಿ ಅವರು ನಡೆದ ಮಾರ್ಗ, ವಹಿಸಿದ ಪಾತ್ರ ಜನತೆಯನ್ನು ಆಕರ್ಷಿಸಿದ ರೀತಿ ಎಂಥವರನ್ನೂ ದಂಗು ಬಡಿಸುವಂತಿತ್ತು. ರಾಜ್‌ಕುಮಾರ್ ಅವರು ಚಳವಳಿಗೆ ಬರುವ ವೇಳೆಗಾಗಲೇ ಗೋಕಾಕರು ತಮ್ಮ ಭಾಷಾ ವರದಿಯನ್ನು ಸರ್ಕಾರಕ್ಕೆ ನಿಗಧಿತ ಅವಧಿಯಲ್ಲಿ ಸಲ್ಲಿಸಿದ್ದರು. ಸರಕಾರ ಈ ವರದಿಯನ್ನು ಜಾರಿಗೆ ತರುವ ಬದಲು ತಾನು ಈ ಹಿಂದೆ ನುಡಿದಂತೆ ನಡೆದು ಕೊಳ್ಳುವ ಬದಲು ತೆರೆಯ ಹಿಂದೆ ಸರಿಯ ತೊಡಗಿತ್ತು. ಈ ವರದಿಯಲ್ಲಿನ ಕೆಲವು ಅಂಶಗಳು ಭಾಷಾ ಅಲ್ಪಸಂಖ್ಯಾತರಿಗೆ ಧಕ್ಕೆಯನ್ನುಂಟು ಮಾಡುತ್ತವೆ ಎನ್ನುವ ನೆಪವೊಡ್ಡಿ ನಾನಾ ಭಾಗಗಳಲ್ಲಿ 'ಗೋಕಾಕ್ ವರದಿ ಜಾರಿಗೆ ಬರಲಿ'

ಎನ್ನುವ ಘೋಷಣೆಯೊಂದಿಗೆ ಚಳುವಳಿಗಳು ಪ್ರಾರಂಭವಾಗಿದ್ದವು. ಗೋಕಾಕ್ ವರದಿಗೆ ಬೆಂಬಲಿಸಿ ನಡೆಯುತ್ತಿದ್ದ ಹೋರಾಟಕ್ಕೆ ಸೂಕ್ತ ನಾಯಕತ್ವವಿಲ್ಲದೆ ಚಳವಳಿ ಎತ್ತತ್ತಲೋ ಸಾಗಿತ್ತು. ಆಗ ಬೆಂಗಳೂರಿನಲ್ಲಿ ಅಲ್ಪ ಸ್ವಲ್ಪ ಪರಿಚಿತರೆಂದರೆ ಜಿ. ನಾರಾಯಣಕುಮಾರ್, ಚಿದಾನಂದಮೂರ್ತಿಯಂತಹ ಕೆಲವರು ಮಾತ್ರ ಸಾಹಿತ್ಯಭಿಮಾನಗಳಿಗೆ ಚಿರಪರಿಚಿತರಾಗಿದ್ದರು. ಆದರೆ ಜನ ಸಾಮಾನ್ಯರಿಗೆ ಅಷ್ಟೊಂದು ಪರಿಚಿತರಾಗಿರಲಿಲ್ಲ. ಸಾಕಷ್ಟು ಪರಿಚಯವಿಲ್ಲದ ಸಾಹಿತಿಗಳು, ಅಧ್ಯಾಪಕರು, ವಕೀಲರು, ಯುವಕ, ಯುವತಿಯರು ಪ್ರತಿಕೆಯವರು ಚಳವಳಿಯ ಭಾಗವಾದರೂ ಹುಟ್ಟು ಹೋರಾಟಗಾರರೆನಿಸಿದ ವ್ಯಕ್ತಿಗಳು ಹೋರಾಟಕ್ಕೆ ಬರಲಿಲ್ಲ. ಬೆಂಗಳೂರು ನಗರ ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಕನ್ನಡಪರ ಸಂಘಟನೆಗಳು ತಮ್ಮ ತಮ್ಮ ಮೂಗಿನ ನೇರಕ್ಕೆ ಚಳವಳಿಯನ್ನು ಮುನ್ನೆಡೆಸುತ್ತಿದ್ದವು. ಅಲ್ಲದೆ ನಡೆಯುತ್ತಿದ್ದ ಪ್ರತಿಭಟನೆಗಳು ಒಂದೇ ವೇದಿಕೆಯಡಿ ಜರುಗುತ್ತಿರಲಿಲ್ಲ. ಪ್ರತಿಯೊಂದು ಸಂಘಟನೆಗಳು ತಮ್ಮದೇ ಆದ ಗುರಿ ಉದ್ದೇಶ ಹೊಂದಿದ್ದವು. ಹಾಗಾಗಿ ಚಳವಳಿಗಾರರಲ್ಲಿ ಎಲ್ಲಿಯೂ ಒಮ್ಮತ ಕಂಡುಬರಲಿಲ್ಲ. ಪ್ರಭಾವಿ ಸಾಹಿತಿಗಳು ತಮ್ಮದೇ ಆದ ಪ್ರತ್ಯೇಕ ಗುಂಪುಗಳನ್ನು ರಚಿಸಿಕೊಂಡು ಪ್ರತ್ಯೇಕ ಹೋರಾಟಗಳನ್ನು ನಡೆಸತೊಡಗಿದರು. ಈ ಹೋರಾಟಕ್ಕೆ ಏಕ ನಾಯಕತ್ವ ಏರ್ಪಡದೇ ಹೋರಾಟಗಳನ್ನು ನಡೆಸತೊಡಗಿದರು. ಈ ಹೋರಾಟಕ್ಕೆ ಗುರಿ ಒಂದೇ ಆದರೂ ತಲುಪುವ ಹಲವಾರು ಮಾರ್ಗಗಳು ಗೋಚರಿಸುವಂತಾಯಿತು. ಈ ನಡುವೆ ಚಳವಳಿಯ ಕಾವು ಅಕ್ಷರಸ್ಥ ಸಮಾಜವನ್ನು ಬಿಟ್ಟು ಹೊರಬರಲು ಬಹಳ ಸಮಯ ಹಿಡಿಯಿತು. ಅಲ್ಲದೆ ಚಳವಳಿಯ ಸ್ವರೂಪವನ್ನು ಜನಸಾನ್ಯರಿಗೆ ತಿಳಿಸಲು ಸಾಹಿತಿಗಳು ಬುದ್ಧಿಜೀವಿಗಳು ವಿಫಲರಾದರು. ಹಾಗಾಗಿ ಜನಸಾಮಾನ್ಯರು ಸ್ವಯಂ ಪ್ರೇರಣೆಯಿಂದ ಚಳವಳಿಯ ಕಡೆ ಬರಲಿಲ್ಲ.

೪.೨. ಜನಪ್ರಿಯತೆಯ ಆಯಾಮವಿಲ್ಲದ ಸಾಹಿತಿ ಕಲಾವಿದರ ಚಳವಳಿ

ಈ ಸಮಯದಲ್ಲಿ ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ರಾಜಧಾನಿಯಲ್ಲಿ ಕನ್ನಡವನ್ನು ಕಾಪಾಡಿ ಕೊಳ್ಳಲು ಶ್ರಮಿಸುತ್ತಿತ್ತು. ಸಾಹಿತಿಗಳು ಒಂದು ಕಡೆ ಸಭೆ ಸೇರಿದರೆ, ಸಾಹಿತ್ಯ ಪರಿಷತ್ತಿನ ಸದಸ್ಯರು ಮತ್ತೊಂದು ಕಡೆ ಸಭೆ ಸೇರುತ್ತಿದ್ದರು. ಇವರೆಲ್ಲಾ ಪತ್ರಿಕೆಗಳಲ್ಲಿ ಹೇಳಿಕೆ ನೀಡಿ ಪ್ರಚಾರ ಪಡೆದು ಸುಮ್ಮನಾಗುತ್ತಿದ್ದರೆ ವಿನಃ ವರದಿ ಅನುಷ್ಠಾನ ಸಮಯದಲ್ಲಿಯೆ ಮೌನವಾಗಿದ್ದರು. ಸಾಹಿತಿಗಳು ಬುದ್ದಿಜೀವಿಗಳು ಹೋರಾಟ ನಡೆಯುತ್ತಿದ್ದ ಕಾಲದಲ್ಲಿ ಹೋರಾಟ ಮಾಡದೆ ಬಹುಪಾಲು ಸಾಹಿತಿಗಳು ಲೇಖನಿಯಿಂದ ಸಾಹಿತ್ಯಿಕ ಹೋರಾಟ ಸೇವೆ ಮಾಡುತ್ತಿದ್ದೇವೆಂದು ತಿಳಿದಿದ್ದವರೇ ಹೆಚ್ಚು. ಪ್ರಚಾರ ಪ್ರಿಯರಾಗಿ ಸಾಹಿತಿಗಳು ಕೆಲವಾರು ಸಂದರ್ಭಗಳಲ್ಲಿ ಗುರ್ತಿಸಿ ಕೊಂಡಿದ್ದರು. "ಈ ವ್ಯಕ್ತಿಗಳು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರವನ್ನು ತೆಗೆದು ಕೊಳ್ಳಲು ವಿಫಲರಾದ ಕಾರಣ ಜನಸಾಮಾನ್ಯರು ಈ ಸಮಸ್ಯೆಯನ್ನು ತಮ್ಮ ಬದುಕಿನ ಪ್ರಶ್ನೆ ಎಂದು ಭಾವಿಸಲಿಲ್ಲ. ಮತ್ತು ಸಾಹಿತಿಗಳ ಮಾತಿಗೆ ಜನಸಾಮಾನ್ಯರು ಅಷ್ಟಾಗಿ ಸ್ಪಂದಿಸಲಿಲ್ಲ. ಹಾಗಾಗಿ ಚಳವಳಿಗೆ ಜನಪ್ರಿಯತೆಯ ಆಯಾಮ ಕಂಡುಬರಲಿಲ್ಲ."[೧] ಜನ ಸಾಮಾನ್ಯರು ಚಳವಳಿಯಲ್ಲಿ ಪಾಲ್ಗೊಳ್ಳುವಂತಹ ಅನಿವಾರ್ಯತೆ ಇದೆಯೆ? ಇದ್ದರೆ ಯಾವ ಭಾಷೆಗೆ ಎಷ್ಟು ಅಂಕ ನಿಗಧಿ ಪಡಿಸಬೇಕು ಎನ್ನುವ ಸಂಗತಿ 'ಅಕಾಡೆಮಿಕ್' ವಲಯಕ್ಕೆ ಸಂಬಂಧಿಸಿರುವುದರಿಂದ ಇದು ನಮಗೆ ಸಂಬಂಧಪಟ್ಟ ವಿಷಯವಲ್ಲ ಎಂದು ಜನಸಾಮಾನ್ಯರು ಭಾವಿಸತೊಡಗಿದರು. ಇಂತಹ ನಿರ್ಧಾರಗಳಿಂದಾಗಿ ಚಳವಳಿಗೆ ಯಾವುದೇ ರೀತಿಯ ತಾತ್ವಿಕ ತಳಹದಿ ಇಲ್ಲದೆ, ವಿಶಾಲ ಕರ್ನಾಟಕದ ತಳಹದಿಯ ಮೇಲೆ ನೆಲೆಯೂರಲು ವಿಫಲವಾಯಿತು. ಕಾರಣ ಇದು ಸಾಹಿತಿಗಳ ಮೂಗಿನ

ನೇರಕ್ಕೆ ಕಟ್ಟಿಕೊಂಡಿದ್ದಂತಹದಾಗಿದ್ದವು. ಇಂತಹ ವೈಜ್ಞಾನಿಕ ತಳಹದಿಯ ಮೇಲೆ ರೂಪಿತವಾಗಿ ನಡೆದಿದ್ದು ರೈತಚಳವಳಿ ಮಾತ್ರ.[೨] ರಾಜ್‌ಕುಮಾರ್ ಅವರು ಬರುವ ತನಕ ಈ ತಳಹದಿ ಚಳವಳಿಗೆ ದೊರೆಯಲೇ ಇಲ್ಲ. ಚಳವಳಿ ಬಿರುಸಾಗಿ ಸಾಗುವಾಗ ಒಂದು ವರ್ಗ ಮಾತ್ರ ಸಕ್ರಿಯವಾಗಿ ಹೋರಾಟದಲ್ಲಿ ತೊಡಗಿತ್ತು. ಉಳಿದಂತೆ ಸರ್ಕಾರಿ ಬಸ್ಸು, ಖಾಸಗಿ, ಸರ್ಕಾರಿ ಕಛೇರಿಗಳು ಕಾರ್ಖಾನೆಗಳು, ಹೋಟೆಲ್, ಸಿನಿಮಾ ಮಂದಿರಗಳು, ಶಾಲಾ ಕಾಲೇಜುಗಳು ತಮ್ಮ ಎಂದಿನ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದವು. ಒಂದು ದಿನ ಸಾಂಕೇತಿಕವಾಗಿ ಮುಷ್ಕರ, ಬಂದ್ ನಡೆಸಿದ್ದನ್ನು ಬಿಟ್ಟರೆ ಉಳಿದಂತೆ ಇವೆಲ್ಲವು ಸದಾ ಸೇವೆ ನೀಡತೊಡಗಿದ್ದವು. ಇಂತಹ ಕಾರ್ಯಗಳಿಂದ ಖಾಸಗಿ, ಸರ್ಕಾರಿ ಕಛೇರಿ, ಶಾಲಾ ಕಾಲೇಜುಗಳಲ್ಲಿ ಇರುವತಂಹವರು ಕನ್ನಡಿಗರಲ್ಲವೆ? ಎನ್ನುವ ಪ್ರಶ್ನೆ ಚಳವಳಿಗಾರರನ್ನು ಕಾಡಿತು.

ಆಗ ಬೆಂಗಳೂರು ನಗರದಲ್ಲಿ 'ಕನ್ನಡಿಗ ನಿರಾಶ್ರಿತ ಕನ್ನಡಿಗ'ನಾಗಿದ್ದ. ಅನ್ಯ ಭಾಷಿಕರು ಅಧಿಕ ಪ್ರಮಾಣದಲ್ಲಿ ವಲಸೆ ಬಂದು ಕನ್ನಡ ಭಾಷೆ ಸಂಸ್ಕೃತಿಗೆ ಧಕ್ಕೆಯೊದಗಿತ್ತು. ಈ ಕಾಲಘಟ್ಟದಲ್ಲಿ ಕನ್ನಡ ಚಳವಳಿಗಳು ಸ್ತಬ್ಧವಾಗಿದ್ದು, ಅನ್ಯಭಾಷಾ ಚಿತ್ರಗಳು ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಪ್ರದರ್ಶನ ಕಾಣುತ್ತಿದ್ದವು. ಆಗ ಚಳವಳಿಗೊಂದು ಹೊಸ ಆಯಾಮ ನೀಡಬೇಕಾದ ಅನಿವಾರ್ಯತೆಯಿತ್ತು ಮತ್ತು ಚಳವಳಿಯನ್ನು ಗಟ್ಟಿ ತಳಹದಿಯ ಮೇಲೆ ನಿಲ್ಲಿಸಿ ಮುನ್ನಡೆಸಬೇಕಾಗಿತ್ತು. ಈಗಾಗಲೆ ಸಾಹಿತಿ-ಕಲಾವಿದರ ಪ್ರತಿಭಟನೆಗಳಿಗೆ ಸರ್ಕಾರ ಯಾವ ವಿಧವಾದ ಗೌರವವನ್ನು ನೀಡದೆ ಅವರನ್ನು ನಿರ್ಲಕ್ಷಿತ್ತು.

೪.೩. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯಿಂದ ರಾಜ್‌ಕುಮಾರ್ ಅವರಿಗೆ ಕರೆ

ಇಂತಹ ಸಂದರ್ಭದಲ್ಲಿ ಧಾರವಾಡ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ಹೊಸ ದಿಕ್ಕಿನಲ್ಲಿ ಯೋಚಿಸತೊಡಗಿತು. ಚಂದ್ರಶೇಖರ ಪಾಟೀಲ, ಪಾಟೀಲಪುಟ್ಟಪ್ಪನವರಂಥ ಸಾಹಿತಿಗಳು ಕಾರ್ಯೋನ್ಮುಖರಾದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಸಂಘದ ಸದಸ್ಯರೆಲ್ಲರು ಚರ್ಚಿಸತೊಡಗಿದರು. ಸಭೆಯ ತೀರ್ಮಾನದಂತೆ ನಾಡಿನ ಹಿರಿಯ ಸಾಹಿತಿಗಳಾದ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಕುವೆಂಪು ಮುಂತಾದವರಿಗೆ ಸಮಿತಿಯಿಂದ ಪತ್ರಬರೆದು ಚಳವಳಿಗೆ ನಾಯಕತ್ವ ವಹಿಸಲು ಕೇಳಿ ಕೊಂಡರು. ''ನಾಡಿನ ಹಿರಿಯ ಸಾಹಿತಿಗಳಾದ ಇವರು ಸಮಿತಿಯ ಪತ್ರಕ್ಕೆ ಮರು ಉತ್ತರವಾಗಿ ಚಳವಳಿಯನ್ನು ಬೆಂಬಲಿಸಿಯೂ, ಬೆಂಬಲಿಸದಂತೆಯೂ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಪ್ರತಿಕ್ರಿಯಸಿ ಪತ್ರಬರೆದರು. ಇದರಿಂದ ಚಳವಳಿಗೆ ನೀರಿಕ್ಷಿತ ಪ್ರಮಾಣದಲ್ಲಿ ಬೆಂಬಲ ದೊರೆಯಲಿಲ್ಲವೆಂಬುದು ಖಚಿತವಾಯಿತು.''[೩]

ಚಳವಳಿಗಾರರಿಗೆ ಇದರಿಂದ ಸಾಕಷ್ಟು ನಿರಾಸೆಯು ಆಯಿತು. ಈ ಸಾಹಿತಿಗಳು ಕನ್ನಡದಿಂದ ಬೆಳೆದವರು, ಕನ್ನಡ ಭಾಷೆ ಸಂಸ್ಕೃತಿಯಿಂದಲೇ ಎಲ್ಲವನ್ನು ಪಡೆದವರು, ಕನ್ನಡಕ್ಕೆ ಕುತ್ತು ಬಂದಾಗ ಬಾರದವರು ಎನ್ನುವ ಮಾತನ್ನು ಚಂದ್ರಶೇಖರ ಪಾಟೀಲರು ಆಗಾಗ ನೆನಪಿಸಿಕೊಳ್ಳುತ್ತಾರೆ. ''ಆಗ ನಮಗನ್ನಿಸಿದ್ದು ನಾನಿರುವುದೇ ನಿಮಾಗಾಗಿ ನಾಡಿರುವುದೇ ನಮಗಾಗಿ'' ಎಂದು ಹಾಡಿನ ಮೂಲಕ ನಾಡಿನಲ್ಲಿ ಬಹುದೊಡ್ಡ ಹೆಸರನ್ನು ಸಂಪಾದಿಸಿದ್ದ ಡಾ.ರಾಜ್‌ಕುಮಾರ್ ಅವರಿಗೆ ನಾವು ಸಮಿತಿಯಿಂದ ಪತ್ರವನ್ನು ಬರೆದು ಅವರ ಗಮನವನ್ನು ಈ ಕಡೆ ಸೆಳೆಯೋಣ ಎನ್ನುವಂತ ಅಭಿಪ್ರಾಯ ಪಾಪು ಮತ್ತು ಚಂಪಾ ಅವರಿಂದ ವ್ಯಕ್ತವಾಯಿತು. ಕೂಡಲೇ ರಾಜ್‌ಕುಮಾರ್ ಅವರಿಗೆ

ಸಮಿತಿಯ ಕಡೆಯಿಂದ ಚಳವಳಿಯಲ್ಲಿ ಭಾಗವಹಿಸುವಂತೆ ಕೋರಿ ಪತ್ರ ಬರೆಯಲಾಯಿತು. ಮತ್ತು ಪತ್ರಿಕೆಯಲ್ಲಿ ಈ ಬಗ್ಗೆ ಪ್ರಕಟಣೆಯನ್ನು ಸಮಿತಿ ನೀಡಿತ್ತು".'' ಕನ್ನಡಕ್ಕೆ ಉಸಿರು ತುಂಬುವ ಈ ಆಂದೋಲನ ಮತ್ತು ಚಳವಳಿಯಲ್ಲಿ ಉಂಟಾಗಿದ್ದ ಶೂನ್ಯ ವಾತಾವರಣವನ್ನು ತುಂಬಬೇಕೆಂಬ ಬೇಡಿಕೆ ಅದರಲ್ಲಿತ್ತು. ಮತ್ತೊಂದು ಕಡೆ ಪಾಟೀಲ ಪುಟ್ಟಪ್ಪನವರು 'ಕೇಂದ್ರ ಕನ್ನಡ ಕ್ರಿಯಾ ಸಮಿತಿ'ಯಿಂದ ಬರೆದ ಪತ್ರವು ಸಾಂಸ್ಕೃತಿಕ ಹಾಗು ಸಾಹಿತ್ಯಿಕ ವಲಯದ ದಿಗ್ಗಜರು ಚಳವಳಿಗೆ ಬಾರದೇ ಇದ್ದ ಸಮಯದಲ್ಲಿ ಚಳವಳಿಯನ್ನು ಮುನ್ನಡೆಸಿ, ಕನ್ನಡ ನಾಡಿನ ಶಕ್ತಿಯನ್ನು ಸರ್ಕಾರದ ವಿರುದ್ಧ ಪ್ರದರ್ಶಿಸಬೇಕಾಗಿದ್ದ ಅನಿವಾರ್ಯತೆಯಲ್ಲಿ ರಾಜ್‌ಕುಮಾರ್ ಅವರು ಚಳವಳಿಗೆ ಧುಮುಕುವಂತೆ ಮಾಡಿತು. ಈ ಘಟನೆ ನಾಡಿನಾದ್ಯಂತ ಜಾಗೃತಿಯನ್ನುಂಟು ಮಾಡಿತು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಸರ್ಪಭೂಷಣ ಮಠದಲ್ಲಿ ಚಳವಳಿಯ ರೂಪರೇಷೆಗಳನ್ನು ಚರ್ಚಿಸಲು ಕೆಲವು ಸಾಹಿತಿ-ಕಲಾವಿದರು, ಕನ್ನಡಪರ ಚಿಂತಕರು ನೆರೆಯುತ್ತಿದ್ದರು. ಸರ್ಪಭೂಷಣ ಮಠದಲ್ಲಿ ಸೇರಿದಂತಹ ಸಾಹಿತಿಗಳು ರಾಜ್‌ಕುಮಾರ್ ಅವರನ್ನು ಚಳವಳಿಗೆ ಕರೆತರಲು ಚಿತ್ರನಟರಾದ ಅಶೋಕ್ ಮತ್ತು ಲೋಕೇಶ್ ಅವರನ್ನು ಕೇಳಿಕೊಂಡರು. ಇವರು ತಡಮಾಡದೆ ಮದ್ರಾಸ್‌ನಗರದಲಿದ್ದ ರಾಜ್‌ಕುಮಾರ್ ಅವರ ನಿವಾಸಕ್ಕೆ ತೆರಳಿ ರಾಜ್ಯದ ಸದ್ಯದ ಪರಿಸ್ಥಿತಿಯನ್ನು ವಿವರಿಸಿದರು. ಚಳವಳಿಯ ಸ್ವರೂಪವನ್ನು ವಿವರಿಸಿದ ಇವರು "ನಮ್ಮ ನೆರೆರಾಜ್ಯಗಳು ಏಕೀಕರಣದ ನಂತರ ಅವರವರ ಭಾಷೆಗಳನ್ನು ಭದ್ರಪಡಿಸಿ ಕೊಂಡಿದ್ದಾರೆ. ಆದರೆ ಆ ಕೆಲಸ ನಮ್ಮಲ್ಲಿ ಬಹಳ ಹಿಂದಿನಿಂದಲೂ ಆಗಿಲ್ಲ. ಈಗ ಎದ್ದಿರುವ ಕನ್ನಡಿಗರ ಸಮಸ್ಯೆ ಕೇವಲ ಸಾಹಿತಿಗಳ ಸಮಸ್ಯೆಯಲ್ಲ. ಒಟ್ಟಾರೆ ಇದು ನಮ್ಮ ಬದುಕಿನ ಸಮಸ್ಯೆ ಮತ್ತು ಪ್ರಶ್ನೆಯಾಗಿದೆ. ಇದು ಕನ್ನಡಿಗರ ಹೃದಯ ವೈಶ್ಯಾಲತೆಯೋ ಅಥವಾ ದೌರ್ಭಾಗ್ಯವೊ ತಿಳಿಯದು. ಅದ್ದರಿಂದ ತಾವು ೩ಕೋಟಿ ಕನ್ನಡಿಗರ ಪರವಾಗಿ ಚಳವಳಿಗೆ ಧುಮುಕಿ ನಾಯಕ್ವತ ವಹಿಸಿಕೊಳ್ಳ ಬೇಕು ಎನ್ನುವುದು ನಾಡಿನ ಚಿಂತಕರ, ಸಾಹಿತಿಗಳ, ಮತ್ತು ಅಭಿಮಾನಿಗಳ ಇಚ್ಛೆಯಾಗಿದೆ. ನಿಮ್ಮ ಬರುವಿಕೆಗಾಗಿ ಇಡೀ ನಾಡೇ ಎದುರು ನೋಡುತ್ತಿದೆ[೫]'' ಎನ್ನುವಂತಹ ಮಾತನ್ನು ರಾಜ್‌ಕುಮಾರ್‌ರಿಗೆ ಹೇಳಿದರು. ಆಗ ರಾಜ್‌ಕುಮಾರ್ ಅವರಿಗೆ ಇಲ್ಲ ಎನ್ನಲು ಮನಸ್ಸು ಬರಲೇ ಇಲ್ಲ. ಅದಕ್ಕಾಗಿ ಸೂಕ್ತ ವೇದಿಕೆಯನ್ನು ಸಿದ್ದಪಡಿಸಿ ಎನ್ನುವಂತಹ ಮಾತು ಅವರಿಂದ ವ್ಯಕ್ತವಾಯಿತು. ರಾಜಕುಮಾರ್ ಹೆಚ್ಚಾಗಿ ಓದದೇ ಇದ್ದರೂ ಸಾಮಾನ್ಯಜ್ಞಾನ ಅವರಲ್ಲಿ ಹೇರಳವಾಗಿತ್ತು. ಸಾಹಿತಿಗಳ ಬಗ್ಗೆ ಅಪಾರ ಗೌರವಿತ್ತು. ಸಾಹಿತಿಗಳು ನಡೆಸುತ್ತಿರುವ ಈ ಚಳವಳಿ ನ್ಯಾಯವಾದ ದಿಕ್ಕಿನಲ್ಲಿ ನಡೆಯುತ್ತಿದೆ ಮತ್ತು ನಾಡಿನ ಹಿರಿಯ ವಯೋವೃದ್ದ ಸಾಹಿತಿಗಳು ಚಳವಳಿಗೆ ಧುಮುಕಿರುವಾಗ ನಾನ್ಯಾಕೆ ತಡಮಾಡುವುದು, ಇದು ಉಚಿತವಲ್ಲ ಎನ್ನುವುದು ರಾಜಕುಮಾರ್ ನಿರ್ಧಾರವಾಗಿತ್ತು. ಅದೇ ರೀತಿ ರಾಜ್‌ಕುಮಾರ್ ಅವರನ್ನು ಚಳವಳಿಗೆ ಕರೆತರಲು ಪಿ.ವಿ. ನಾರಾಯಣ, ಚಿದಾನಂದಮೂರ್ತಿ, ಸಾ.ರಾ. ಗೋವಿಂದು ಮುತಾದವರು ಪ್ರಯತ್ನಗಳನ್ನು ನಡೆಸುತ್ತಿದ್ದರು. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಸಾ.ರಾ. ಗೋವಿಂದು ರಾಜ್‌ಕುಮಾರ್ ಅವರ ಚಿತ್ರ ಯುನಿಟ್‌ನಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ರಾಜ್ ಒಡನಾಟದಲ್ಲಿದ್ದ ಇವರನ್ನು ಸಹ ಕೆಲವು ಸಾಹಿತಿಗಳು ಚಿಂತಕರು ರಾಜಕುಮಾರ್ ಅವರನ್ನು ಕರೆತರುವಂತೆ ಕೇಳಿಕೊಂಡಿದ್ದುಂಟು. ಕೂಡಲೆ ಕಾರ್ಯೋನ್ಮುಖರಾದ ಸಾ. ರಾ. ಗೋವಿಂದು ಅವರು ಪತ್ರಿಕೆಯಲ್ಲಿ ಬಂದಿದ್ದಂತಹ ಪ್ರಕಟಣೆಗಳು, ಕರಪತ್ರಗಳು, ಭಿತ್ತಿ ಚಿತ್ರ ಮುಂತಾದವುಗಳನ್ನು ಸಂಗ್ರಹಿಸಿಕೊಂಡು ರಾಜಕುಮಾರ್ ಅವರ ನಿವಾಸಕ್ಕೆ ತೆರಳಿದರು. ಆ ವೇಳೆಗಾಗಲೆ ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ ಅವರು ಪತ್ರಿಕೆಗಳಲ್ಲಿ ಹೊರಡಿಸಿದ್ದ ಪ್ರಕಟಣೆಗಳು, ಬರೆದಿದ್ದ ಪತ್ರಗಳು ರಾಜ್‌ಕುಮಾರ್ ಕೈ ಸೇರಿದ್ದವು.

ಸಾ.ರಾ. ಗೋವಿಂದು ರಾಜ್‌ಕುಮಾರ್ ನಿವಾಸಕ್ಕೆ ತೆರಳುವಷ್ಟರಲ್ಲಿ ನಿರ್ದೇಶಕರಾದ ಭಗವಾನ್ ಅವರ ಜೊತೆಯಲ್ಲಿ ರಾಜಕುಮಾರ್ ಚಳವಳಿಯ ವಿಚಾರವಾಗಿ ಚರ್ಚಿಸುತ್ತಿದ್ದರು. ಅದೇ ಸಮಯದಲ್ಲಿ ಕೆಲವು ಆಪ್ತರೊಂದಿಗೆ ಸಮಾಲೋಚನೆ ನಡೆಸಿದ ರಾಜ್ ಅವರು ಭಗವಾನ್ ಮತ್ತು ಸಾ.ರಾ ಗೋವಿಂದು ಅವರೊಂದಿಗೆ ಚಳವಳಿಗೆ ಭಾಗವಹಿಸುವ ವಿಚಾರ ಪ್ರಸ್ತಾಪಿಸಿ, ಅದೇ ದಿನ ಮದ್ರಾಸ್ ನಗರದಿಂದ ಪತ್ರಿಕಾ ಹೇಳಿಕೆ ನೀಡಿದರು[೬] ಈ ಸಂದರ್ಭದಲ್ಲಿ ರಾಜ್‌ಕುಮಾರ್ ಹೇಳಿದ ಮಾತೇನೆಂದರೆ. ''ಈ ರಾಜ್‌ಕುಮಾರ್‌ನನ್ನು ಮೂವತ್ತು ವರುಷಗಳ ಕಾಲ ಕನ್ನಡದ ಜನತೆ ಸಲಹಿದ್ದಾರೆ, ನನ್ನಲ್ಲಿರುವ ಕಲೆಯನ್ನು ಗುರ್ತಿಸಿ ನನ್ನ ಕುಟುಂಬಕ್ಕೆ ಅನ್ನದಾತರಾಗಿದ್ದಾರೆ. ಇಂತಹ ಸಮಯದಲ್ಲಿ ನನ್ನ ಮನೆಗೆ ಬೆಂಕಿಬಿದ್ದಿರುವಾಗ ನಾನು ಸುಮ್ಮನಿರುವುದು ಸಾಧ್ಯವೆ, ನಾನು ಸುಮ್ಮನಿದ್ದರೆ ಕನ್ನಡ ತಾಯಿಗೆ ದ್ರೋಹ ಬಗೆದಂತೆ. ಕನ್ನಡದ ಉಳಿವಿಗಾಗಿ ನನ್ನ ದೇಹ ಹಾಗೂ ಪ್ರಾಣವನ್ನು ಅರ್ಪಿಸಲು ನಾನು ಸದಾಸಿದ್ಧ[೭]'' ಎಂಬ ಹೆಳಿಕೆ ಕನ್ನಡಿಗರನ್ನು ಜಾಗೃತಿಗೊಳಿಸಿತು. ಇಡೀ ನಾಡಿನ ಜನತೆ ಮೈಕೊಡವಿ ರಾಜ್‌ಕುಮಾರ್ ಬರುವಿಕೆಗಾಗಿ ನಿಂತರು. ಹೆದರಿಕೆಯಿಂದ ಮೂಲೆ ಹಿಡಿಯುತ್ತಿದ್ದ ಕನ್ನಡ ಹೃದಯವಂತರ ಮನಸ್ಸುಗಳು ಕಾತುರದಿಂದ ಕಣ್ಣರಳಿಸಿದವು. ''ರಾಜಕುಮಾರ್ ಅವರು ಐಷಾರಾಮದ ಅಡಿಯಲ್ಲಿ ಜೀವಿಸುತ್ತಿದ್ದ ಈ ಸಮಯದಲ್ಲಿ ಚಳವಳಿಯ ಮೂಲಕ ದಣಿಯಲು ಸಿದ್ಧರಾದರು. ಹಾಗೆಯೇ ತಮ್ಮನ್ನು ಇಷ್ಟಪಡುವ ಅಭಿಮಾನಗಳನ್ನು ಒಮ್ಮೆ ಹತ್ತಿರದಿಂದ ನೋಡುವ ಬಯಕೆಯು ಅವರ ನಿರ್ಧಾರದ ಒಂದು ಹಿನ್ನೆಲೆಯಾಗಿರಬಹುದು.[೮]

೪.೪. ರಾಜಕುಮಾರ್ ಅವರ ಸಮಾಜಮುಖಿ ಧೋರಣೆ ಅನಾವರಣ

ರಾಜಕುಮಾರ್ ಅವರು ಚಳವಳಿಯ ಮುಖ್ಯವಾಹಿನಿಗೆ ಬರುತ್ತಿದ್ದಾರೆ ಎನ್ನುವ ಮಾಹಿತಿ ಬಿತ್ತರವಾದ ಕೂಡಲೇ ನಾಡಿನಾದ್ಯಂತ ವಿಚಾರ ಹೆಚ್ಚು ಹೆಚ್ಚು ಚರ್ಚೆಗೆ ಗ್ರಾಸವಾಗತೊಡಗಿತು. ಮನೆ ಮನೆಗಳಲ್ಲಿ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು. ಕವಿರತ್ನ ಕಾಳಿದಾಸ ಚಿತ್ರೀಕರಣದಲ್ಲಿ ತೊಡಗಿದ್ದ ರಾಜ್‌ಕುಮಾರ್ ಅವರು ಕೂಡಲೇ ಚಿತ್ರೀಕರಣ ಸ್ಥಗಿತಗೊಳಿಸಿ ಬೆಂಗಳೂರಿಗೆ ಧಾವಿಸಿದರು. ನೂತನವಾಗಿ ತಮ್ಮ 'ವಜ್ರೇಶ್ವರಿ ಕಂಬೈನ್ಸ್'ನ ಕಛೇರಿಯಲ್ಲಿ ಅದೇ ದಿನ ರಾಜ್‌ಕುಮಾರ್ ಅವರನ್ನು ಕಾಣಲು ಪಾಟೀಲ ಪುಟ್ಟಪ್ಪ, ಚಿತ್ರನಟರಾದ ಅಶೋಕ್, ಲೋಕೇಶ್, ಶಂಕರ್‌ನಾಗ್, ಅನಂತನಾಗ್ ಮುಂತಾದ, ಹಲವಾರು ವ್ಯಕ್ತಿಗಳು ಭೇಟಿಯಾಗಿ ರಾಜ್ಯದ ಸದ್ಯದ ಪರಿಸ್ಥಿತಿಯನ್ನು ವಿವರಿಸಿದರು. ಸರ್ಕಾರ ನಮ್ಮ ಬೇಡಿಕೆಯನ್ನು ಈಡೇರಿಸಲು ಪ್ರಯತ್ನಿಸುತ್ತಿಲ್ಲ ಜೊತೆಗೆ ಸಾಹಿತಿಗಳನ್ನು ಗಮನಕ್ಕೆ ತಗೆದುಕೊಳ್ಳುತ್ತಿಲ್ಲ, ವಾಸ್ತವಾಗಿ ಗೋಕಾಕ್‌ವರದಿಯ ಬಗ್ಗೆ ವಿವರವಾಗಿ ಸರ್ಕಾರ ತಿಳಿಯುವ ಪ್ರಯತ್ನ ಸರ್ಕಾರ ಮಾಡುತ್ತಿಲ್ಲ. ಈ ಕಾಲಘಟ್ಟದಲ್ಲಿ ಕನ್ನಡಕ್ಕೆ ಮನ್ನಣೆ ಸಿಗದೇ ಹೋದರೆ ಮುಂದಿನ ದಿನಗಳಲ್ಲಿ ಭಾಷೆ ಮತ್ತು ಸಂಸ್ಕೃತಿಯು ಅಧೋಗತಿಗೆ ಇಳಿಯುತ್ತದೆ. ಈಗಲೇ ಅನ್ಯಭಾಷೆಗಳ ಪ್ರಭಾವನ್ನು ತಡೆಯದೇ ಹೋದಲ್ಲಿ ಮುಂದಿನ ಪೀಳಿಗೆ ಭಾರಿ ತೊಂದರೆ ಅನುಭವಿಸಬೇಕಾಗುತ್ತದೆಂದು ವಿವರಿಸಿದರು. ಅಲ್ಲದೆ ರಾಜ್ಯದಲ್ಲಿ ನೀವು ನೀಡಿರುವ ಪತ್ರಿಕಾ ಹೇಳಿಕೆಯಿಂದ ಜನತೆ ಹರ್ಷಚಿತ್ತರಾಗಿದ್ದಾರೆ. ತಮ್ಮ ಮುಂದಾಳತ್ವ ಈ ಚಳವಳಿಗೆ ಅಗತ್ಯವಾಗಿ ಬೇಕಾಗಿದೆ ಎಂಬುದಾಗಿ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಆಗ ರಾಜ್‌ಕುಮಾರ್ ಜೊತೆಯಲ್ಲಿದ್ದಂತಹ ಪಾರ್ವತಮ್ಮವನರು ಸಹ ಮರು ಮಾತನಾಡದೆ ''ಕನ್ನಡದ ಕೆಲಸಕ್ಕೆ ಸೇವೆಗೆಯ್ಯಲು ನಾವು ಸದಾ ಸಿದ್ಧರೆಂದು'' ಪುನರುಚ್ಚರಿಸಿದರು. ರಾಜ್‌ಕುಮಾರ್ ಮಾತನಾಡಿ ನೀವು

ಎಲ್ಲ ವ್ಯವಸ್ಥೆಗಳನ್ನು ಸಿದ್ಧಪಡಿಸಿಕೊಂಡು ಯಾವತ್ತು ಬರಬೇಕು ತಿಳಿಸುವಿರೋ ಅಂದೇ ನಾವು ಚಳವಳಿಯಲ್ಲಿ ಪಾಲ್ಗೊಳ್ಳುತ್ತೇವೆ'' ಎನ್ನುವ ಮಾತನ್ನು ಪಾಟೀಲ ಪುಟ್ಟಪ್ಪನವರಿಗೆ ಹೇಳಿದರು. ರಾಜ್‌ಕುಮಾರ್ ಅವರು ಚಳವಳಿಯಲ್ಲಿ ಭಾಗವಹಿಸುವದಕ್ಕಿಂತ ಮುನ್ನ ಚಳವಳಿ ನಿಂತ ನೀರಾಗಿತ್ತು. ಅದೇ ಮೆರವಣಿಗೆ. ಅದೇ ಸತ್ಯಾಗ್ರಹ, ಪ್ರತಿಭಟನೆಗಳು ಸರ್ಕಾರದ ವಿರುದ್ಧ ಪುನರಾವರ್ತನೆಯಾಗುತ್ತಿದ್ದವು. ಚಳವಳಿಯಲ್ಲಿ ಹೊಸತನ್ನು ಕಾಣಲು ಸಾಧ್ಯವಾಗಿರಲಿಲ್ಲ. ಸಾಹಿತಿ-ಕಲಾವಿದರ ಕಡೆ ಸರ್ಕಾರದ ಗನಮನವಿರಲಿಲ್ಲ. ಕೆಲವೇ ಸಾಹಿತಿಗಳು ಬೀದಿಗಿಳಿದು ಚಳವಳಿ ಮಾಡುವುದು ಕೆಲವೇ ಮಂದಿಗೆ ತಲುಪುತ್ತಿತ್ತು. ಜೊತೆಗೆ ಸಾಹಿತಿಗಳಿಗೆ ಅಂತಹ ಜನಪ್ರಿಯತೆಯ ಆಯಾಮವಿರಲಿಲ್ಲ. ಸಾಹಿತಿಗಳಿಗೆ ಅವರದೇ ಆದ ಬರವಣಿಗೆ, ಓದು, ಪ್ರಶಸ್ತಿ, ಗೌರವ, ಅವರದೇ ಆದ ಲೋಕದಲ್ಲಿ ವಿಹರಿಸುತ್ತಿದ್ದರು. ಇವರ ಕಾರ್ಯ ಚಟುವಟಿಕೆಗಳು ಚಳವಳಿಗೆ ಜನಸಾಮಾನ್ಯರನ್ನು ಬೃಹತ್ ಪ್ರಮಾಣದಲ್ಲಿ ಕರೆತರಲಿಲ್ಲ. ಕೆಲವು ಸಾಹಿತಿಗಳು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದರು. ಚಿದಾನಂದಮೂರ್ತಿಗಳತಂಹ ಹಲವಾರು ಸಾಹಿತಿಗಳು ಬೆಳಕಿಗೆ ಬಂದಿದ್ದು ಗೋಕಾಕ್ ಚಳವಳಿಯ ಮೂಲಕವೇ. ಅದಕ್ಕೆ ಮುನ್ನ ಇವರಿಗೆ ಇಡೀ ರಾಜ್ಯವನ್ನು ಪ್ರತಿನಿಧಿಸುವಂತಹ ಜನಪ್ರಿಯತೆ ಇರಲಿಲ್ಲ.

ಚಳವಳಿಯೆಂಬುದು ಆಗ ಜನಸಾಮಾನ್ಯರ ಬದುಕಿನ ಪ್ರಶ್ನೆ ಎಂದು ಯಾರೂ ಭಾವಿಸಿರಲಿಲ್ಲ. ಭಾವಿಸಿದ್ದವರೆಲ್ಲರು ಕನ್ನಡ ಉಪಾಧ್ಯಾಯರು, ಪಂಡಿತರು, ಸಾಹಿತಿಗಳು ಮಾತ್ರ. ಇವರು ಚಳವಳಿಯಲ್ಲಿ ಬೆರಳೆಣಿಕೆಯಷ್ಟು ಮಂದಿ ಇದ್ದರು. ಅಕ್ಷರಸ್ಥ ಸಮುದಾಯ ಮಾತ್ರವೇ ಚಳವಳಿಯಲ್ಲಿಹೆಚ್ಚಾಗಿ ಪ್ರಚಾರ ತೆಗೆದುಕೊಂಡು, ಸಾಹಿತಿಗಳು ಮತ್ತು ಅಕ್ಷರಸ್ಥ ಸಮಸ್ಯೆಯನ್ನಾಗಿ ಬಿಂಬಿಸಿದರು. ಇದರಿಂದಾಗಿ ಗ್ರಾಮೀಣ ಭಾಗದ ಜನತೆಗೆ ಗೋಕಾಕ್ ವರಿದಯ ಬಗ್ಗೆ ಏನು ತಿಳಿಯದಂತಾಯಿತು. ಜನಸಾಮಾನ್ಯರ ಮಟ್ಟಕ್ಕೆ ಚಳವಳಿಯನ್ನು ತೆಗೆದುಕೊಂಡು ಹೋಗುವಂತ ಕೆಲಸವನ್ನು ಯಾವ ವ್ಯಕ್ತಿಯೂ ಮಾಡಲಿಲ್ಲ. ಪತ್ರಿಕೆಗಳಲ್ಲಿ ಬಹುತೇಕ ಮಾಹಿತಿಗಳು ಜನತೆಯನ್ನು ದ್ವಂದ್ವಕ್ಕೆ ಈಡುಮಾಡುವಂತಾಯಿತು. ಇದರಿಂದಗಾಗಿ ಕೆಲವು ಸಾಹಿತಿಗಳು ಹೆಚ್ಚಿನ ಪ್ರಚಾರ ಪಡೆದರೇ ಹೊರತು ಸಂಘಟನೆ ಮತ್ತು ಹೋರಾಟವನ್ನು ರಾಜ್ಯಮಟ್ಟದಲ್ಲಿ ಸಂಘಟಸಲಿಲ್ಲ. ಇದರಿಂದ ಸರ್ಕಾರದ ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ ಎಂಬುವುದು ಸ್ಪಷ್ಟವಾಯಿತು. ಒಂದು ಚಳವಳಿ ಗಟ್ಟಿ ನೆಲೆಗಟ್ಟಿನ ಮೇಲೆ ನಿಲ್ಲಬೇಕಾದರೆ ಅದು ರಾಜ್ಯಮಟ್ಟದ ವ್ಯಾಪ್ತಿ ಪಡೆದುಕೊಳ್ಳಬೇಕಾಗುತ್ತದೆ. ಆಗಲೆ ಆದಕ್ಕೊಂದು ಶಕ್ತಿ, ಸಾಮರ್ಥ್ಯ, ಸ್ವರೂಪ ಲಭಿಸುವಂತಾಗುತ್ತದೆ. ಈ ಗೋಕಾಕ್ ಚಳವಳಿ ಸಾಹಿತಿ ಕಲಾವಿದರ ಮುಂದಾಳತ್ವದಲ್ಲಿ ರಾಜ್ಯಮಟ್ಟದ ಸ್ವರೂಪವನ್ನು ಪಡೆಯಲು ಸಾಧ್ಯವಾಗಲೇ ಇಲ್ಲ. ಬೆಂಗಳೂರು, ಧಾರವಾಢ, ಮೈಸೂರಿನಂಥ ನಗರಗಳಲ್ಲಿ ಚಳವಳಿಯ ಪ್ರಖರತೆ ಹೆಚ್ಚಾಗಿ ಕಂಡು ಬಂದದ್ದು ಹೊರತುಪಡಿಸಿದರೆ ಉಳಿದಂತೆ ಚಳವಳಿ ನೀರಸವಾಗಿತ್ತು. ಚಳವಳಿಯಲ್ಲಿ ಭಾಗವಹಿಸಿದಂಥ ಅದೆಷ್ಟೋ ಚಳವಳಿಗಾರರಿಗೆ ವರದಿಯ ಬಗ್ಗೆ ಸಂಪೂರ್ಣ ಮಾಹಿತಿ ಇರಲಿಲ್ಲ. ಯಾವುದೆ ಸಾಹಿತಿಯ ಒಂದೇ ಕೂಗಿಗೆ ಇಡೀ ನಾಡು ಎಚ್ಚೆತ್ತುಕೊಳ್ಳವಂತಹ ಪರಿಸ್ಥಿತಿ ಇರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಿಳಿಯಬಹುದಾದ ವಿಚಾರವೇನಂದರೆ ಸಾಹಿತ್ಯಿಕ, ಸಾಂಸ್ಕೃತಿಕ ರಾಜಕೀಯ ವಲಯಗಳಲ್ಲಿ ಇಡೀ ರಾಜ್ಯವನ್ನು ಪ್ರತಿನಿಧಿಸುವಂತಹ ಮತ್ತು ಎಲ್ಲಾ ಹೋರಾಟಗಾರರನ್ನು ಸಾಹಿತಿಗಳನ್ನು ಏಕನಾಯಕ್ಕತದಡಿಯಲ್ಲಿ ತರಬಲ್ಲಂತಹ ಸೂಕ್ತನಾಯಕನ ಕೊರತೆ ಎದ್ದು ಕಾಣುವಂತಾಯಿತು.

ಇಂಥ ಸಮಯದಲ್ಲಿ ರಾಜ್‌ಕುಮಾರ್ ಅವರು ತಮ್ಮ ವ್ಯವಹಾರಿಕ ಲಾಭವನ್ನು ಬದಿಗಿರಿಸಿ ಚಳವಳಿಯ ಕಡೆ ಗಮನ ಹರಿಸಿದರು. ಇದು ಅವರ ಸಮಾಜಮುಖಿ ಧೋರಣೆಯನ್ನು ಅನಾವರಣಗೊಳಿಸಿದ ಸಂದರ್ಭವೆಂದು

ಹೇಳಬಹುದು. ಗೋಕಾಕ್ ಚಳವಳಿಯ ಪ್ರಾರಂಭ ಅಷ್ಟೊಂದು ಪ್ರಭಾವಯುತವಾಗಿರಲಿಲ್ಲ. ಕೆಲವೇ ಸಾಹಿತಿಗಳು ಕನ್ನಡಾಭಿಮಾನಿಗಳ ಹೋರಾಟವಾಗಿ ಕಂಡು ಬರುತ್ತಿತ್ತು. ಸಾಹಿತಿ ಕಲಾವಿದರ ಹೋರಾಟ, ಚಳವಳಿಗಳಲ್ಲಿ ಲಕ್ಷಾಂತರ ಮಂದಿ ಹೋರಾಟಗಾರರು ಭಾಗವಹಿಸಿರುವ ಉದಾಹರಣೆಗಳಿಲ್ಲ. ಮಾಧ್ಯಮಗಳಲ್ಲಿ ಇದರ ಸಂಖ್ಯೆಯನ್ನು ದ್ವಿಗುಣಗೊಳಿಸುತ್ತಾ ಬರಲಾಯಿತು. ಒಂದು ಸರ್ಕಾರವನ್ನು ಕೆಳಗಿಳಿಸುವಂತಹ ಸಾಮರ್ಥ್ಯ ಚಳವಳಿಗಾರರಿಗೆ ಇರಲಿಲ್ಲ. ಇದು ರಾಜ್‌ಕುಮಾರ್ ಅವರ ಪ್ರವೇಶದಿಂದ ಮಾತ್ರವೇ ಸಾಧ್ಯವಾಯಿತು. ಸಾಹಿತಿಗಳು, ಚಿಂತಕರು, ಕನ್ನಡಪರ ಸಂಘಟನೆಗಳು ನಾಡನ್ನು ಪ್ರತಿನಿಧಿಸುವಂತಹವರು ಸರ್ಕಾರಕ್ಕೆ ಪತ್ರಿಕೆಗಳ ಮೂಲಕ, ಪ್ರತಿಭಟನೆ ಸತ್ಯಾಗ್ರಹಗಳ ಮೂಲಕ ಎಚ್ಚರಿಕೆ ನೀಡುತ್ತಿದ್ದರೇ ವಿನಃ ಕಾರ್ಯತಃ ಮಾಡಿ ತೋರಲಿಲ್ಲ. ಆಳುವ ಸರ್ಕಾರವನ್ನು ಅಲುಗಾಡಿಸುವಂತಹ ಕಾರ್ಯಕ್ರಮಗಳು ರಾಜ್‌ಕುಮಾರ್ ಬರುವುದಕ್ಕಿಂತ ಮುನ್ನ ರೂಪಿತವಾಗಲಿಲ್ಲ. ಚಳವಳಿಯಲ್ಲಿ ಹೊಸತನ ಮೂಡಲು ಸಮಯ ಬೇಕಾಯಿತು. ಬೆಂಗಳೂರು ನಗರ ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಕನ್ನಡಿಗರೆನಿಸಿಕೊಂಡಿದ್ದಂತಹ ಬಹುಪಾಲು ಜನತೆ ಚಳವಳಿಯಿಂದ ದೂರ ಸರಿದಿದ್ದರು.

ನಮಗೇನೂ ಆಗಿಲ್ಲವೆಂಬತೆ ಸರ್ಕಾರಿ, ಖಾಸಗಿ ವಾಹನಗಳು ಸಂಚರಿಸುತ್ತಿದ್ದವು. ಕಾಲೇಜುಗಳು ಶಾಲಾ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದವು. ಜನಸಾಮಾನ್ಯರಂತೂ ಇದು ಸಾಹಿತಿಗಳ ಸಮಸ್ಯೆ ನಮ್ಮದಲ್ಲವೆಂದು ತಿಳಿದು ಚಳವಳಿಗಾರರನ್ನು ವಕ್ರದೃಷ್ಟಿಯಿಂದ ನೋಡತೊಡಗಿದರು. ಎಲ್ಲಾ ಚಳವಳಿಗಳಲ್ಲಿ ನಡೆಯುವಂತೆ ಇಲ್ಲಿಯೂ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರು. ಸರ್ಕಾರಿ ವಾಹನಗಳಿಗೆ ಬೆಂಕಿಹಚ್ಚಿದರು. ರಸ್ತೆಗಳಿಗೆ ಕಲ್ಲು ಹಾಕಿ ಪ್ರತಿಭಟನೆ ನಡೆಸಿದರು. ರೈಲು ತಡೆ ಬಸ್ಸು ತಡೆ ಮಾಡಿದರು. ಸಾಂಕೇತಿಕವಾಗಿ ಅಲ್ಲಲ್ಲಿ ಬಂದ್ ಆಚರಿಸಿ ಕನ್ನಡಿಗರು ಸಮ್ಮನಾದರು. ಈ ನಡುವೆ ಸರಕಾರದ ವಿರುದ್ಧ ಖಾರವಾಗಿ ಪ್ರತಿಭಟಿಸಿದರು. ಇದರಿಂದ ಸರ್ಕಾರಕ್ಕೆ ಇರಿಸು ಮುರಸು ಉಂಟಾಗಿ ಚಳವಳಿಯನ್ನು ಹತ್ತಿಕ್ಕಲು ನಾನಾ ಪ್ರಯತ್ನಗಳನ್ನು ನಡೆಸತೊಡಗಿತು. ವಿವಿಧ ಕಾರಣಗಳನ್ನೊಡ್ಡಿ ಸಾಹಿತಿ-ಕಲಾವಿದರ ಮೇಲೆ ಮೊಕದಮ್ಮೆಗಳನ್ನು ಸರ್ಕಾರ ಹಾಕತೊಡಗಿತು. ಲಾಠಿಚಾರ್ಜ್ ನಡೆಸಿ ಪ್ರತಿಭಟನಕಾರರನ್ನು ಹತೋಟಿಗೆ ತರುವ ಪ್ರಯತ್ನ ನಿತ್ಯವು ನಡೆಯ ತೊಡಗಿತು. ಇದರಿಂದ ಮಾನಸಿಕವಾಗಿ ಚಳವಳಿಕಾರರನ್ನು ಅಧೀರರನ್ನಾಗಿಸಿತು. ಚಳವಳಿಯ ನೇತೃತ್ವವಹಿಸಿದ್ದಂತ ಅವರು ಯಾರೇಆಗಲಿ ಜನಸಾಮಾನ್ಯರ ಬಳಿಗೆ ತೆರಳಿ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟು ಸ್ವಯಂ ಪ್ರೇರಿತರಾಗಿ ಭಾಗವಹಿಸುವಂತೆ ಮಾಡಲಿಲ್ಲ. ಇದರಿಂದ ಸರ್ಕಾರದ ಮೇಲೆ ಒತ್ತಡ ಹೇರಲು ಸಾಧ್ಯವಾಗದೆ ಹೊಯಿತು,

ಕವಿರಾಜ ಮಾರ್ಗದಿಂದ ಹಿಡಿದು ಕುವೆಂಪು ವರೆಗೆ ಕನ್ನಡ ಭಾಷೆ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದ ರಾಜಮಹಾರಾಜರು, ಕವಿವರ್ಯರು ಅನೇಕ. ಆದರೆ ಗೋಕಾಕ್‌ಚಳವಳಿಯ ಸಂದರ್ಭದಲ್ಲಿ ಮಡಿವಂತ ಸಾಹಿತಿಗಳು ಪ್ರತ್ಯೇಕವಾದ ಗುಂಪುಗಳನ್ನು ಕಟ್ಟಿಕೊಂಡು ಪ್ರತ್ಯೇಕವಾದ ಧರಣಿ, ಪ್ರತಿಭಟನೆ ನಡೆಸುವುದು ನಮ್ಮ ಕೆಲಸವೆಂದು ಭಾವಿಸಿದ್ದರು. ಜೊತೆಗೆ ಕರಪತ್ರಗಳ ವಿತರಣೆ, ಭಿತ್ತಿಪತ್ರ ಹಾಗೂ ದಿನಪತ್ರಿಕೆಗಳಲ್ಲಿ ಹೇಳಿಕೆ ನೀಡಿ ಪ್ರಚಾರ ಪಡೆಯುವುದೇ ಚಳವಳಿ ಎಂದು ಭಾವಿಸಿದ್ದರು. ನಾಡಿನ ಹಿರಿಯ ಸಾಹಿತಿಗಳಾದ ಮಾಸ್ತಿವೆಂಕಟೇಶ ಐಯ್ಯಂಗಾರ್, ಶಿವರಾಮ ಕಾಂರತ, ಕುವೆಂಪು ಮುಂತಾದವರು ಚಳವಳಿಗೆ ಬೆಂಬಲ ವ್ಯಕ್ತಪಡಿಸದೇ ಮೌನವಾಗಿದ್ದರು. ಅಂದಿನ ಗುಲ್ಬರ್ಗಾ ವಿಶ್ವವಿದ್ಯಾಲಯ ಕುಲಪತಿಗಳಾಗಿದ್ದ ಹಾ.ಮಾ.ನಾಯಕ ಅವರು ಕನ್ನಡಪರ ನಿಲ್ಲಲಿಲ್ಲ. 'ಕನ್ನಡವೇ ಶಕ್ತಿ ಕನ್ನಡವೇ ಉಸಿರು' ಎನ್ನುತ್ತಿದ್ದ ವಾಟಾಳ್ ನಾಗಾರಾಜು ಚಳವಳಿಯಿಂದ

ಹೊರಸರಿದಿದ್ದರು. ಯು.ಆರ್. ಅನಂತಮೂರ್ತಿಯಂತಹ ಸಾಹಿತಿಗಳು ಚಳವಳಿಯನ್ನು ಸಮೂಹ ಸನ್ನಿ ಎಂದು ಜರಿದರು. ಇಂತಹ ಸಮಯದಲ್ಲಿ ಚಳವಳಿಗೆ ಒಂದು ಚೌಕಟ್ಟು ಬೇಕಾಗಿತ್ತು ಏಕನಾಯಕತ್ವದ ಅನಿವಾರ್ಯತೆ ಇತ್ತು. ಮಾನವ ಶಕ್ತಿ, ಸಮಯ ವ್ಯರ್ಥ ಮಾಡುತ್ತಾ ಸಾಗುತ್ತಿದ್ದ ಚಳವಳಿಗೆ ಸಮರ್ಥನಾಯಕತ್ವ ಬೇಕಾಗಿತ್ತು. ಚುನಾವಣೆಯಲ್ಲಿ ಗೆದ್ದುಹೋದ ಜನಪ್ರತಿನಿಧಿಗಳು ಪ್ರಜೆಗಳ ಸಮಸ್ಯೆಗಳಿಗೆ ಸ್ಪಂದಿಸದೆ ಸರ್ಕಾರದ ಮರ್ಜಿಗೆ ಒಳಗಾಗಿದ್ದ ಈ ಸಮಯದಲ್ಲಿ ನಾಡುನುಡಿ, ಸಂಸ್ಕೃತಿಯ ಪ್ರತೀಕವಾಗಿದ್ದ ರಾಜಕಿಯೇತರ ಸಾರ್ವಭೌಮ ರಾಜ್‌ಕುಮಾರ್ ಅವರತ್ತ ದೃಷ್ಟಿಹರಿಸಿದ್ದರಲ್ಲಿ ದೂರದೃಷ್ಟಿ ಇತ್ತು. ಈ ವಿಷಯದಲ್ಲಿ ರಾಜಕುಮಾರ್ ಅವರಿಗೆ ಇದ್ದಂತಹ ಕನ್ನಡದ ಬದ್ಧತೆ ಪ್ರಶ್ನಾರ್ಹತೀತವಾದುದ್ದು. ಚಂದ್ರಶೇಖರ ಪಾಟೀಲ, ಪಾಟೀಲ ಪುಟ್ಟಪ್ಪಂತ ಹಿರಿಯ ಸಾಹಿತಿಗಳು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಂಡಿದ್ದು ಅವರ ದೂರದೃಷ್ಟಿಯ ದ್ಯೋತಕ ವೆನ್ನಬಹುದು. ಅದರಂತೆ ರಾಜ್‌ಕುಮಾರ್ ಚಳವಳಿಯ ಭೌಗೋಳಿಕ ವ್ಯಾಪ್ತಿ ಸಹಜವಾಗಿ ಸಣ್ಣದಾಗಿಯೇ ಇತ್ತಾದರು ರಾಜ್‌ಕುಮಾರ್ ಪ್ರವೇಶದ ನಂತರ ಇಡೀ ರಾಜ್ಯವನ್ನೇ ವ್ಯಾಪಿಸಿತು. ಸರಕಾರಕ್ಕೆ ಮುಟ್ಟಿಸಬೇಕಾದ ಸಂದೇಶವನ್ನು ರಾಜ್‌ಕುಮಾರ್ ಅವರು ಬಂದ ನಂತರವೇ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮುಟ್ಟಿಸಲು ಎಲ್ಲಾ ವಿಧಾನಗಳನ್ನು ಅವರು ಅನುಸರಿಸಿದರು. ಇಂತಹ ಹಲವಾರು ಸಂದರ್ಭಗಳು ಸನ್ನಿವೇಶಗಳು ಹಿನ್ನೆಲೆಯಾಗಿ ಕಾಣಿಸಿಕೊಂಡು ರಾಜಕುಮಾರ್ ಅವರು ಚಳವಳಿಯಲ್ಲಿ ಭಾಗವಹಿಸುವಂತಾಯಿತು. ಈ ಪಾತ್ರವನ್ನು ರಾಜ್‌ಕುಮಾರ್ ಅವರು ಅಷ್ಟೇ ಸಮರ್ಥವಾಗಿ ನಿರ್ವಹಿಸಿದರು.

ಸಾಹಿತಿ-ಕಲಾವಿದರು ನಾವೆಲ್ಲಿ ಸೋಲುತ್ತಿದ್ದೆವೊ ಎನ್ನುವುದನ್ನು ಮನವರಿಕೆ ಮಾಡಿಕೊಳ್ಳಲು ರಾಜ್‌ಕುಮಾರ್ ಅವರನ್ನು ಚಳವಳಿಗೆ ಕರೆತಂದರು. ಒಂದು ವೇಳೆ ಚಳವಳಿಯನ್ನು ಯಶಸ್ವಿಯಾಗಿ ಮುನ್ನಡೆಸುವ ಶಕ್ತಿ ಸಾಮರ್ಥ್ಯ ಸಾಹಿತಿಗಳಿಗೆ ಇದ್ದಿದರೆ ರಾಜ್‌ಕುಮಾರ್ ಅವರು ಚಳವಳಿಗೆ ಬರುವ ಪ್ರಮೇಯವೇ ಬರುತ್ತಿರಲಿಲ್ಲ. ರಾಜ್‌ಕುಮಾರ್ ವರೆಗೂ ಸಮಸ್ಯೆಯನ್ನು ಸಾಹಿತಿಗಳು ಬಿಡುತ್ತಿರಲಿಲ್ಲ. ಸಾಹಿತಿಗಳು ನಾವು ಸೋಲುತ್ತಿದ್ದೇವೆ ಎಂದು ಮನವರಿಕೆಯಾದ ತಕ್ಷಣ ಚಳವಳಿಯನ್ನು ಸೋಲಲು ಬಿಡದೆ, ತಾವು ಸೋಲದೆ ಗೆಲುವಿಗಾಗಿ ರಾಜ್‌ಕುಮಾರ್ ಅವರತ್ತ ದೃಷ್ಟಿಹರಿಸಿದರು. ರಾಜ್‌ಕುಮಾರ್ ಅವರನ್ನು ಚಳವಳಿಗೆ ಕರೆತಂದು ಸಾಹಿತಗಳು ಅಷ್ಟೇ ಗೌರವದಿಂದ ಕಂಡರು. ಅಲ್ಲದೇ ಅವರಿಗೊಂದು ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿದರು. ರಾಜಕುಮಾರ್ ಅವರಲ್ಲಿ ಚಳವಳಿಯನ್ನು ರೂಪಿಸಬಲ್ಲಂತಹ ಚಳವಳಿಯನ್ನು ಮುನ್ನೆಡೆಸಬಲ್ಲಂತಹ ಶಕ್ತಿ ಇದೆ ಎಂಬುದುನ್ನು ಸಾಹಿತಿಗಳು ಇಡೀ ನಾಡಿಗೆ ತೋರ್ಪಡಿಸಿದರು.

ಟಿಪ್ಪಣಿಗಳು

೧. ಅಶೋಕ್ ಅವರು (ಚಿತ್ರನಟರು) ಸಂದರ್ಶನದಲ್ಲಿ ವ್ಯಕ್ತಪಡಿಸಿದ ವಿಚಾರ

೨. ಅದೇ.,

೩. ಚಂದ್ರಶೇಖರ ಪಾಟೀಲರು ಸಂದರ್ಶನದಲ್ಲಿ ವ್ಯಕ್ತಪಡಿಸಿದ ವಿಚಾರ

೪. ಅದೇ.,

೫. ಅಶೋಕ್ ಅವರು ಸಂದರ್ಶನದಲ್ಲಿ ವ್ಯಕ್ತಪಡಿಸಿದ ವಿಚಾರ

೬. ಸಾ.ರಾ. ಗೋವಿಂದು ಅವರು ಸಂದರ್ಶನದಲ್ಲಿ ವ್ಯಕ್ತಪಡಿಸಿದ ವಿಚಾರ

೭. ಅದೇ.,

೮. ಜಗನ್ನಾಥರಾವ್ ಬಹುಳೆ, ವರನಟ, (೨೦೦೬) ಬೆಂಗಳೂರು ಪು ೨೧೦

೯. ಕನ್ನಡ ನೆಲದ ಚಳವಳಿಗಳು ಒಂದು ಅವಲೋಕನ. ಸಕಾಲ ಮಾಸಪತ್ರಿಕೆ ಬೆಂಗಳೂರು, ೨೦೦೭ (ಆಗಸ್ಟ್)

ಅಧ್ಯಾಯ ಐದು

ಚಳವಳಿಯಲ್ಲಿ ಡಾ. ರಾಜ್‌ಕುಮಾರ್ ಅವರ ಪಾತ್ರ

ಅಧ್ಯಾಯ ಐದು

ಚಳವಳಿಯಲ್ಲಿ ಡಾ. ರಾಜ್‌ಕುಮಾರ್ ಅವರ ಪಾತ್ರ

೫.೧. ಚಳವಳಿಗೆ ಡಾ. ರಾಜಕುಮಾರ್ ಅವರ ಪಾದಾರ್ಪಣೆ.

ಡಾ. ರಾಜ್‌ಕುಮಾರ್ ಅವರು ಚಳವಳಿಗೆ ಪಾದಾರ್ಪಣೆ ಮಾಡಿದ ನಂತರ ಅವರು ವಹಿಸಿದ ಪಾತ್ರ ಎಂಥವರನ್ನೂ ಬೆಚ್ಚಿಬೀಳಿಸುವಂತಿತ್ತು. ಗೋಕಾಕ್ ಚಳವಳಿಯು ಜನಸಾಮಾನ್ಯರ ಚಳವಳಿಯಾಗಿ ರೂಪುಗೊಳ್ಳಲು ಇವರ ಬರುವಿಕೆಯನ್ನು ಜನತೆ ಎದುರು ನೋಡುವಂತಿತ್ತು. ರಾಜಕುಮಾರ್ ಅವರು ಚಳವಳಿಯ ಮನುಷ್ಯರಲ್ಲ, ತಾವೆಂದೂ ಬಹಿರಂಗವಾಗಿ ಜನಸಾಮಾನ್ಯರ ಸಂಗಡ ಚಳವಳಿಗಳಲ್ಲಿ ಭಾಗವಹಿಸಿದ ಇತಿಹಾಸವಿಲ್ಲ. ಗೋಕಾಕ್ ಚಳವಳಿಯ ಯಶಸ್ಸಿನ ನಂತರ ಕನ್ನಡದ ನೆಲ, ಜಲ, ಭಾಷೆ ಹಾಗೂ ಚಲನಚಿತ್ರ ಕಾರ್ಮಿಕರ ಚಳವಳಿಗಳಲ್ಲಿ ಭಾಗವಹಿಸಿದ್ದುಂಟು. ಇವರು ಚಳವಳಿಗೆ ಪಾದಾರ್ಪಣೆ ಮಾಡುವುದಕ್ಕಿಂತ ಮುನ್ನ ಕನ್ನಡ ಚಲನಚಿತ್ರ ರಂಗದ ಅನಭಿಷಕ್ತ ದೊರೆಯಾಗಿ ನಾಡಿನಾದ್ಯಂತ ಮನೆಮಾತಾಗಿದ್ದರು. ಅಂದಿಗೆ ಇಪ್ಪತ್ತೆಂಟು ವರುಷಗಳ ಕಾಲ ಕನ್ನಡ ಚಲನಚಿತ್ರರಂಗದಲ್ಲಿ ನೂರಾ ಐವತ್ತುಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ ದೊಡ್ಡ ಸಾಧನೆ ಮಾಡುವುದರೊಂದಿಗೆ ನಾಡಿನ ಸಂಕೇತವಾಗಿ ರೂಪುಗೊಂಡಿದ್ದರು. ನಾಡುನುಡಿಯನ್ನು ಪ್ರತಿಬಿಂಬಿಸುವಂತಹ ಪಾತ್ರಗಳ ಮುಖೇನ ಸಾಂಸ್ಕೃತಿಕ ನಾಯಕರಾಗಿಯೂ ಜನಮನದಲ್ಲಿ ಗುರ್ತಿಸಿಕೊಂಡಿರುವುದನ್ನು ಕಾಣಬಹುದಾಗಿತ್ತು.

೧೯೮೨ ರ ವೇಳೆಗಾಗಲೇ ನಾಡಿನಾದ್ಯಂತ ಉತ್ತಮವಾದ ಕನ್ನಡ ಭಾಷಾ ಪರಿಸರವನ್ನು ನಿರ್ಮಾಣ ಮಾಡಿದ್ದ ಪರಿಣಾಮವಾಗಿ ಬೆಂಗಳೂರಿನಂತಹ ನಗರದಲ್ಲಿ ಕನ್ನಡ ಚಲನ ಚಿತ್ರಗಳು ಹೆಚ್ಚು ಪ್ರದರ್ಶನ ಕಾಣುವಂತಾಗಿತ್ತು. ಚಳವಳಿಯ ಕಾಲ ಘಟ್ಟಕ್ಕೆ ಯಾವ ಚಳವಳಿಕಾರನು ಮಾಡಿರಲಾರದಂತಹ ಕನ್ನಡ ಸೇವೆಯನ್ನು ತೆರೆಯ ಮೇಲೆ ಕಟ್ಟಿಕೊಟ್ಟಿದ್ದರು. ಇಂತಹ ಸಂದರ್ಭದಲ್ಲಿ ಗೋಕಾಕ್ ಚಳವಳಿಯು ಭುಗಿಲೆದ್ದು ಸಮಸ್ಯೆಗೆ ಪರಿಹಾರ ಕಾಣದೆ ಕನ್ನಡಿಗರ ಸ್ವಾಭಿಮಾನದ ಪ್ರಶ್ನೆಯಾಗಿ ಉಳಿದಿತ್ತು. ಆ ಸಮಯಕ್ಕಾಗಲೇ ಕನ್ನಡ ಚಳವಳಿಗಾರರು ಬಹುಪಾಲು ಸವಕಲು ನಾಣ್ಯಗಳಾಗಿದ್ದರು. ಸಾಹಿತಿ-ಕಲಾವಿದರ ನಡುವೆ ಸಾಮೂಹಿಕ ಒಗ್ಗಟ್ಟಿಲ್ಲದೆ ಚಳವಳಿ ನೀರಸವಾಗಿತ್ತು. ಒಟ್ಟಾರೆಯಾಗಿ ಚಳವಳಿ ಸೂತ್ರವಿಲ್ಲದ ಗಾಳಿಯ ಪಟದಂತೆ ದಿನಕ್ಕೊಂದು ಸ್ವರೂಪ ಪಡೆಯುತ್ತಿತ್ತು. ಇಂಥ ಸಂದಿಗ್ಧ ಸಮಯದಲ್ಲಿ ರಾಜಕುಮಾರ್ ಚಳವಳಿಗೆ ಪಾದಾರ್ಪಣೆ ಮಾಡಿದರು.

ಚಳವಳಿಗಾಗಲಿ ಅಥವಾ ಮತ್ತ್ಯಾವುದೇ ರಂಗಗಳಿಗೆ ಕೆಲವರ ಪಾದಾರ್ಪಣೆ ಹೊಸತನ್ನು ಮೂಡಿಸುತ್ತದೆ. ಜೊತೆಗೆ ಅದರ ಪ್ರಖರತೆಯು ಹೆಚ್ಚಾಗುತ್ತದೆ. ಶೀಘ್ರವಾಗಿ ಫಲಿತಾಂಶಗಳು ದೊರೆಯಬಹುದು. ಅಂತೆಯೇ ರಾಜ್‌ಕುಮಾರ್ ಅವರ ಪ್ರವೇಶದಿಂದಾಗಿ ಚಳವಳಿಯ ಪ್ರಖರತೆ ಹೆಚ್ಚಾಗತೊಡಗಿತು. ನಿರಂತರವಾಗಿ ನಡೆಯುತ್ತಿದ್ದ ಚಳವಳಿಗೊಂದು ಹೊಸ ಆಯಾಮ ದೊರೆತು ಬೇಗ ಮುಗಿಯುವಂತಾಯಿತು.

ಪತ್ರಿಕೆಗಳಲ್ಲಿ ಈ ನಾಡಿನ ಮಗನಾದ ರಾಜ್‌ಕುಮಾರ್ ಅವರು ಗೋಕಾಕ್ ಚಳವಳಿಯ ವಿಚಾರದಲ್ಲಿ ತಟಸ್ಥರಾಗಿರಲು ಕಾರಣವೇನು. ಎನ್ನುವಂಥ ಸಂಗತಿ ತಿಳಿದು ಕೂಡಲೇ ಎಚ್ಚೆತ್ತರು. ಈ ಸಮಯಕ್ಕೆ ನಾಡಿನ ಹಿರಿಯ ಸಾಹಿತಿಗಳಾದ ಪಾಟೀಲಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಚಿದಾನಂದ ಮೂರ್ತಿ, ಪಿ.ವಿ. ನಾರಾಯಣ ಚಿತ್ರನಟರಾದ ಅಶೋಕ್, ಲೋಕೇಶ್ ಮುಂತಾದವರ ಮೂಲಕ ಬಂದ ಆಹ್ವಾನವನ್ನು ಸ್ವೀಕರಿಸಿ, ಚಳವಳಿಗೆ ಪಾದಾರ್ಪಣೆ ಮಾಡಲು ಮದ್ರಾಸ್ ನಗರದಿಂದಲೇ ಪತ್ರಿಕಾ ಹೇಳಿಕೆ ನೀಡಿದರು. "ಅದೊಂದು ಅದೃಷ್ಟ ನಿರ್ಣಾಯಕ ಘಳಿಗೆ, ನನಗೆ ಅನ್ನ ನೀಡಿ ಸಲಹುತ್ತಿರುವ ಭಾಷೆಗೆ ಗಂಡಾಂತರ ಒದಗಿದೆಯೆಂದು ಗೊತ್ತಿದ್ದು ನಾನು ಸುಮ್ಮನಿದ್ದರೆ ಕನ್ನಡ ತಾಯಿಗೆ ದ್ರೋಹ ಬಗೆದಂತೆ." ಎಂದು ಪತ್ರಿಕೆಗಳಲ್ಲಿ ತನ್ನ ನಿಲುವನ್ನು ಪ್ರಕಟಿಸಿದರು. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಏನೆಂದರೆ ರಾಜಕುಮಾರ್ ಅವರ ಕನ್ನಡ ಹೋರಾಟದ ವ್ಯಾಪ್ತಿಗೆ ಸಂಬಂಧಿಸಿದಂತೆ ಹೋರಾಟಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು ೧. ಅವರು ನೇರವಾಗಿ ಭಾಗವಹಿಸಿದಂತಹ ಚಳವಳಿಗಳು. ೨. ಸಮೂಹ ಮಾಧ್ಯಮಗಳ ಮೂಲಕ ಕನ್ನಡ ಪ್ರಜ್ಞೆಯನ್ನುಂಟು ಮಾಡುವಲ್ಲಿ ವಹಿಸಿದ ಪಾತ್ರ.

೫.೨. ವಿವಿದೆಡೆಗಳಲ್ಲಿ ರಾಜಕುಮಾರ್ ಅವರ ಭಾಷಣಗಳು

೧. ಕಬ್ಬನ್ ಪಾರ್ಕ್‌ನಲ್ಲಿ ರಾಜ್‌ಕುಮಾರ್ ಅವರ ಮೊದಲ ಬಹಿರಂಗ ಸಭೆ.

ರಾಜ್‌ಕುಮಾರ್ ಅವರು ಚಳವಳಿಗೆ ಸಂಬಂದಿಸಿದಂತೆ ತಮ್ಮ ಮೊದಲ ಬಹಿರಂಗ ಸಭೆಯನ್ನು ದಿನಾಂಕ ೧೭.೪.೧೯೮೨ ರಂದು ನಡೆಸಲು ಭಾಗವಹಿಸಿದರು. ಸಾಹಿತಿ ಕಲಾವಿದ ಬಳಗ ಹಾಗೂ ಇತರ ಸಂಘ ಸಂಸ್ಥೆಗಳು ಆಯೋಜಿಸಿದ್ದ ಈ ಬಹಿರಂಗ ಸಭೆಯು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಪ್ರಾರಂಭವಾಗಿ ಕಬ್ಬನ್ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಲು ತೀರ್ಮಾನಿಸಲಾಗಿತ್ತು. ರಾಜ್‌ಕುಮಾರ್ ಅವರು ಚಳವಳಿಗೆ ಪಾದಾರ್ಪಣೆ ಮಾಡಲು ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬಂದು ಸೇರುವರು ಎಂಬ ಸುದ್ಧಿ ನಗರದ ತುಂಬಾ ಹರಡಿತ್ತು. ರಾಜಕುಮಾರ್ ಅವರನ್ನು ಕಾಣಲು ಮೂವತ್ತು ಸಾವಿರಕ್ಕೂ ಅಧಿಕ ಅಭಿಮಾನಿಗಳು, ಕನ್ನಡ ಪರ ಹೋರಾಟಗಾರರು, ಚಲನಚಿತ್ರ ಕಲಾವಿದರು, ಸಾಹಿತಿ-ಕಲಾವಿದರು ನೆರೆದಿದ್ದರು. ಆಗ ನಗರದ ತುಂಬಾ ಪೋಲಿಸ್ ವ್ಯವಸ್ಥೆ ವ್ಯವಸ್ಥಿತವಾಗಿ ಸಜ್ಜಾಗಿತ್ತು. ನಗರದ ಎಲ್ಲಾ ಅಂಗಡಿ ಮುಂಗಟ್ಟುಗಳು, ಶಾಲಾ ಕಾಲೇಜುಗಳು ಸ್ವಯಂ ಪ್ರೇರಿತ ರಜೆ ಘೋಷಿಸಿದ್ದವು. ಇಲ್ಲಿ ನೆರೆದಿದ್ದ ಜನ ಸಮೂಹದೊಡನೆ ಪಾದಯಾತ್ರೆಯ ಮೂಲಕ ಕಬ್ಬನ್ ಪಾರ್ಕ್‌ನಲ್ಲಿ ಸತ್ಯಾಗ್ರಹ ನಡೆಸುತ್ತಿದ್ದ ವೇದಿಕೆಯತ್ತ ರಾಜ್‌ಕುಮಾರ್ ನಡೆದರು.

ರಾಜಕುಮಾರ್ ಸುತ್ತಲು ನೆರೆದಿದ್ದ ಅಭಿಮಾನಿಗಳು ಕೂಗುತ್ತಿದ್ದ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಈ ಜನ ಸಾಗರದ ಮಧ್ಯೆ ಸಹಕಲಾವಿದರಾದ ಅಶೋಕ್, ಲೋಕೇಶ್, ನಾಗ್ ಸಹೋದರರು, ಅಂಬರೀಷ್, ವಿಷ್ಣುವರ್ಧನ್, ಶ್ರೀನಾಥ್, ಶಿವರಾಂ, ಪ್ರಭಾಕರ್, ತೂಗದೀಪ ಶ್ರೀನಿವಾಸ್, ಜೈಜಗದೀಶ್ ಮುಂತಾದವರು ರಾಜ್‌ಕುಮಾರ್ ಅವರನ್ನು ಸುತ್ತುವರೆದಿದ್ದರು. ಸತ್ಯಾಗ್ರಹಿಗಳ ಕೂಗಿನ ಜೊತೆಗೆ ತಮ್ಮ ಧ್ವನಿಯನ್ನು ಸೇರಿಸಿ ಕನ್ನಡ ಪ್ರಥಮ ಭಾಷೆಯಾಗುವುದಕ್ಕೆ ನಾವೆಲ್ಲ ಯಾವ ತ್ಯಾಗಕ್ಕೂ ಸಿದ್ಧ ಎನ್ನುತ್ತಾ ರಾಜ್‌ಕುಮಾರ್ ಅವರು ಸತ್ಯಾಗ್ರಹಿಗಳಿಗೆ ಬೆಂಬಲ ವ್ಯಕ್ತಪಡಿಸಿ ವೇದಿಕೆಯತ್ತ ನಡೆದರು. ರಾಜಕುಮಾರ್ ವೇದಿಕೆಯತ್ತ ನಡೆದಾಗ ಅಭಿಮಾನಿಗಳು ಮುತ್ತಿಗೆ ಹಾಕಿದರು. ಇದರಿಂದಾಗಿ ರಾಜ್ ಭಾಷಣಕ್ಕೆ ಸ್ವಲ್ಪಕಾಲ ಅಡಚಣೆಯುಂಟಾಯಿತು.

ರಾಜ್‌ಕುಮಾರ್ ಮಾತನಾಡುತ್ತಾ ಕನ್ನಡಾಭಿಮಾನಿಗಳೇ ಈಗ ರಾಜ್ಯದಲ್ಲಿ ಆವರಿಸಿರುವ ಭಾಷಾ ಸಮಸ್ಯೆಯ ಬಗ್ಗೆ ತಿಳಿದುಕೊಂಡು ಸಮಸ್ಯೆಯ ನಿವಾರಣೆಗೆ ನಾನು ನಿಮ್ಮಲ್ಲಿ ಒಬ್ಬನಾಗಿ ಬಂದಿದ್ದೇನೆ. ನಾನು ಚಳವಳಿಗೆ

ಬಂದಿರುವುದು ಗೋಕಾಕ್‌ವರದಿ ಜಾರಿಗೆ ಬರಬೇಕು ಎನ್ನುವ ನಿಲುವನ್ನು ಸಮರ್ಥಿಸಲಿಕ್ಕೆ ಹೊರತು ಮತ್ತ್ಯಾವ ಪದವಿಗಾಗಿ ಅಲ್ಲ. ನಟನಾಗಿ ೨೮ ವರುಷಗಳ ಕಾಲ ನಿಮ್ಮ ಆಶಿರ್ವಾದದಿಂದ ಬೆಳೆದುಬಂದಿದ್ದೇನೆ, ಇಂದು ನಿಮ್ಮೆಲ್ಲರೊಂದಿಗೆ ಇರುವುದು ನನ್ನ ಸೌಭಾಗ್ಯವೆಂದು ಭಾವಿಸುವೆನು. ಈ ನಮ್ಮ ಮಾತೃಭಾಷೆ ತಾಯಿಗೆ ಸಮಾನ, ನಮ್ಮ ತಾಯಿ ಭಾಷೆಗೆ ಪ್ರಥಮ ಸ್ಥಾನವನ್ನು ಶಿಕ್ಷಣ ರಂಗದಲ್ಲಿ ನೀಡಬೇಕೆಂದು ಸರ್ಕಾರದ ಮೇಲೆ ಮತ್ತಷ್ಟು ಒತ್ತಡ ಹಾಕೋಣ ಎಂದರು. ಈ ವಿಚಾರವಾಗಿ ಇದೇ ತಿಂಗಳು ೧೯ನೇ ತಾರೀಖು ಸರ್ಕಾರ ತೀರ್ಮಾನ ತೆಗೆದುಕೊಳ್ಳದಿದ್ದರೆ ಅದಕ್ಕಾಗಿ ಮುಂದೆ ನಡೆಯಬಹುದಾದ ಹೋರಾಟದಲ್ಲಿ ನಾನು ಸದಾ ಸಿದ್ಧನಿರುತ್ತೇನೆ.[೬] ಎಂಬುದಾಗಿ ರಾಜ್‌ಕುಮಾರ್ ಮಾತನಾಡಿದರು. ನಂತರ ಸಾಹಿತಿ-ಕಲಾವಿದರು, ಕನ್ನಡಪರ ಹೋರಾಟಗಾರರು ಮಾತನಾಡಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಈ ಸಮಯದಲ್ಲಿ ಉಂಟಾದ ನೂಕುನುಗ್ಗಲಿನಿಂದ ಸಭೆಯಲ್ಲಿ ಭಾರಿ ಗದ್ದಲ ಪ್ರಾರಂಭವಾಯಿತು. ಈ ಗದ್ದಲದಿಂದ ರಾಜ್ ಅವರನ್ನು ಪಾರುಮಾಡಲು ಪೋಲಿಸ್‌ನವರು ತಮ್ಮ ಪೋಲಿಸ್ ವ್ಯಾನ್‌ನಲ್ಲಿ ಕುಳ್ಳಿರಿಸಿಕೊಂಡು ವಿಧಾನಸೌಧದತ್ತ ನಡೆದರು. ಈ ಪ್ರಸಂಗವನ್ನು ತಪ್ಪಾಗಿ ಅರ್ಥೈಸಿಕೊಂಡ ಜನ ಸಮೂಹ ಪೋಲೀಸ್ ರಾಜಕುಮಾರ್‌ರನ್ನು ಬಂಧಿಸಿದೆ ಎಂದು ಭಾವಿಸಿ, ಇಡೀ ಜನಸಮೂಹ ಪೋಲಿಸ್ ಮೇಲೆ ಮುಗಿಬೀಳತೊಡಗಿತು. ಪೋಲಿಸ್‌ನವರು ಗಲಭೆಯನ್ನು ನಿಯಂತ್ರಣಕ್ಕೆ ತರಲು ಟಿಯರ್‌ಗ್ಯಾಸ್, ಮತ್ತು ಲಾಠಿಚಾರ್ಜ್ ಪ್ರಯೋಗ ಮಾಡಬೇಕಾಗಿ ಬಂದು ಸಭೆ ಅಸ್ತವ್ಯಸ್ಥವಾಯಿತು. ಕ್ಷಣಮಾತ್ರದಲ್ಲಿಯೇ ಪರಿಸ್ಥಿತಿ ವಿಕೋಪಕ್ಕೆ ತೆರಳಿ ಜನಸಮೂಹ ದಿಕ್ಕಾಪಾಲಾಯಿತು. ಚಿತ್ರನಟರು, ಸಾಹಿತಿಗಳು, ಪೋಲಿಸ್ ನೆರವು ಪಡೆದರೆ, ಘಟನೆ ನಗರದಾದ್ಯಂತ ತಲ್ಲಣವನ್ನುಂಟು ಮಾಡಿ ಸಂಚಾರ ವ್ಯವಸ್ಥೆಯನ್ನು ಅಸ್ತವ್ಯಸ್ಥಗೊಳ್ಳುವಂತಾಯಿತು. ಈ ಮಧ್ಯ ಧ್ವನಿವರ್ಧಕದ ಮೂಲಕ ರಾಜ್‌ಕುಮಾರ್ ಅವರನ್ನು ಬಂಧಿಸಿಲ್ಲ, ಅವರ ರಕ್ಷಣೆಗಾಗಿ ವಿಧಾನಸೌಧದೊಳಕ್ಕೆ ಕರೆದೊಯ್ಯಲಾಗಿದೆ ಎಂದು ಹೇಳುತ್ತಿದ್ದರೂ ಯಾವ ಅಭಿಮಾನಿಯೂ ಇದನ್ನು ಕೇಳಿಸಿಕೊಳ್ಳುವಂತಹ ಪರಿಸ್ಥಿತಿಯಲ್ಲಿರಲಿಲ್ಲ.

ಹೀಗೆ ರಾಜ್‌ಕುಮಾರ್ ಅವರು ಭಾಗವಹಿಸಿದ್ದಂತಹ ಮೊದಲ ಬಹಿರಂಗ ಸಭೆಯು ಅಸ್ತವ್ಯಸ್ಥವಾಗಿ ಹಿಂಸೆಯತ್ತ ಮುಖ ಮಾಡಿಕೊಟ್ಟರೂ ಅಭಿಮಾನಿಗಳಲ್ಲಿ ಉತ್ಸಾಹ, ಹೋರಾಟದ ಶಕ್ತಿ ಕುಂದಲಿಲ್ಲ. ರಾಜ್‌ಕುಮಾರ್ ಅವರು ನಡೆದ ಅನಾಹುತದ ಬಗ್ಗೆ ತಿಳಿದು ಮರುಕ ಪಟ್ಟದುಂಟು. ಆ ದಿನದ ನಿಗದಿತ ಕಾರ್ಯಕ್ರಮದಂತೆ ರಾಜ್‌ಕುಮಾರ್ ಮುಂದಾಳತ್ವದಲ್ಲಿ ರಾಜ್ಯಪಾಲರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ಬಹಿರಂಗ ಸಭೆಯ ನಂತರ ರಾಜ್‌ಕುಮಾರ್ ಅವರಿಗೆ ತಮ್ಮ ಜನ ಶಕ್ತಿಯ ಸ್ವರೂಪ ಅರ್ಥವಾಯಿತಲ್ಲದೆ, ಸೂಕ್ತವಾದ ನಾಯಕತ್ವ ಜನಸಮುದಾಯಕ್ಕೆ ನೀಡಿದರೆ ಚಳವಳಿ ಯಶಸ್ವಿಯಾಗಬಹುದೆಂದು ತಿಳಿದುಕೊಂಡರು. ಮುಂದಿನ ದಿನಗಳಲ್ಲಿ ನಡೆಯಬಹುದಾದ ಕಾರ್ಯಕ್ರಮಗಳಿಗೆ ಇದರಿಂದ ಸಾಕಷ್ಟು ಸ್ಫೂರ್ತಿಯನ್ನು ರಾಜ್‌ಕುಮಾರ್ ಅವರು ಪಡೆಯುವಂತಾಯಿತು.

ಕಬ್ಬನ್‌ಪಾರ್ಕ್‌ನ ಬಹಿರಂಗ ಸಭೆ ಮುಗಿದ ಕೆಲವೇ ದಿನಗಳಲ್ಲಿ ಕೇಂದ್ರ ಕರ್ನಾಟಕ ಕನ್ನಡ ಕ್ರಿಯಾ ಸಮಿತಿಯ ಪಾಟೀಲಪುಟ್ಟಪ್ಪನವರಿಂದ ರಾಜ್‌ಕುಮಾರ್ ಅವರಿಗೆ ಒಂದು ಪತ್ರ ತಲುಪಿತು. ಈ ಹಿಂದೆ ಚಳವಳಿಗೆ ಭಾಗವಹಿಸುವುದಾಗಿ ಪತ್ರಿಕಾ ಹೇಳಿಕೆ ನೀಡಿದ್ದಕ್ಕೆ ಪ್ರತ್ಯುತ್ತರವಾಗಿ ಅಭಿನಂಧನೆ ಕೋರಿ ಬರೆದ ಪತ್ರ ಅದಾಗಿತ್ತು. ಹಾಗೂ ಧಾರವಾಡದ ಕ್ರಿಯಾಸಮಿತಿಯ ವತಿಯಿಂದ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಕ್ಕೆ ಇವರಿಗೆ ಆಹ್ವಾನ ಕುರಿತು ಪತ್ರದಲ್ಲಿ ವಿವರಿಸಲಾಗಿತ್ತು. ಈ ಆಹ್ವಾನವನ್ನು ಸ್ವೀಕರಿಸಿದ ರಾಜ್‌ಕುಮಾರ್ ಅವರು ಮೇ ತಿಂಗಳ

೧೬ ರಿಂದ ೧೯ ನೇ ತಾರೀಖಿನವರೆಗೆ ಜಾಥಾದಲ್ಲಿ ಭಾಗವಹಿಸಲು ಸಿದ್ಧತೆಗಳನ್ನು ನಡೆಸತೊಡಗಿದರು. ಈ ಜಾಥಾ ಕಾರ್ಯಕ್ರಮಕ್ಕೆ ಚಿತ್ರರಂಗದ ಸಹನಟರಾದ ಅಶೋಕ್, ನಾಗ್ ಸಹೋದರರು, ಲೋಕೇಶ್, ಪ್ರಭಾಕರ್, ಶಿವರಾಂ, ಸುಬ್ಬಯ್ಯನಾಯ್ಡು, ಜೈಜಗದೀಶ್, ಮುಂತಾದವರು ರಾಜಕುಮಾರ್ ಜೊತೆಸೇರಿದರು.[೩]

ಯೋಜಿತ ಮೂರು ದಿನಗಳ ಮೊದಲ ಹಂತದ ಜಾಥಾ ಕಾರ್ಯಕ್ರಮಕ್ಕೆ ರಾಜಕುಮಾರರನ್ನು ನಾಯಕತ್ವದಲ್ಲಿ ನಡೆಸಲು ಎಲ್ಲಾ ಸಾಹಿತಿಕಲಾವಿದರು, ಹೋರಾಟಗಾರರು ನಿರ್ಣಯಿಸಿ ಆಗಿತ್ತು. ಬೆಳಗಾವಿಯಿಂದ ಮೇ ೧೬ರಂದು ಉದ್ಘಾಟನೆಗೊಳ್ಳಲಿದ್ದ ಈ ಕಾರ್ಯಕ್ರಮ ಮೇ ೧೯ ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮುಕ್ತಾಯಗೊಳ್ಳುವಂತೆ ಪ್ರವಾಸದ ಕಾರ್ಯಸೂಚಿಯನ್ನು ಸಿದ್ಧಪಡಿಸಿಲಾಗಿತ್ತು. 'ಮೇ ೧೬ರಂದು ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಮತ್ತು ಗದಗ್‌ನಲ್ಲಿ ಬಾರಿ ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ ಮಾತನಾಡುವ ಕಾರ್ಯಕ್ರಮ ಸಿದ್ದಗೊಂಡಿದ್ದರೆ, ಮೇ ೧೭ರಂದು ಬಳ್ಳಾರಿ, ದಾವಣಗೆರೆಯಲ್ಲಿ ಮೇ ೧೮ ರಂದು ಮೈಸೂರು, ಮಂಡ್ಯ, ಚನ್ನಪಟ್ಟಣದಲ್ಲಿ ನಿಗದಿಯಾಗಿತ್ತು ಮೇ ೧೯ರಂದು ಬೆಳಿಗ್ಗೆ ೧೧ ಘಂಟೆಗೆ ನ್ಯಾಷನಲ್‌ಕಾಲೇಜು ಮೈದಾನದಲ್ಲಿ ಜಾಥಾ ಕಾರ್ಯಕ್ರಮಕ್ಕೆ ಅಂತಿಮ ತೆರೆ ಎಳೆಯಲು ಕ್ರಿಯಾಸಮಿತಿ ತನ್ನ ಪ್ರಕಟಣೆಯಲ್ಲಿ ತಿಳಿಸಿತ್ತು.'[೪]

ರಾಜ್‌ಕುಮಾರ್ ಅವರು ತನ್ನ ಸಹಕಲಾವಿದರ ಸಂಗಡ ಬೆಳಗಾಂ ನಗರಕ್ಕೆ ಬರುವ ಸಿದ್ಧತೆಯಲ್ಲಿ ತೊಡಗಿದ್ದರೆ, ಪಾಟೀಲಪುಟ್ಟಪ್ಪನವರು, ಚಂದ್ರಶೇಖರ ಪಾಟೀಲ, ಕಲಬುರ್ಗಿ, ಕಟ್ಟೀಮನಿ ಮುಂತಾದ ಹಿರಿಯ ಸಾಹಿತಿಗಳು ಎಲ್ಲಾ ಸಮಿತಿಯ ಎಲ್ಲಾ ಘಟಕಗಳನ್ನು ಸಂಪರ್ಕಿಸಿ ರಾಜ್‌ಕುಮಾರ್ ಅವರು ನೀಡಿದ್ದ ಕಲಾವಧಿಯೊಳಗೆ ಒಂದು ಮಾರ್ಗಸೂಚಿಯನ್ನು ಸಿದ್ಧಪಡಿಸುತ್ತಿದ್ದರು.

೨. ಬೆಳಗಾಂ ನಗರದಲ್ಲಿ ಉದ್ಘಾಟನೆಗೊಂಡ ಪ್ರಥಮ ಹಂತದ ಜಾಥಾ

ರಾಜ್‌ಕುಮಾರ್ ಅವರು ಮೇ ೧೫ರ ಸಂಜೆ ಗಂಡುಮೆಟ್ಟಿನ ನಾಡು ಎಂದು ಹೆಸರಾಗಿರುವ ಬೆಳಗಾಂ ನಗರಕ್ಕೆ ಬಂದಿಳಿದಾಗ ಭವ್ಯವಾದ ಸ್ವಾಗತ ದೊರೆಯಿತು. ಆ ವೇಳೆಗಾಗಲೇ ನಗರವನ್ನು ಕನ್ನಡ ಭಾವುಟ ಹಾಗೂ ಹಸಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮೇ ೧೬ ರಂದು ಬೆಳಿಗ್ಗೆ ನಗರದ ಕಿತ್ತೂರು ಚನ್ನಮ್ಮ ಪ್ರತಿಮೆಯಿಂದ ರಾಜಕುಮಾರ್ ಮುಂದಾಳತ್ವದಲ್ಲಿ ಜಾಥಾ ಪ್ರಾರಂಭಗೊಂಡಿತು. ಸಾವಿರಾರು ಅಭಿಮಾನಿಗಳ ನಡುವೆ ನಗರದ ವಿವಿಧ ರಸ್ತೆಗಳಲ್ಲಿ ಕನ್ನಡದ ಜಾಥಾ ನಡೆದು ರಾಜ್‌ಕುಮಾರ್ ಅವರು ನೇರವಾಗಿ ಬಹಿರಂಗ ಸಭೆಯತ್ತ ನಡೆದರು. ಈ ಬಹಿರಂಗ ಸಭೆಯಲ್ಲಿ ಕನ್ನಡದ ಪಂಜನ್ನು ಬೆಳಗಿಸುವದರ ಮೂಲಕ ಕನ್ನಡದ ಜಾತ್ರೆಯನ್ನು ರಾಜ್‌ಕುಮಾರ್ ಅವರು ಬೆಳಿಗ್ಗೆ ೯.೧೫ ಕ್ಕೆ ಉದ್ಘಾಟಿಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ್ದ ಸೂಮಾರು ಮೂವತ್ತು ಸಾವಿರಕ್ಕೂ ಅಧಿಕ ಅಭಿಮಾನಿಗಳು ಭಾಗವಹಿಸಿದುದು ವಿಶೇಷವಾಗತ್ತು. ''ಇಂದು ಹೊತ್ತಿದ ಕನ್ನಡದ ಜ್ಯೋತಿ ಎಂದೆಂದಿಗೂ ನಂದುವುದಿಲ್ಲ. ಎಂದು ಬಾರಿ ಹರ್ಷೋದ್ಘಾರದ ನಡುವೆ ಮಾತನಾಡಿದ ರಾಜ್‌ಕುಮಾರ್ ತಮ್ಮ ಕಲೆಯಲ್ಲದೆ ಕನ್ನಡದ ಗುರಿ ಸಾಧನೆಗಾಗಿ ಸಾರ್ವಜನಿಕ ವೇದಿಕೆಗೆ ತಾವು ಇದೇ ಮೊದಲ ಬಾರಿ ಆಗಮಿಸಿರುವುದಾಗಿ ತಿಳಿಸಿದರು.''

ಮತ್ತೆ ಮಾತು ಮುಂದುವರೆಸಿದ ರಾಜಕುಮಾರ್ ''ನಾವಿಂದು ಇಲ್ಲಿಗೆ ಬಂದಿರುವುದು ಯಾವುದೇ ರಾಜಕೀಯ ಮಾಡುವುದಕ್ಕಲ್ಲ. ಸಂಕೋಲೆಯಲ್ಲಿ ಬಂದಿತಳಾಗಿರುವ ನಮ್ಮ ತಾಯಿಯನ್ನು ಬಂಧನದಿಂದ ಬಿಡುಗಡೆಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು, ನಾವು ಮಾಡಲು ಹೊರಟಿರುವ ಚಳವಳಿ ನಮಗಲ್ಲ, ನಮ್ಮ

ಮುಂದಿನ ಪೀಳಿಗೆಗಾಗಿ ಹಾಗಾಗಿ ಗುರಿಮುಟ್ಟುವ ತನಕ ಚಳವಳಿ ನಿಲ್ಲಲಾರದು ಎಂದು ಘೋಷಿಸಿದರು. ಇದಕ್ಕೂ ಮುನ್ನ ಸಾಹಿತಿಗಳಾದ ಪಾಟೀಲಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಅಶೋಕ್,ಲೋಕೇಶ್,ಕಟ್ಟೀಮನಿ ಮುಂತಾದವರು ಮಾತನಾಡಿದ್ದರು. ಇಡೀ ಚಿತ್ರರಂಗದ ನಟರೆಲ್ಲರೂ ನೆರೆದಿದ್ದುದು ವಿಶೇಷವೆನಿಸಿತು.

೩. ಧಾರವಾಡದಲ್ಲಿ ನಡೆದ ಬಹಿರಂಗ ಸಭೆ

ಗೋಕಾಕ್ ಚಳವಳಿಯು ಕನ್ನಡ ಚಳವಳಿಯಾಗಿ ಪರಿವರ್ತನೆಗೊಂಡಿದ್ದು ಇಲ್ಲಿಯೇ. ಏಕೀಕರಣ ಸಮಯದಲ್ಲಿ ಧಾರವಾಡದಲ್ಲಿ ಕನ್ನಡಪರ ಹೋರಾಟಗಾರರು ಸಾಕಷ್ಟು ದುಡಿದಿದ್ದಾರೆ. ಅದೇರೀತಿ ರಾಜಕುಮಾರ್ ಅವರ ಬರುವಿಕೆಗಾಗಿ ಜನತೆ ಕಾದುಕುಳಿತ್ತಿದ್ದರು. ಕಾರ್ಯಕ್ರಮ ಮದ್ಯಾಹ್ನ ೨.೩೦ಕ್ಕೆ ನಿಗಧಿಯಾಗಿದ್ದರೂ ರಾಜಕುಮಾರ್ ಬರಲು ಸ್ವಲ್ಪ ತಡವಾಗಿತೊಡಗಿತು. ಬೆಳಗಾವಿಯಲ್ಲಿ ಯಶಸ್ವಿಯಾಗಿ ಜಾಥಾ ಹಾಗೂ ಉದ್ಘಾಟನೆಗೊಂಡಂತೆ ಇಲ್ಲಿ ಕಡಪ ಮೈದಾನದಲ್ಲಿ ಕ್ರಿಯಾಸಮಿತಿಯು ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಮೈದಾನದಲ್ಲಿ ಬಿಸಿಲಿನ ತಾಪ ಲೆಕ್ಕಿಸದೆ ಮೂವತ್ತೈದು ಸಾವಿರಕ್ಕೂ ಅಧಿಕ ಜನತೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಊರಿನ ತುಂಬ ಕನ್ನಡ ಭಾವುಟ, ಹಸಿರು ತೋರಣಗಳು ಹಾರಾಡುತ್ತಿದ್ದವು. ರಾಜಕುಮಾರ್ ಅವರು ನಗರಕ್ಕೆ ಆಗಮಿಸಿದ ಕೂಡಲೇ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನೇರವಾಗಿ ವೇದಿಕೆಗೆ ಅವರನ್ನು ಕರೆತರಲಾಯಿತು. ರಾಜಕುಮಾರ್ ಅವರು ಮಾತನಾಡುತ್ತಾ ''ನಾಡಿನ ಎಲ್ಲಾ ವರ್ಗಗಳ ವಯೋಮಾನದ ಅಭಿಮಾನಿ ಕನ್ನಡಿಗರಿಗೆ ಹಾಗೂ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ವಕೀಲರು, ಗೃಹಣಿಯರಿಗೆ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಮನವಿಮಾಡಿಕೊಂಡರು. ಇದೇ ಸಂದರ್ಭದಲ್ಲಿ ಏಕೀಕರಣ ಚಳವಳಿಯ ಸಮಯದಲ್ಲಿ ಇಲ್ಲಿನ ಕನ್ನಡಿಗರು ತೋರಿದ ಔದಾರ್ಯವನ್ನು ಸ್ಮರಿಸಿಕೊಂಡರು. ಅದೇರೀತಿ ಕ್ರಿಯಾಸಮಿತಿಯ ಪಾಟೀಲಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಎಂ.ಎಂ. ಕಲಬುರ್ಗಿ ಯಂತಹ ಹಿರಿಯ ಸಾಹಿತಿಗಳ ತ್ಯಾಗ, ಬಲಿದಾನವನ್ನು ಸ್ಮರಿಸಿಕೊಂಡರು, ನಾಡಜನತೆಯ ಪರವಾಗಿ ಹಿರಿಯ ಸಾಹಿತಿಗಳನ್ನು ಸ್ಮರಿಸಿಕೊಂಡರು. ಇದಕ್ಕೂ ಮುನ್ನ ನಾಡಿನ ಹಿರಿಯ ಸಾಹಿತಿಗಳು, ಸ್ಥಳಿಯ ನಾಯಕರು, ಚಳವಳಿಯ ಸ್ವರೂಪ ರೂಪರೇಶೆಗಳನ್ನು ಜನತೆಗೆ ತಿಳಿಯಪಡಿಸಿದರು.'' ಅಭಿಮಾನಿಗಳ ಒತ್ತಾಯದ ಮೇರೆಗೆ ರಾಜ್‌ಕುಮಾರ್ ಅವರು ಮಯೂರ ಚಿತ್ರದ 'ನಾನಿರುವುದೇ ನಿಮಗಾಗಿ' ಎನ್ನುವ ಗೀತೆಯನ್ನು ಹಾಡುತ್ತ ಕಾರ್ಯಕ್ರಮವನ್ನು ಅಂತ್ಯಗೊಳಿಸಿದರು.

೫.೩.೧. ಹುಬ್ಬಳ್ಳಿಯಲ್ಲಿ ನಡೆದ ಬಹಿರಂಗ ಸಭೆ.

ಧಾರವಾಡದಲ್ಲಿ ಮುಗಿಲು ಮುಟ್ಟಿದ ಘೋಷಣೆ, ಜಯಕಾರ, ಮತ್ತು ಆಪಾರ ಅಭಿಮಾನಿಗಳ ಸಹಕಾರದಿಂದ ಮುಕ್ತಾಯವಾದ ಚಿತ್ರಕಲಾವಿದರ ಜಾಥಾ ಅದೇ ದಿನ ನಾಲ್ಕು ಘಂಟೆಗೆ ನೆಹರು ಮೈದಾನದಲ್ಲಿ ಸೇರುವ ಕಾರ್ಯಕ್ರಮ ಏರ್ಪಾಡಾಗಿತ್ತು. ಆದರೆ ರಾಜಕುಮಾರ್ ಅವರು ಇಲ್ಲಿಗೆ ಬರಲು ಸ್ವಲ್ಪ ತಡವಾದರೂ ಜನತೆ ಕಾತುರದಿಂದ ಕಾಯುತ್ತಿದ್ದರು.

ರಾಜಕುಮಾರ್ ವೇದಿಕೆಯ ಬಳಿ ಬಂದಾಗ ಮೂವತ್ತು ಸಾವಿರ ಅಭಿಮಾನಿಗಳಲ್ಲಿ ಮಿಂಚಿನ ಸಂಚಾರವುಂಟಾಯಿತು. ವೇದಿಕೆಯ ಮೇಲೆ ಹಿರಿಯ ಸಾಹಿತಿಗಳಾದ ಚಿದಾನಂದ ಮೂರ್ತಿ, ಚಂದ್ರಶೇಖರ ಪಾಟೀಲ, ಹಾಗೂ ಪಾಟೀಲ ಪುಟ್ಟಪ್ಪ ನಂತಹವರು ಮಾತನಾಡಿದನಂತರ ರಾಜಕುಮಾರ್ ಮಾತನಾಡ ತೊಡಗಿದರು. ''ಬೆಳಗಾಂ, ಧಾರವಾಡದಲ್ಲಿ ಕನ್ನಡದ ಭಾವುಟವನ್ನು ಹಾರಿಸಿ ನಿಮ್ಮ ಬಳಿಗೆ ಭಿಕ್ಷೆಗಾಗಿ ಬಂದಿದ್ದೇವೆ. ನೀವೆಲ್ಲರು

ಚಳವಳಿಗೆ ಬೆಂಬಲ ನೀಡಬೇಕು ಎಂದಾಗಿ.[೫]'' ಜಯಕಾರ, ಘೋಷಣೆಗಳು ಮುಗಿಲು ಮುಟ್ಟಿದವು. ನಮ್ಮ ಕನ್ನಡ ತಾಯಿ ಶಾಶ್ವತವಾಗಿ ಮೆರೆಯುವಂತಾಗಲಿ, ನಾವೆಲ್ಲ ಒಟ್ಟಿಗೆ ಕೂಡಿಕೊಂಡು ಹೋರಾಟ ನಡೆಸೋಣ, ಸರ್ಕಾರದ ಕಣ್ಣು ತೆರೆಸಿ ನಮ್ಮ ಬೇಡಿಕೆಯನ್ನು ಪೂರೈಯಿಸಿಕೊಳ್ಳೋಣ, ನನ್ನ ಕೊನೆಯ ಉಸಿರು ಇರುವ ತನಕ ಕನ್ನಡಕ್ಕಾಗಿ ನಾನು ಜೀವಿಸುತ್ತೇನೆ. ನೀವು ತೋರಿದ ಹಾದಿಯಲ್ಲಿ ನಾವೆಲ್ಲ ನಡೆಯುತ್ತೇವೆ, ಬನ್ನಿ ನಮ್ಮ ಸಂಗಡ ಎನ್ನುವಂಥ ಮಾತು ಸಭೆಯಲ್ಲಿ ರೋಮಾಂಚನವನ್ನುಂಟು ಮಾಡಿತು. ಈ ನಡುವೆ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರೂ ಅಭಿಮಾನಿಗಳು ಕದಲದೆ ನಿಶ್ಚಲವಾಗಿ ನಿಂತಿದ್ದರು. ಇದಕ್ಕೂ ಮುನ್ನ ಮಾತನಾಡಿದ ಪಾಟೀಲಪುಟ್ಟಪ್ಪನವರು ಕನ್ನಡ ಭಾಷೆಯಿದ್ದರೆ ಕನ್ನಡನಾಡು ಇರುತ್ತದೆ. ನಮಗೆ ನಾಡು ನುಡಿ ಮುಖ್ಯ ಎಂದರು. ಇದು ಸರ್ಕಾರಕ್ಕೆ ಬೇಕಿಲ್ಲವೆಂದು ಸರ್ಕಾರದ ಕ್ರಮವನ್ನು ತರಾಟೆಗೆ ತೆಗೆದುಕೊಂಡರು. ನಂತರ ಹಿರಿಯ ಸಾಹಿತಿಗಳು, ಚಿತ್ರ ಕಲಾವಿದರು ಮಾತನಾಡಿ ಗೋಕಾಕ್ ವರದಿಯ ಮುಖ್ಯಾಂಶಗಳು ಹಾಗೂ ಜನಸಾಮಾನ್ಯರ ಪಾತ್ರವನ್ನು ಕುರಿತು ಮಾತನಾಡಿದರು.

೪. ಬಳ್ಳಾರಿ ಸೀಮೆಯ ಅಚ್ಚಳಿಯದ ಪ್ರೀತಿ.

ಗೋಕಾಕ್ ಚಳವಳಿಗೆ ಸಂಬಂಧಿಸಿದಂತೆ ಇಲ್ಲಿ ಸುಮಾರು ೭೪ ದಿನಗಳ ಕಾಲ ಪ್ರತಿಭಟನಾ ಕಾರ್ಯಕ್ರಮಗಳು ಹಲವಾರು ರೂಪದಲ್ಲಿ ನಡೆಯುತ್ತಿದ್ದವು. ಇಲ್ಲಿನ ಜನತೆ ತೋರಿದ ಕನ್ನಡದ ಅಭಿಮಾನ ಅನನ್ಯವಾದುದು. ರಾಜಕುಮಾರ್ ಅವರು ತಮ್ಮ ಎರಡನೇ ದಿನದ ಜಾಥಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾಡನಾಡಲು ೧೭.೫.೮೨ರಂದು ತಮ್ಮ ತಂಡದೊಂದಿಗೆ ಆಗಮಿಸಿದರು. ಇಲ್ಲಿನ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ನೆರೆದಿದ್ದ ಮೂವತ್ತು ಸಾವಿರಕ್ಕೂ ಅಧಿಕ ಜನಸ್ತೋಮವನ್ನುದ್ದೇಶಿಸಿ ರಾಜ್‌ಕುಮಾರ್ ಅವರು ಮಾತನಾಡಿದರು. ''ಸರ್ಕಾರವು ಗೋಕಾಕ್ ವರದಿಯಲ್ಲಿನ ಅಂಶಗಳನ್ನು ಜಾರಿಗೊಳಿಸುವ ತನಕ ನಾವೆಲ್ಲರು ಹೋರಾಟವನ್ನು ಮುಂದುವರೆಸೋಣ, ನೀವೆಲ್ಲರು ಬೆಂಬಲ ನೀಡಿದರೆ ಅಸಾಧ್ಯವಾದುದು ಯಾವುದು ಇಲ್ಲ. ನಾವೇ ಚುನಾಯಿಸಿದ ಸರ್ಕಾರವನ್ನು ನಾವು ಕೆಳಗಿಳಿಸಬೇಕು, ಇಲ್ಲದೇ ಸರ್ಕಾರ ನಮ್ಮ ಬೇಡಿಕೆಯನ್ನು ಪೂರೈಸಬೇಕು, ಹಾಗೆಯೇ ನಮ್ಮ ಭಾಷೆಯ ಮೂಲಕವೇ ನಮ್ಮ ಮನಸ್ಸುದೇಹ ಅರಳಬೇಕು ಎಂದು ಜನಸ್ತೋಮಕ್ಕೆ ಕಿವಿಮಾತು ಹೇಳಿದರು.[೬]'' ನಟ ಧೀರೇಂದ್ರ ಗೋಪಾಲ್ ಅವರು ಮಾತನಾಡಿ ವರದಿಯನ್ನು ಸಮಗ್ರವಾಗಿ ಜಾರಿಗೆ ತರದೇ ಹೋದರೆ ಕರ್ನಾಟಕ ರಾಜ್ಯ ಕುರುಕ್ಷೇತ್ರವಾದೀತು ಎಂದು ಎಚ್ಚರಿಸಿದರು. ನಂತರ ನಾಗ್ ಸಹೋದರರು, ಮಸುರಿ ಕೃಷ್ಣಮೂರ್ತಿ ಭಗವಾನ್, ಅಬ್ಬಯ್ಯನಾಯ್ಡು ಮುಂತಾದವರು ಮಾತನಾಡಿದರು. ನಾಡಿನ ಸಾಹಿತಿಗಳು ಸರ್ಕಾರದ ಕ್ರಮವನ್ನು ತರಾಟೆಗೆ ತಗೆದುಕೊಂಡು ಚಳವಳಿಯಿಂದ ದೂರ ಉಳಿದಿದ್ದ ಚಳವಳಿಗಾರರಿಗೆ ಮತ್ತು ಸಾಹಿತಿಗಳನ್ನು ಟೀಕಿಸಿದರು.

ಈ ಬಳ್ಳಾರಿಯ ಬಹಿರಂಗ ಸಭೆ ಸಮಯಕ್ಕೆ ಸರಿಯಾಗಿ ಬೆಳಿಗ್ಗೆ ೯ ಘಂಟೆಗೆ ಪ್ರಾರಂಭವಾಗಿ ೧೧ ಘಂಟೆಗೆ ಮುಕ್ತಾಯವಾಯಿತು. ಸಭೆಯ ಮುಕ್ತಾಯಕ್ಕೆ ಮಳೆರಾಯನ ಆರ್ಭಟ ಪ್ರಾರಂಭವಾದರೂ ಅಭಿಮಾನಿಗಳ ಹರ್ಷೋದ್ಗಾರ ಮುಗಿಲು ಮುಟ್ಟುತ್ತಿತ್ತು. ಸಭೆಯ ಮುಕ್ತಾಯದನಂತ ರಾಜ್‌ಕುಮಾರ್ ಅವರು ದಾವಣಗೆರೆಯಲ್ಲಿ ನಡೆಯಲಿರುವ ಬಹಿರಂಗ ಸಭೆಯ ಕಡೆ ತೆರಳಿದರು. ಆಗ ಬಳ್ಳಾರಿಯ ಅಭಿಮಾನಿ ಜನತೆ ಬಹು ದೂರದವರೆಗೂ ವಾಹನಗಳಲ್ಲಿ ರಾಜಕುಮಾರ್ ಅವರ ವಾಹನವನ್ನು ಹಿಂಬಾಲಿಸಿ ಬೀಳ್ಕೊಟ್ಟರು. ಹಾಗೆಯೇ ಎತ್ತಿನಗಾಡಿಗಳಲ್ಲಿ ಬಹುದೂರದ ಸ್ಥಳಗಳಿಂದ ರಾಜಕುಮಾರ್ ಅವರನ್ನು ಕಾಣಲು ಬಂದಿದುದು ಇಲ್ಲಿನ ವಿಶೇಷವಾಗಿತ್ತು.

೫. ದಾವಣಗೆರೆಯಲ್ಲಿ ಆಯೋಜಿಸಿದ್ದ ಬಹಿರಂಗ ಸಭೆ

ಬಳ್ಳಾರಿಯಲ್ಲಿ ಬಹಿರಂಗ ಸಭೆಯನ್ನು ಮುಗಿಸದ ರಾಜ್‌ಕುಮಾರ್ ಅವರು ತಮ್ಮ ತಂಡದೊಂದಿಗೆ ಅದೇ ದಿನ ದಾವಣಗೆರೆಯಲ್ಲಿ ನಡೆಯುವ ಸಭೆಗೆ ಬರುವಷ್ಟರಲ್ಲಿ ಸಂಜೆ ೫.೩೦ ನಿಮಿಷವಾಗಿತ್ತು. ಅದುವರೆಗೂ ಸಹಸ್ರ ಸಹಸ್ರ ಅಭಿಮಾನಿಗಳು ರಾಜಕುಮಾರ್ ಅವರ ಬರುವಿಕೆಗೆ ಕಾದುಕುಳಿತ್ತಿದ್ದರು. ರಾಜಕುಮಾರ್ ವೇದಿಕೆಗೆ ಬರುವಾಗ ಕ್ರಿಯಾಸಮಿತಿ ಮತ್ತು ಅಭಿಮಾನಿಗಳಿಂದ ಭವ್ಯಸ್ವಾಗತ ದೊರೆಯಿತು. ಗೋಕಾಕ್ ವರದಿ ಜಾರಿಗೆ ಬರಲಿ, ರಾಜಕುಮಾರ್‌ಗೆ ಜೈ ಎನ್ನುವಂತ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಮೂವತ್ತು ಮೂವತ್ತೈದು ಸಾವಿರ ಜನತೆ ನೆರೆದಿದ್ದ ಸಭೆಯಲ್ಲಿ ಮಾತನಾಡಿದ ರಾಜಕುಮಾರ್ ಅವರು ''ನಾನೊಬ್ಬ ಕಲಾವಿದನಾಗಿ ಇಲ್ಲಿಗೆ ಬಂದಿರುವುದಲ್ಲದೆ ಕನ್ನಡಭಿಮಾನಿಯಾಗಿಯೂ ಬಂದಿದ್ದೇನೆ. ನಾನು ನಿಮ್ಮ ಮಡಿಲ ಮಗ, ನಿಮ್ಮ ಆಶಿರ್ವಾದವೇ ನನ್ನ ಶ್ರೀರಕ್ಷೆ ರಾಜ್ಯದಲ್ಲಿ ಕನ್ನಡಭಾಷೆ ಸಂಸ್ಕೃತಿ ಉಳಿಯಬೇಕಾದರೆ ನಮ್ಮ ಮಾತೃಭಾಷೆಯಿಂದಲೇ ಸಾಧ್ಯ. ಆದ್ದರಿಂದ ಕನ್ನಡಿಗರು ಇನ್ನಾದರು ಎಚ್ಚರಗೊಳ್ಳಬೇಕು. ಪ್ರಾಚೀನ ಇತಿಹಾಸವಿರುವ ನಮ್ಮಭಾಷೆ ಅನ್ಯಭಾಷೆಯ ಮುಂದೆ ಕುಬ್ಜವಾಗಿರಬಾರದು, ತಲೆಎತ್ತಿ ನಡೆಯುವಂತಾಗಬೇಕು, ಆದರೆ ಭಾಷೆ ಎಂದಿಗೂ ಅಳಿಯ ಬಾರದು. ಇಂತಹ ವಿಚಾರಗಳು ಸರಕಾರಕ್ಕೆ ಏಕೆ ಅರ್ಥವಾಗಲಾರದು,'' ಎಂದು ಗುಡುಗಿದರು.

ಕನ್ನಡಿಗರು ಎಚ್ಚೆತ್ತರೆ ವರದಿ ಜಾರಿಯಾದೀತು ಮತ್ತು ಕನ್ನಡ ಉಳಿದೀತು, ನಮ್ಮ ಮಕ್ಕಳು ನಾವು ಕನ್ನಡದಲ್ಲಿ ಉಸಿರು ಆಡುವಂತಾಗುತ್ತದೆ. ಕನ್ನಡದ ಓಟುಗಳಿಂದ ಗದ್ದುಗೆ ಏರಿರುವ ಸರಕಾರ ಹುಚ್ಚು ಕುದುರೆಯಂತೆ ಓಡುತಿದೆ. ಈ ಓಟಕ್ಕೆ ಕಡಿವಾಣ ಹಾಕುವ ಸಮಯ ಈಗ ನಮಗೆ ಬಂದಿದೆ, ಈ ಅವಕಾಶವನ್ನು ಸೂಕ್ತವಾಗಿ ಬಳಸಿಕೊಂಡಾಗ ಮಾತ್ರ ಕನ್ನಡತನ ನಮ್ಮಲ್ಲಿ ಗಟ್ಟಿಯಾಗುತ್ತದೆ.[೬] ಎಂದು ಮಾತನಾಡಿದರು. ರಾಜ್ ಮಾತನಾಡಿದ ನಂತರ ಸಾಹಿತಿಕಲಾವಿದರರು ಸಹೋದರರು ಮಾತನಾಡಿ ರಾಜ್ ಅವರ ಮಾತನ್ನು ಬೆಂಬಲಿಸಿದರು. ಕಾರ್ಯಕ್ರಮ ಮುಗಿದಾಗ ಸುಮಾರು ೯ ಘಂಟೆ ರಾತ್ರಿಯಾಗಿತ್ತು. ಅಲ್ಲಿಗೆ ಎರಡನೇ ದಿನದ ಕಾರ್ಯಕ್ರಮಕ್ಕೆ ಅಂತಿಮ ತೆರೆ ಎಳೆಯಲಾಯಿತು. ರಾಜಕುಮಾರ್ ಅವರ ಪತ್ನಿ ಪಾರ್ವತಮ್ಮನವರು ದಾವಣಗೆರೆಯ ಈ ಸಭೆಯನ್ನುದ್ದೇಶಿಸಿ ಮಾತನಾಡಿ ತನ್ನ ಕನ್ನಡ ಬದ್ದತೆಯನ್ನು ಅನಾವರಣಗೊಳಿಸಿದ್ದು ಇಲ್ಲಿನ ವಿಷೇಶವಾಗಿತ್ತು.

೬. ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ೩ನೇ ದಿನದ ಜಾಥಾದ ಆರಂಭ

ದಾವಣಗೆರೆಯಲ್ಲಿ ಸಭೆಯನ್ನು ಮುಗಿಸಿದ ರಾಜಕುಮಾರ್ ಅವರನ್ನೊಳಗೊಂಡ ತಂಡ ಅಂದು ರಾತ್ರಿ ಮೈಸೂರಿಗೆ ಪ್ರಯಾಣ ಬೆಳಸಿತು. ದಾರಿ ಮಧ್ಯದಲ್ಲಿ ರಾಜಕುಮಾರ್ ಅವರ ವಾಹನದಲ್ಲಿ ತಾಂತ್ರಿಕ ದೋಷ ಉಂಟಾದ ಪರಿಣಾಮವಾಗಿ ಮೈಸೂರಿಗೆ ನಿಗದಿತ ಸಮಯಕ್ಕೆ ಬರಲಾಗದೆ ತಮ್ಮ ಕಾರ್ಯಕ್ರಮದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾಯಿತು. ೧೮.೫.೮೨ ರ ಬೆಳಿಗ್ಗೆ ಮೈಸೂರಿನಲ್ಲಿ ಬೆಳಿಗ್ಗೆ ೯ ಘಂಟೆಗೆ ಸಭೆ ನಡೆಯುವುದರಲ್ಲಿತ್ತು. ಆದರೆ ರಾಜಕುಮಾರ್ ಅವರು ೯.೩೦ ನಿಮಿಷಕ್ಕೆ ನೇರವಾಗಿ ವೇದಿಕೆಯ ಬಳಿಗೆ ಆಗಮಿಸಿದರು. ಈ ಸಮಯಕ್ಕಾಗಲೇ ಪುರಭವನದ ಎದುರಿನ ಮೈದಾನದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆದಿದ್ದರು. ಈ ಜನಸಾಗರವನ್ನು ಕಂಡ ರಾಜಕುಮಾರ್ ಅವರು ವೇದಿಕೆಯ ಮೇಲೆ ಭಾವೊದ್ವೇಗದಿಂದ ಮಾತನಾಡುತ್ತಾ ಕಣ್ಣೀರು ಸುರಿಸತೊಡಗಿದರು. "ಕರ್ನಾಟಕದಲ್ಲಿ ಕನ್ನಡ ಭಾಷೆಗಾಗಿ ಆದರಲ್ಲಿಯೂ ಒಂದು ವರದಿಗಾಗಿ ಇಷ್ಟೆಲ್ಲ ಹೋರಾಟ ಮಾಡಬೇಕೆ? ಕನ್ನಡಿಗರಾದ ನಾವು ಕನ್ನಡವನ್ನು ಉಳಿಸಿ, ನಮ್ಮ

ಮಾತೃಭಾಷೆಯಲ್ಲಿಯೇ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿ ಎಂದು ಕನ್ನಡಿಗರನ್ನೇ ಕೇಳಬೇಕಾದ ಪರಿಸ್ಥಿತಿ ಒದಗಿದೆ, ಇದಕ್ಕೆ ಕೊನೆ ಎಂದು ಐವತ್ತು ಸಾವಿರ ಜನತೆಯನ್ನುದ್ದೇಶಿಸಿ ವಿಷಾದ ವ್ಯಕ್ತಪಡಿಸಿದರು".[೮]

''ಕನ್ನಡ ತಾಯಿಗಾಗಿ ನಾವು ಎಲ್ಲಾ ರಂಗದಲ್ಲಿ ಕನ್ನಡ ಭಾಷೆಯನ್ನು ಘೋಷಿಸಬೇಕು. ಎಂದು ರಾಜ್‌ಕುಮಾರ್ ಅವರು ನುಡಿಯುತ್ತಿದ್ದಂತೆಯೇ ಕಣ್ಣಲ್ಲಿ ನೀರು ಧಾರಕಾರವಾಗಿ ಸುರಿಯತೊಡಗಿತು. ತಮಗರಿವಿಲ್ಲದಂತೆಯೇ ಭಾವೋದ್ವೇಗಕ್ಕೆ ಒಳಗಾಗಿ ಬಲಗೈನಲ್ಲಿ ಕರವಸ್ತ್ರವನ್ನು ಹಿಡಿದು ಕಣ್ಣೀರನ್ನು ಒರೆಸ ತೊಡಗಿದರು.''[೯] ಕನ್ನಡನಾಡಿನಲ್ಲಿ ಕನ್ನಡಕ್ಕೆ ಮಾನ್ಯತೆ ಇಲ್ಲವಲ್ಲ ಎಂದು ಕಣ್ಣೀರಿಟ್ಟ ರಾಜ್ ಅವರನ್ನು ಕಂಡ ಪತ್ನಿ ಪಾರ್ವತಮ್ಮನವರು ಮತ್ತು ವೇದಿಕೆಯ ಮೇಲಿದ್ದವರಿಗೆಲ್ಲ ಕ್ಷಣಕಾಲ ಮೌನ ಆವರಿಸಿತ್ತಲ್ಲದೆ ಕೆಲವು ಅಭಿಮಾನಿಗಳು, ಮಹಿಳೆಯರು ತಾವು ಅತ್ತರು. ಸಭೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಕೆಲವರಿಗೆ ಗೊತ್ತಾಗಲೇ ಇಲ್ಲ. ''ಈ ಸಮಯದಲ್ಲಿ ಆ ಕ್ಷಣ ಉಂಟಾದ ಗದ್ದಲದಿಂದ ರಾಜ್ ಧ್ವನಿವರ್ಧಕದ ಮೂಲಕ ಅಭಿಮಾನಿಗಳನ್ನು ಸಮಾಧಾನ ಪಡಿಸಿದರು. ನಿವ್ಯಾರು ಹಿಂಸೆಗೆ ಪ್ರಚೋದನೆ ನೀಡಬೇಡಿ, ಹಿಂಸೆಯಿಂದ ನಾವೇನು ಸಾಧನೆ ಮಾಡುವಂತಾಗುವುದಿಲ್ಲ. ಇಲ್ಲಿ ಏನಾದರು ಅನಾಹುತ ನಡೆದರೆ ನಮ್ಮ ಹೋರಾಟಕ್ಕೆ ಹಿನ್ನಡೆಯಾಗುತ್ತದೆ ಎಂದು ಅಭಿಮಾನಿಗಳಿಗೆ ತಿಳಿಸಿದರು.''[೧೦] ನಮ್ಮ ಬೇಡಿಕೆ ಈಡೇರುವ ತನಕ ಚಳವಳಿಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ, ನೀವು ನನ್ನ ಅನ್ನದಾತರು ನಿಮಗೆ ಬೇಕಾಗಿರುವುದು ನನಗೂಬೇಕು ನೀವು ತೋರಿದ ಹಾದಿಯಲ್ಲಿ ನಾವು ಚಳವಳಿಯನ್ನು ಕಟ್ಟುತ್ತೇವೆ. ನನ್ನ ಅಂತಿಮ ಕ್ಷಣದವರೆಗೂ ಈ ಜೀವ ಕನ್ನಡಕ್ಕೆ ಮೀಸಲು ಎಂದು ರಾಜ್ ತಿಳಿಸಿದರು.

ನಂತರ ನಟ ವಿಷ್ಣುವರ್ಧನ್ ಅವರು ಮಾತನಾಡಿ ರಾಜಕುಮಾರ್ ಅವರನ್ನು ಬೆಂಬಲಿಸಿ ನಮ್ಮ ಬೇಡಿಕೆ ಪೂರೈಸಿಕೊಳ್ಳೋಣ ಎಂದರು. ನಟ ದ್ವಾರಕೇಶ್ ಮಾತನಾಡಿ ಗುಂಡುರಾಯರು ವರದಿಯನ್ನು ಜಾರಿಗೆ ತರದೆ ಹೋದರೆ ರಾಜಕುಮಾರ್ ಅವರನ್ನೇ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡೋಣ ಎಂದರು. ನಟ ಎಂ.ಪಿ. ಶಂಕರ್ ಅವರು ಶಂಖದ ಕಹಳೆಯನ್ನು ಊದಿ ಸರಕಾರಕ್ಕೆ ಇದು ಅಂತಿಮ ಎಚ್ಚರಿಕೆ ಎಂದರು. ನಂತರ ನಾಡಿನ ಹಿರಿಯ ಸಾಹಿತಿಗಳಾದ ಪಾಟೀಲಪುಟ್ಟಪ್ಪ, ತಾ.ರಾ.ಸುಬ್ಬರಾವ್, ಚಿದಾನಂದ ಮೂರ್ತಿ, ಚಂದ್ರಶೇಖರ ಪಾಟೀಲ, ಕಲಬುರ್ಗಿ, ಸ್ಥಳೀಯ ನಾಯಕರು ಮುಂತಾದವರು ಮಾತನಾಡಿ ವರದಿಯ ಬಗ್ಗೆ ಜನತೆಗೆ ಅರಿವು ಮೂಡಿಸಿದರು.

೭. ಸಕ್ಕರೆಯ ಸೀಮೆ ಮಂಡ್ಯ ನಗರದಲ್ಲಿ ರಾಜಕುಮಾರ್

ಮಂಡ್ಯ ನಗರದಲ್ಲಿ ಅದೇ ದಿನ ಮದ್ಯಾಹ್ನ ೨ ಘಂಟೆಗೆ ಸಭೆ ಏರ್ಪಾಡಾಗಿತ್ತು. ರಾಜಕುಮಾರ್ ಅವರು ಮಂಡ್ಯ ನಗರಕ್ಕೆ ಬರುವ ವೇಳೆಗಾಗಲೇ ನಗರ ಸುಂದರವಾಗಿ ಕಂಗೊಳಿಸುತ್ತಿತ್ತು. ನಗರದಲ್ಲಿ ಶಾಲಾಕಾಲೇಜುಗಳಿಗೆ ಸ್ವಯಂ ಘೋಷಿತ ರಜೆ ನೀಡಲಾಗಿತ್ತು. ಹೊರ ಊರುಗಳಿಂದ ಅಭಿಮಾನಿಗಳು ಎತ್ತಿನಗಾಡಿ, ಕಾರು, ಲಾರಿ, ದ್ವಿಚಕ್ರವಾಹನಗಳ ಮೂಲಕ ಕ್ರೀಡಾಂಗಣಕ್ಕೆ ಅರ್ಧ ದಿನ ಮೊದಲೇ ಬರುತ್ತಿದುದು ಸಾಮಾನ್ಯವಾಗಿತ್ತು. ಕ್ರೀಡಾಂಗಣದಲ್ಲಿ ರಾಜಕುಮಾರ್ ಅವರು ಬರುವ ವೇಳೆಗಾಗಲೇ ಐವತ್ತು ಸಾವಿರ ಅಭಿಮಾನಿಗಳು ನೆರೆದಿದ್ದರು.

ರಾಜ್‌ಕುಮಾರ್ ಅವರು ವೇದಿಕೆಯ ಬಳಿ ಬಂದಾಗ ಅಭಿಮಾನಿಗಳು ಅಭಿಮಾನದಿಂದ ಮುತ್ತಿಗೆ ಹಾಕಿದರು. ಅವರನ್ನು ವೇದಿಕೆಯ ಮೇಲೆ ಕರೆತರಲು ಪೋಲಿಸ್ ವ್ಯವಸ್ಥೆ ಸಾಕಷ್ಟು ಶ್ರಮವಹಿಸಬೇಕಾಗಿ ಬಂದು, ಪೋಲಿಸ್ ಸಿಬ್ಬಂದಿ ರಾಜ್‌ಕುಮಾರ್ ಅವರ ಸುತ್ತ ಭದ್ರವಾದ ರಕ್ಷಣೆ ಒದಗಿಸಿ ನಡೆಯಬಹುದಾಗಿದ್ದ ಗದ್ದಲವನ್ನು ನಿಯಂತ್ರಿಸಿದರು. ಗಲಭೆ ನಿಯಂತ್ರಣಕ್ಕೆ ಬರದೇ ಹೋದಾಗ ರಾಜಕುಮಾರ್ ಅವರು ಧ್ವನಿವರ್ಧಕದ ಮೂಲಕ ''ಗೋಕಾಕ್ ವರದಿ ಜಾರಿಗೆ ಬರಲಿ, ಕನ್ನಡ ಮಾತೆಗೆ ಜಯವಾಗಲಿ ಎಂದೊಡನೆ ಸಭೆಯ ಅವರತ್ತವಾಲಿತು.''

ಮಾತು ಮುಂದುವರೆಸಿದ ರಾಜಕುಮಾರ್ ಅವರು ನಮ್ಮ ಕೂಗು ಗಗನ ಮುಗಿಲು ಮುಟ್ಟಬೇಕು, ಸರಕಾರದ ಕಣ್ಣು, ಕಿವಿ ತೆರೆಯ ಬೇಕು, ವರದಿ ಜಾರಿಯಾಗಬೇಕು. ಸರಕಾರವೇ ನೇಮಕ ಮಾಡಿದ್ದ ಸಮಿತಿಯ ವರದಿಯನ್ನು ಸರಕಾರ ಪುರಸ್ಕರಿಸಿ ತನ್ನ ತಪ್ಪನ್ನು ತಿದ್ದಿಕೊಳ್ಳಬೇಕು ಎಂದರು. ನಮ್ಮ ಮಕ್ಕಳಿಗೆ ಭವಿಷ್ಯದ ಭಾಗಿಲು ನಮ್ಮ ಭಾಷೆಯ ಮೂಲಕ ತೆರೆಯಬೇಕು. ''ಸಂಸ್ಕೃತ ಭಾಷೆಯನ್ನು ಒತ್ತಾಯ ಪೂರ್ವಕವಾಗಿ ಮಕ್ಕಳ ಮೇಲೆ ಹೇರುವುದು ಯಾವ ನ್ಯಾಯ'' ಎಂದು ಪ್ರಶ್ನಿಸಿದರು. ''ಸಾಹಿತಿಗಳು ಈ ನಾಡಿಗೆ ದಕ್ಕಿರುವ ವರ. ಅವರ ಹೋರಾಟದಿಂದಾಗಿ ಈ ರಾಜ್‌ಕುಮಾರ್ ಈ ದಿನ ನಿಮ್ಮ ಮುಂದಿದ್ದಾನೆ. ಸಾಹಿತಿಗಳಿಗೆ ಸರಕಾರ ಬೆಲೆ ನೀಡದಿದ್ದರೆ ಏನು ಪ್ರಯೋಜನ ಎಂದು ತಿಳಿಸಿದರು.''[೧೮] ವೇದಿಕೆಯಲ್ಲಿದ್ದ ಸಾಹಿತಿಗಳು, ಬುದ್ಧಿಜೀವಿಗಳು ಚಿತ್ರನಟರು ಮಾತನಾಡಿ ಗೋಕಾಕ್ ಚಳವಳಿಯ ಸ್ವರೂಪವನ್ನು ಗ್ರಾಮೀಣ ಜನತೆಗೆ ತಲುಪಿಸಲು ಒಪ್ಪವಂತೆ ಮಾತನಾಡಿದರು.

ಮಂಡ್ಯ ನಗರದಲ್ಲಿ ಕಾರ್ಯಕ್ರಮವನ್ನು ಮುಗಿಸಿದ ನಂತರ ರಾಜಕುಮಾರ್ ಅವರ ತಂಡ ರಾಮನಗರ, ಚನ್ನಪಟ್ಟಣ ಮಾರ್ಗವಾಗಿ ಬೆಂಗಳೂರಿಗೆ ತೆರಳಿದರು. ರಾಮನಗರ ಚನ್ನಪಟ್ಟಣಗಳಲ್ಲಿ ಅಭಿಮಾನಿಗಳು ರಾಜಕುಮಾರ್ ಅವರನ್ನು ಸುತ್ತುವರೆದು ಹಾರಾ ತುರಾಯಿಗಳ ಮೂಲಕ ಅಭಿನಂದಿಸಿದುದು ಗಮನಾರ್ಹವಾಗಿತ್ತು.

೮. ಪ್ರಥಮ ಹಂತದ ಜಾಥಾಗೆ ಅಂತಿಮ ತೆರೆ(೧೯.೫.೧೯೮೨)

ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಪ್ರಥಮ ಹಂತದ ಜಾಥಾ ಕಾರ್ಯಕ್ರಮಕ್ಕೆ ಅಂತಿಮ ತೆರೆ ಎಳೆಯಲು ಮೊದಲೇ ನಿಗದಿಪಡಿಸಿದಂತೆ ಎಲ್ಲಾ ಸಿದ್ಧತೆಗಳು ಸದ್ದುಗದ್ದಲವಿಲ್ಲದೆ ನಡೆಯುತ್ತಿದ್ದವು. ಈ ಬಾರಿ ಬಹಿರಂಗ ಸಭೆಯನ್ನು ಕನ್ನಡ ಕೇಂದ್ರ ಕ್ರಿಯಾಸಮಿತಿ, ಸಾಹಿತಿ-ಕಲಾವಿದರ ಬಳಗ, ಕನ್ನಡಪರ ಸಂಘಟನೆಗಳು ಆಯೋಜಿಸಿದ್ದವು. ಅಂದಿನ ಪೋಲಿಸ್ ಅಧಿಕಾರಿಯಾಗಿದ್ದ ಎಸ್.ಪಿ. ಸಾಂಗ್ಲಿಯಾನ ಅವರ ಮಾರ್ಗದರ್ಶನದಲ್ಲಿ ಪೋಲಿಸ್ ಬಂದೋಬಸ್ತ್ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಸಮಾರಂಭದ ಅವಧಿ ಹತ್ತಿರ ಬರುತ್ತಿದ್ದಂತೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರತೊಡಗಿದರು.

ಸಮಯ ೧೧.೩೦ ಆಗುತ್ತಿದ್ದಂತೆಯೇ ರಾಜ್‌ಕುಮಾರ್ ಮತ್ತು ಸಾಹಿತಿ ಕಲಾವಿದರನೊತ್ತ ವಾಹನಗಳು ಗಾಂಧಿ ಬಜಾರ್ ಕಡೆಯಿಂದ ವೇದಿಕೆಯತ್ತ ಬರತೊಡಗಿದವು. ಆಗ ರಾಜ್‌ಕುಮಾರ್ ಅವರಿಗೆ ಜೈ, ಗೋಕಾಕ್ ವರದಿ ಜಾರಿಗೆ ಬರಲಿ ಎನ್ನುವ ಘೋಷಣೆಗಳು ಮೊಳಗುತ್ತಿದ್ದವು. ವೇದಿಕೆಯ ಬಹಿರಂಗ ಸಮಾವೇಶ ೧೧.೪೦ಕ್ಕೆ ಪ್ರಾರಂಭವಾಯಿತು. ಲಕ್ಷಾಂತರ ಮಂದಿ ನೆರೆದಿದ್ದ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ರಾಜ್‌ಕುಮಾರ್ ಅವರು " ಕರ್ನಾಟಕದಲ್ಲಿ ಕನ್ನಡವು ಪ್ರಥಮ ಭಾಷೆಯಾಗಬೇಕು, ಏಕೀಕರಣಗೊಂಡ ರಾಜ್ಯದ ಕನಸು ನನಸಾಗಬೇಕು, ಅದಕ್ಕಾಗಿ ವರದಿ ಜಾರಿಯಾಗಬೇಕೆಂದು ನನ್ನ ಮಿತ್ರರು ಸಾಹಿತಿಗಳು ಈ ಚಳವಳಿಯ ಮುಂದಾಳತ್ವ ವಹಿಸಬೇಕೆಂದು ಕೇಳಿಕೊಂಡ ನಂತರ ಆತ್ಮ ಸಂತೋಷದಿಂದ ನಾಡ ಸೇವೆಗೆ ನನಗೆ ದೊರೆತ ಅವಕಾಶವೆಂದು ಭಾವಿಸಿ ಚಳವಳಿಗೆ ಪಾದಾರ್ಪಣೆ ಮಾಡಿದ್ದೇನೆ ಎಂದರು. ನಾನು ವಿದ್ವತ್ತಿನಲ್ಲಾಗಲಿ, ವಯಸ್ಸಿನಲ್ಲಾಗಲಿ ಹಿರಿಯನಲ್ಲ, ಸಾಹಿತಿಕಲಾವಿದರು ಕರೆದೊಯ್ದ ದಾರಿಯಲ್ಲಿ ನಾನು ನಡೆಯುತ್ತಿದ್ದೇನೆ. ಈ ಸಾಹಿತಿಗಳು ಹೋರಾಟಗಾರರು ನನ್ನಮೇಲೆ ಇಟ್ಟಿರುವ ಅಭಿಮಾನದಿಂದಾಗಿ ನನಗೆ ನಾಯಕತ್ವ ನೀಡಿದ್ದಾರೆ ಈ ಅಭಿಮಾನವನ್ನು ಎಂದೆಂದಿಗೂ ಮರೆಯಲಾರೆ ಎಂದು ನಮ್ರತೆಯಿಂದ ನುಡಿದರು.''

ವಿ.ಕೃ ಗೋಕಾಕ್ ಅವರಂಥ ಹಿರಿಯ ಸಾಹಿತಿಗಳಿಗೆ ಸರಕಾರ ಗೌರವನೀಡದೆ ಕನ್ನಡಿಗರಿಗೆ ದ್ರೋಹವೆಸಗುತ್ತಿದೆ. ವರದಿ ಜಾರಿಗಾಗಿ ಜಾತೀಯತೆ ಹಾಗೂ ಸಂವಿಧಾನದ ಸೋಗು ಹಾಕಬೇಡಿ ನಮ್ಮ ಈ

ಹೋರಾಟವು ಯಾರ ವಿರುದ್ಧವು ಅಲ್ಲ, ಯಾವ ವ್ಯವಸ್ಥೆಯ ವಿರುದ್ಧವು ಅಲ್ಲ, ಕನ್ನಡ ದ್ರೋಹಿ ಸರಕಾರದ ವಿರುದ್ಧ ಮಾತ್ರ ಎಂದು ಗುಡುಗಿದರು. ''ಗಾಂಧೀಜಿಯವರು ತಾಯ್ನಾಡಿನ ಸ್ವಾತಂತ್ರಕ್ಕಾಗಿ ಭಾಷಣ ಮಾಡಿದ ಈ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಾವೆಲ್ಲ ಈದಿನ ಸೇರಿದ್ದೇವೆ, ಗಾಂಧೀಜಿಯವರಿಗೆ ದೊರೆತ ಜಯ ನಮಗೂ ದೊರೆಯುತ್ತದೆಂಬ ಭರವಸೆ ನಮಗಿದೆ ಎನ್ನುವ ಮಾತನ್ನು ಹೇಳಿ ಸಭೆಯನ್ನು ರೋಮಾಂಚರಗೊಳಿಸಿದರು.''[೧೩] ಈ ಸಮಯದಲ್ಲಿ ನಾಡಿನ ನೂರಾರು ಸಾಹಿತಿ-ಕಲಾವಿದರು, ಕನ್ನಡ ಚಿತ್ರರಂಗದ ನಟನಟಿಯರು, ಕನ್ನಡಪರ ಹೋರಾಟಗಾರರು, ಕಾರ್ಮಿಕರು, ಜನಸಾಮಾನ್ಯರು ಸಭೆಯಲ್ಲಿ ಭಾಗವಹಿಸಿದರು.

ಚಿತ್ರನಟರಾದ ಅಶೋಕ್ ಅವರು ಮಾತನಾಡಿ ನೆನ್ನೆದಿನ ರಾಜಣ್ಣನವರು ಮೈಸೂರಿನಲ್ಲಿ ಕಣ್ಣೀರಿಟ್ಟಿದ್ದಾರೆ, ಅದು ಬರೀ ಕಣ್ಣೀರಲ್ಲ ಆಟಂ-ಬಾಂಬ್, ಅದು ಯಾವಾಗ ಸಿಡಿಯುತ್ತದೆಯೋ ತಿಳಿಯದು ಎಂದರು, ಪ್ರತಿಯೊಬ್ಬ ಕನ್ನಡಿಗನು ಕೈನಲ್ಲಿ ಕನ್ನಡ ಧ್ವಜವನ್ನು ಹಿಡಿದರೆ ಪ್ರತಿಯೊಬ್ಬನು ಮಯೂರನಾಗುತ್ತಾನೆ ಆದ್ದರಿಂದ ಕನ್ನಡಪರ ದೋರಣೆಯನ್ನು ಸರಕಾರ ಪಾಲಿಸಬೇಕೆಂದು ಮಾತನಾಡಿದರು.

ಮೂರು ದಿನಗಳ ಜಾಥಾ ಅವದಿಯಲ್ಲಿ ರಾಜ್‌ಕುಮಾರ್ ಅವರು ನುಡಿದ ಒಂದೊಂದು ನುಡಿಯು ಅತ್ಯಂತ ಗಮನಾರ್ಹವಾದುದು. ರಾಜ್‌ಕುಮಾರದು ಅಂದಭಿಮಾನವಲ್ಲ . ಮೂರುಕೋಟಿ ಕನ್ನಡಿಗರ ಜೀವಂತ ಧ್ವನಿಯಾಗಿ ಪ್ರತಿನಿಧಿಸುತ್ತಿದ್ದಂತೆ ಇಡೀ ರಾಜ್ಯವೇ ಪ್ರತಿಧ್ವನಿಸುವಂತಾಯಿತು. ರಾಜಕುಮಾರ್ ಅವರು ಮಾತನಾಡಿದನಂತರ ನಾಡಿನ ಸಾಹಿತಿಗಳು, ಹೋರಾಟಗಾರರು, ಮುಂತಾದವರು ಮಾತನಾಡಿ ಜನತೆಗೆ ಕನ್ನಡ ಸಂದೇಶವನ್ನು ರವಾನಿಸಿದರು.

೫.೩. ರಾಜಕುಮಾರ್ ಅವರ ಎರಡನೇ ಹಂತದ ಜಾಥಾ

ಡಾ. ರಾಜಕುಮಾರ್ ಅವರು ತಮ್ಮ ಮೊದಲ ಹಂತದ ಜಾಥಾ ಕಾರ್ಯಕ್ರಮದ ಮೂಲಕ ರಾಜ್ಯದ ಜನತೆಯನ್ನು ಎಚ್ಚರಿಸುವಂತಹ ಕಾರ್ಯ ಮಾಡುತ್ತಾ ಸರಕಾರದ ಮೇಲೆ ಒತ್ತಡ ಹೇರತೊಡಗಿದರು. ಇದರಿಂದಾಗಿ ಸರ್ಕಾರ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಈ ನಡುವೆ ಚಳವಳಿಗಾರರಿಂದ ಹಲವಾರು ಹಂತದಲ್ಲಿ ಪ್ರತಿಭಟನೆಗಳು, ಧರಣಿಗಳು ನಡೆದವು, ಆದರೂ ಸರಕಾರ ಎಚ್ಚೆತ್ತು ಕೊಳ್ಳದಿದ್ದಾಗ, ಸಾಹಿತಿ ಕಲಾವಿದರು ಎರಡನೇ ಹಂತದ ರಾಜ್ಯ ಪ್ರವಾಸವನ್ನು ಏರ್ಪಡಿಸಿದರು. ಮೊದಲನೆ ಹಂತದ ಜಾಥಾದಲ್ಲಿ ಜನತೆ ನೀಡಿದ ಬೆಂಬಲ ಹಾಗೂ ಸ್ಫೂರ್ತಿಗಳಿಂದ ಎರಡನೇ ಹಂತದ ಜಾಥಾವನ್ನು ಮುನ್ನೆಡೆಸಲು ರಾಜ್‌ಕುಮಾರ್ ಅವರು ಮತ್ತೊಮ್ಮೆ ಸಾರಥಿಯಾಗಿ ಚಳವಳಿಯನ್ನು ಮುನ್ನೆಡೆಸಿದರು.

ಜುಲೈ ೧. ೧೯೮೨ರಂದು ಎರಡನೇ ಹಂತದ ಪ್ರವಾಸ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಿಂದ ಪ್ರಾರಂಭವಾಯಿತು. ೭ನೇ ತಾರೀಖು ಚಿತ್ರದುರ್ಗದ ಹಿರಿಯೂರಿನಲ್ಲಿ ಜಾಥಾವನ್ನು ಮುಕ್ತಾಯ ಮಾಡಿ ಅಂತಿಮ ಹಂತದ ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆಸುವಂತೆ ಮಾರ್ಗಸೂಚಿ ರೂಪಿಸಲಾಗಿತ್ತು. ಮೊದಲ ಹಂತದ ಪ್ರವಾಸ ಸಮಯದಲ್ಲಿ ತಲುಪಿದ್ದ ಸ್ಥಳಗಳನ್ನು ಹೊರತುಪಡಿಸಿ ಹೊಸ ಪ್ರದೇಶಗಳನ್ನು ಈ ಮಾರ್ಗಸೂಚಿಯಲ್ಲಿ ಅಳವಡಿಸಲಾಗಿತ್ತು. ಈ ಮಾರ್ಗ ಸೂಚಿಯಂತೆ ಹೊಸಕೋಟೆಯಿಂದ ಮೊದಲುಗೊಂಡು ಬಂಗಾರಪೇಟೆ, ಕೋಲಾರ, ಕೆ.ಜಿ. ಎಫ್, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತುಮಕೂರು,

[illegible]

ಶಿವಮೊಗ್ಗ, ಭದ್ರಾವತಿ, ಗಂಗಾವತಿ, ರಾಯಚೂರು, ಹಗರಿಬೊಮ್ಮನಹಳ್ಳಿ, ಚಿತ್ರದುರ್ಗ, ಹಿರಿಯೂರುಗಳಲ್ಲಿ ಬಹಿರಂಗ ಸಭೆ ನಡೆಸುವ ಉದ್ದೇಶ ಹೊಂದಲಾಗಿತ್ತು.

೧. ಎರಡನೇ ಧಾರವಾಡ ದೊಡ್ಡಬಳ್ಳಾಪುರದಲ್ಲಿ ಡಾ. ರಾಜ್‌ಕುಮಾರ್

ಉತ್ತರ ಕರ್ನಾಟಕದ ಧಾರವಾಡದಲ್ಲಿ ನಡೆಯುತ್ತಿದ್ದ ಮಾದರಿಯಲ್ಲಿಯೇ ದೊಡ್ಡಬಳ್ಳಾಪುರದಲ್ಲಿ ಗೋಕಾಕ್ ಚಳವಳಿಯ ವರದಿ ಅನುಷ್ಠಾನಕ್ಕಾಗಿ ವ್ಯವಸ್ಥಿತವಾಗಿ ಚಳವಳಿ ನಡೆಯುತ್ತಿದ್ದವು. ಆಗಿನ ಪುರಸಭೆಯ ಅಧ್ಯಕ್ಷರಾಗಿದ್ದಂತಹ ಮೈತ್ರಿಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಕನ್ನಡ ಕ್ರಿಯಾಸಮಿತಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿತ್ತು. ''ಸಾಹಿತಿಕಲಾವಿದರ ಬಳಗದವತಿಯಿಂದ ಬೆಂಗಳೂರಿನಲ್ಲಿ ಪುರಭವನದ ಮುಂಭಾಗ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ದೊಡ್ಡಬಳ್ಳಾಪುರದಿಂದ ನೂರಾರು ಕನ್ನಡ ಹೋರಾಟಗಾರರು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಮೂಲಕ ತೆರಳಿ ಭಾಗವಹಿಸಿದ್ದರಲ್ಲದೆ ಚಳವಳಿಯ ಸ್ಥಳದಲ್ಲಿ ಈ ಬಸ್ಸುಗಳು ಭಾಗವಹಿಸುವಂತಾದವು. ಮರುದಿನ ದಿನಪತ್ರಿಕೆಗಳಲ್ಲಿ ಚಳವಳಿಯಲ್ಲಿ ಕೆಂಪು ಬಸ್ಸು ಎಂಬುದಾಗಿ ಮುಖಪುಟದಲ್ಲಿ ಪ್ರಕಟವಾಯಿತು.''[೧೪]

ರಾಜ್‌ಕುಮಾರ್ ಅವರು ಎರಡನೇ ಹಂತದ ಜಾಥಾ ಕಾರ್ಯಕ್ರಮದಡಿಯಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮಾರ್ಗವಾಗಿ ಜುಲೈ ೨ರಂದು ದೊಡ್ಡಬಳ್ಳಾಪುರಕ್ಕೆ ಆಗಮಿಸಿದರು. ಇವರ ಜೊತೆಯಲ್ಲಿ ಪಾರ್ವತಮ್ಮ, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಚಿದಾನಂದಮೂರ್ತಿ, ಸಾ.ರಾ. ಗೋವಿಂದು, ಅಶೋಕ್, ಶಿವರಾಂ, ಮುಂತಾದ ಹಲವಾರು ವ್ಯಕ್ತಿಗಳು ಆಗಮಿಸಿದ್ದರು. ಈ ವೇಳೆಗಾಗಲೇ ಪಟ್ಟಣದ ತುಂಬ ಇದ್ದಂತಹ ಇಂಗ್ಲೀಷ್ ನಾಮ ಫಲಕಗಳನ್ನು ಕಿತ್ತೆಸೆದು ಕನ್ನಡ ನಾಮ ಫಲಕಗಳನ್ನು ಹಾಕಲಾಗಿತ್ತು. ರಾಜಕುಮಾರ್ ಅವರು ಭಗತ್‌ಸಿಂಗ್ ಕ್ರೀಡಾಂಗಣಕ್ಕೆ ಬರುವ ಸಮಯಕ್ಕಾಗಲೇ ಪಟ್ಟಣದಲ್ಲಿ ಹಬ್ಬದ ವಾತಾವರಣ ಕಂಡುಬರುತ್ತಿತ್ತು. ಪಟ್ಟಣದ ತುಂಬ ಎಲ್ಲೆಲ್ಲಿಯೂ ಜನಸಾಗರ ತುಂಬಿತುಳುಕುತ್ತಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದನಂತರ ರಾಜಕುಮಾರ್ ಅವರನ್ನು ಕ್ರೀಡಾಂಗಣಕ್ಕೆ ಕರೆತರಲಾಯಿತು. ಈ ಸಮಯಕ್ಕಾಗಲೇ ಕ್ರೀಡಾಂಗಣದಲ್ಲಿ ಇಪ್ಪತ್ತು ಸಾವಿರ ಜನತೆ ಇವರ ಬರುವಿಕೆಗಾಗಿ ಕಾದುಕುಳಿತ್ತಿದ್ದರು. ''ರಾಜ್‌ಕುಮಾರ್ ಅವರು ವೇದಿಕೆಯ ಬಳಿ ಬರುತ್ತಿದಂತೆಯೇ ಅಭಿಮಾನಿಗಳು ಜೇನುನೋಣ ಮುತ್ತಿದಂತೆ ಮುತ್ತಿದರು. ಈ ನಡುವೆ ಉಂಟಾದ ನೂಕುನುಗ್ಗಲಿನಲ್ಲಿ ರಾಜ್‌ಕುಮಾರ್ ಅವರು ಧರಿಸಿದ್ದ ಬಿಳಿಪಂಚೆ ಅಸ್ಥವ್ಯಸ್ಥವಾಗತೊಡಗಿತು. ಕೂಡಲೇ ಪೋಲಿಸು ಮಧ್ಯೆಧಾವಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿ ಕಾರ್ಯಕ್ರಮ ನಡೆಯಲು ಅನುವು ಮಾಡಿಕೊಟ್ಟರು.[೧೫]''

ದೊಡ್ಡಬಳ್ಳಾಪುರದಲ್ಲಿ ಗೋಕಾಕ್ ಚಳವಳಿಯ ಸಂಬಂಧವಾಗಿ ನಡೆಯುತ್ತಿದ್ದ ಹೋರಾಟ ಪ್ರತಿಭಟನೆಗಳಿಂದ ಈಗಾಗಲೇ ನೂರಾರು ಕನ್ನಡ ಕಾರ್ಯಕರ್ತರು ಬಂಧನಕ್ಕೆ ಒಳಗಾಗಿದ್ದರು. ಮನೆಮಠಗಳನ್ನು ತೊರೆದು ನಿರಂತರವಾಗಿ ಚಳವಳಿಯಲ್ಲಿ ತೊಡಗಿದ್ದ ವಿಚಾರ ದಿನಪತ್ರಿಕೆಯಲ್ಲಿ ಪ್ರಕಟವಾಗದ ದಿನವಿರಲಿಲ್ಲ. ಈ ವಿದ್ಯಮಾನಗಳನ್ನು ತಿಳಿದುಕೊಂಡಿದ್ದ ರಾಜ್‌ಕುಮಾರ್ ಅವರು ಮಾತನಾಡುತ್ತಾ ''ಬೃಹದಾ ಕಾರವಾದ ಹೋರಾಟ ಧಾರವಾಡದಲ್ಲಿ ನಡೆಯುತ್ತಿರುವಂತೆ ಇಲ್ಲಿಯು ಸಹ ಅದೇ ರೀತಿಯ ಹೋರಾಟ ನಡೆಯುತ್ತಿರುವುದರಿಂದ ದೊಡ್ಡಬಳ್ಳಾಪುರ ಎರಡನೆ ಧಾರವಾಡವಾಗಿ ಹೋರಾಟದಲ್ಲಿ ಗುರ್ತಿಸಿಕೊಂಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.[೧೬]'' ನಂತರ ಮಾತನಾಡುತ್ತ ಹೋರಾಟ ಮತ್ತಷ್ಟು ತೀವ್ರವಾಗಲು ಎಲ್ಲಾ ವರ್ಗದ ಜನತೆಯ ಸಹಕಾರ ಕೋರಿದರು. ರಾಜ್‌ಕುಮಾರ್ ಅವರು ೧೧ ಗಂಟೆಗೆ ಬರುವ ಕಾರ್ಯಕ್ರಮ ನಿಗದಿಯಾಗಿದ್ದರೂ

[illegible]

ಅವರು ಬರುವ ಹೊತ್ತಿಗೆ ಸಮಯ ೩ ಘಂಟೆ ದಾಟಿಯಾಗಿತ್ತು. ೩೦ ನಿಮಿಷದಲ್ಲಿ ಕಾರ್ಯಕ್ರಮ ಮುಗಿದು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯಲಿಲ್ಲ. ಕನ್ನಡ ಕ್ರಿಯಾ ಸಮಿತಿ, ಕನ್ನಡ ಸಾಹಿತ್ಯಪರಿಷತ್ತು, ಜಾಗೃತ ಪರಿಷತ್ತು, ಭುವನೇಶ್ವರರ ಕಲಾಸಂಘ, ಕಾರ್ಮಿಕ ಸಂಘಗಳು, ದಲಿತ ಸಂಘ ಮುಂತಾದವು ಈ ಬಹಿರಂಗ ಸಭೆಯನ್ನು ವ್ಯವಸ್ಥೆಮಾಡಿದವು.

ಉಪನ್ಯಾಸಕರಾದ ನಾರಪ್ಪ ಬಿ.ಎನ್. ಪ್ರಭುದೇವ, ಮಾ. ಮುನಿರಾಜು, ಸತ್ಯನಾರಾಯಣ, ರುಮಾಲೆ ನಾಗರಾಜು, ಡಾ. ವೆಂಕಟರೆಡ್ಡಿ, ಡಿ.ವಿ. ಅಶ್ವಥಪ್ಪ ಮುಂತಾದವರು ಇಲ್ಲಿನ ಚಳವಳಿಯ ನೇತೃತ್ವವಹಿಸಿದ್ದರು.

೨. ಶಿವಮೊಗ್ಗದಲ್ಲಿ ನಡೆದ ಬಹಿರಂಗ ಸಭೆ

ಅಭಿಮಾನಿಗಳ ಪ್ರೀತಿ ವಿಶ್ವಾಸದ ನಡುವೆ ರಾಜ್‌ಕುಮಾರ್ ಅವರು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಗಳಿಗೆ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿಗೆ ರಾಜಕುಮಾರ್ ಅವರು ಬಂದು ತಲುಪಿದಾಗ ರಾತ್ರಿಯೇ ಆಗಿತ್ತು. ರಾಜ್‌ಕುಮಾರ್ ಅವರು ಬರುವಿಕೆಗೆ ಕಾದುಕುಳಿತ್ತಿದ್ದ ಜನಸಮೂಹ ಉತ್ಸಾಹದಿಂದ ಕೂಡಿತ್ತು. ಕ್ರೀಡಾಂಗಣದಲ್ಲಿ ಸೂಜಿ ಊರಲು ಸ್ಥಳವಿಲ್ಲದಂತೆ ಸುಮಾರು ಐವತ್ತು ಸಾವಿರ ಜನ ಸೇರಿದ್ದರು. ರಾಜ್‌ಕುಮಾರ್ ಅವರು ಮಾತನಾಡುತ್ತಾ ಜನ ಪ್ರತಿನಿಧಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬರಬೇಕೆಂದು ಆಗ್ರಹಿಸಿದರು. ಈ ಹೋರಾಟದ ಮೂಲಕ ಸರಕಾರದ ಬಲ ದೊಡ್ಡದೋ, ಜನಶಕ್ತಿಯ ಬಲ ದೊಡ್ಡದೋ ಎಂಬುದನ್ನು ಸಾಬೀತು ಮಾಡೋಣ, ಕನ್ನಡದ ರಕ್ತ ನಮ್ಮ ದೇಹದಲ್ಲಿ ಹರಿಯುತ್ತಿದೆ, ತಾಯಿಯ ಋಣ ತೀರಿಸುವ ಸಂದರ್ಭ ಬಂದಿರುವ ಈ ಸಮಯದಲ್ಲಿ ಕನ್ನಡಿಗರು ಸುಮ್ಮನಿರ ಬಾರದೆಂದು ಸಹ ಅಭಿಪ್ರಾಯ ಪಟ್ಟರು. ಇದಕ್ಕೂ ಮುನ್ನ ನಾಡಿನ ಹಿರಿಯ ಸಾಹಿತಿಗಳಾದ ಚಂದ್ರಶೇಖರ ಪಾಟೀಲ, ಪಾಟೀಲಪುಟ್ಟಪ್ಪ ಅಶೋಕ್, ನಾಗ್ ಸಹೋದರರು ಮುಂತಾದವರು ಮಾತನಾಡಿದ್ದರು, ರಾಜ್‌ಕುಮಾರ್ ಅವರು ವೇದಿಕೆಯಿಂದ ಕೆಳಗಿಳಿಯುತ್ತಿದ್ದಂತೆಯೇ ಅಭಿಮಾನಿಗಳು ಅವರನ್ನು ಅಭಿಮಾನದಿಂದ ಮುತ್ತಿ ದರ್ಶನ ಪಡೆಯುತ್ತಿದುದು ಸಾಮಾನ್ಯವಾಗಿ ಕಂಡುಬಂದಿತು. ಆದಿನ ರಾತ್ರಿ ರಾಜ್‌ಕುಮಾರ್ ಅವರು ಶಿವಮೊಗ್ಗದಲ್ಲಿಯೇ ತಂಗಿದ್ದರು.

೩. ಕಬ್ಬಿಣದ ಬೀಡು ಭದ್ರಾವತಿಯಲ್ಲಿ ಡಾ.ರಾಜ್‌ಕುಮಾರ್

ರಾಜ್‌ಕುಮಾರ್ ಅವರು ಭದ್ರಾವತಿಗೆ ಆಗಮಿಸುವ ವೇಳೆಗಾಗಲೇ ಕನ್ನಡ ಕ್ರಿಯಾ ಸಮಿತಿ, ಕನ್ನಡಪರ ಸಂಘಟನೆಗಳು ಸಭೆಯನ್ನು ವ್ಯವಸ್ಥಿತವಾಗಿ ಸಂಘಟಿಸದವು. ಸರಕಾರಿ ಕಾಲೇಜು ಮೈದಾನದಲ್ಲಿ ಇಡೀ ಊರು ಊರೇ ನೆರೆದಿತ್ತು. ಶಾಲಾ ಕಾಲೇಜುಗಳು ಸ್ವಯಂ ಪ್ರೇರಿತರಾಗಿ ರಜೆಘೋಷಿಸಿದ್ದವು. ಕಣ್ಣಳತೆಗೂ ನಿಲುಕಲಾರದಷ್ಟು ಜನ ಸಮೂಹದಿಂದ ಕಾರ್ಯಕ್ರಮಕ್ಕೆ ತೊಂದರೆಗಳಾಗದಂತೆ ಕೆಲಸ ನಿರ್ವಹಿಸುವುದು ಪೋಲಿಸ್ ಸಿಬ್ಬಂದಿಗಳಿಗೆ ಕಷ್ಟ ಸಾಧ್ಯವಾಗುತ್ತಿತ್ತು. ಅಕ್ಕ ಪಕ್ಕದ ಊರುಗಳಿಂದ ಎತ್ತಿನಗಾಡಿಗಳ ಮೂಲಕ ಆಗಮಿಸಿದ್ಧ ಜನತೆ ಒಮ್ಮೆ ರಾಜ್‌ಕುಮಾರ್ ಅವರನ್ನು ನೋಡಿದರೆ ಸಾಕೆಂದು ಅವರ ಮಾತನ್ನು ಆಲಿಸಿದರೆ ಸಾಕೆಂದು ಮಾತುಗಳು ಕೇಳಿಬರುತ್ತಿದ್ದವು.

ವೇದಿಕೆಯ ಮೇಲೆ ರಾಜ್‌ಕುಮಾರ್ ಅವರು ಆಕರ್ಷಣೀಯ ವ್ಯಕ್ತಿಯಾಗಿ ಕಂಡುಬಂದರು. ಅಷ್ಟೇ ವ್ಯವಸ್ಥಿತವಾಗಿ ಚೊಕ್ಕವಾಗಿ ಮಾತನಾಡಿದರು. "ಇಲ್ಲಿನ ಕಬ್ಬಿಣ ಗಟ್ಟಿಮುಟ್ಟಾಗಿರುವಂತೆ ನಿಮ್ಮಗಳ ಮನಸ್ಸು ಹಾಗೂ ಕನ್ನಡಭಿಮಾನ ಗಟ್ಟಿಮುಟ್ಟಾಗಿರಬೇಕೆಂದು ವಿನಂತಿಸಿಕೊಂಡರು. ಗೋಕಾಕ್ ವರದಿಯ ಬಗ್ಗೆ ನನಗೇನು

ರಾಜ್‌ಕುಮಾರ್ ಅವರನ್ನು ಕಾಡತೊಡಗಿತು.''[೧೯] ರಾಜ್‌ಕುಮಾರ್ ಅವರು ವೇದಿಕೆಗೆ ಬಂದಕೂಡಲೇ ಕಾದುಕುಳಿತ್ತಿದ್ದ ಸಾವಿರ ಸಾವಿರ ಅಭಿಮಾನಿಗಳ ಮೊಗದಲ್ಲಿ ಉಲ್ಲಾಸ ಮೂಡುವಂತಾಯಿತು. ಆ ಸಮಯದಲ್ಲಿ ಜನತೆ ತೋರಿದ ಪ್ರೀತಿ ಅಧಾರಗಳಿಂದ ದೇವರು ಅಂತ ಇದ್ದರೆ ಪ್ರತಿಜನ್ಮದಲ್ಲಿಯೂ ಕನ್ನಡಿಗನಾಗಿಯೇ ಹುಟ್ಟಬೇಕೆಂದು ಭಾವಿಸಿಕೊಂಡರಂತೆ.[೨೦] ಈಗಾಗಲೇ ಸಮಯ ಮೀರಿದ್ದರಿಂದ ಕಾರ್ಯಕ್ರಮವನ್ನು ಬೇಗ ಅಂತ್ಯಗೊಳಿಸಲು ಎಲ್ಲಾ ಸಾಹಿತಿಗಳು ಚಿಕ್ಕದಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ರಾಜಕುಮಾರ್ ಅವರು ಸಹ ತಮ್ಮ ಚಿಕ್ಕದಾದ ಹಾಗೂ ಚೊಕ್ಕದಾದ ಭಾಷಣದ ಮೂಲಕ ಚಳವಳಿಯ ಸ್ವರೂಪವನ್ನು ವಿವರಿಸಿದರು.

೬. ಜಾಥಾದಲ್ಲಿ ರಾಜ್‌ಕುಮಾರ್ ಅವರಿಗೆ ಪಾರ್ವತಮ್ಮನವರ ಬೆಂಬಲ

ರಾಜ್‌ಕುಮಾರ್ ಅವರು ಈ ಚಳವಳಿಯು ಮುಖ್ಯ ಭಾಗವಾದಂತೆ ಪತ್ನಿ ಪಾರ್ವತಮ್ಮನವರು ರಾಜ್‌ಕುಮಾರ್ ಅವರ ಜೊತೆಯಲ್ಲಿ ಪ್ರಾರಂಭದಿಂದ ಅಂತ್ಯದವರೆಗೂ ತಮ್ಮನ್ನು ಚಳವಳಿಯಲ್ಲಿ ತೊಡಗಿಸಿಕೊಂಡರು. ರಾಜ್‌ಕುಮಾರ್ ಜೊತೆಯಲ್ಲಿ ಪ್ರತಿಯೊಂದು ವೇದಿಕೆಯಲ್ಲಿ ಕಾಣಿಸಿಕೊಂಡು, ತಮ್ಮ ಕನ್ನಡದ ಬದ್ಧತೆಯನ್ನು ಎತ್ತಿಹಿಡಿದರು. ಚಳವಳಿಯಲ್ಲಿ ಬೇರೆ ಯಾವ ಕ್ಷೇತ್ರದ ಮಹಿಳೆಯರು ತೊಡಗಿಕೊಳ್ಳದಷ್ಟು ಪ್ರಮಾಣದಲ್ಲಿ ತೊಡಗಿಕೊಂಡು ರಾಜ್‌ಕುಮಾರ್ ಅವರಿಗೆ ಎಲ್ಲಾ ರೀತಿಯಿಂದಲೂ ಸಲಹೆ ಸೂಚನೆಗಳನ್ನು ನೀಡುತ್ತಾ ಮುನ್ನಡೆದರು.

ಇವರನ್ನು ಚಳವಳಿಯ ಸಮಯದಲ್ಲಿ ರಾಜ್‌ಕುಮಾರ್ ಅವರ ಪತ್ನಿಯಂತೆ ಕಾಣದೆ ಒಬ್ಬ ಕನ್ನಡತಿಯಂತೆ ಇಡೀ ರಾಜ್ಯವೇ ಕಾಣುವಂತಾಯಿತು. ರಾಜ್‌ಕುಮಾರ್ ಅವರ ಕನ್ನಡದ ಬದ್ದತೆಯನ್ನು ಹೇಗೆ ಪ್ರಶ್ನಿಸಿಲು ಸಾಧ್ಯವಿಲ್ಲವೊ ಹಾಗೆಯೇ ಇವರನ್ನು ಪ್ರಶ್ನಿಸಲು ಸಾಧ್ಯವಿಲ್ಲ. ಚಳವಳಿಯ ಮೂಲಕ ನಾಡುನುಡಿಯ ಏಳಿಗೆಗಾಗಿ ಮುಂದಾಗಿ ಹೋರಾಟದ ಪ್ರೇರಕ ಶಕ್ತಿಯಂತೆ ಕೆಲಸ ನಿರ್ವಹಿಸಿದರು. ರಾಜ್‌ಕುಮಾರರಂತೆ ನಾಡಿನ ಪವಿತ್ರ ಸೇವೆಗೆ ಪತಿಯಂತೆ ತೊಡಗಿಸಿಕೊಂಡು ನಾಡಿನ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡರು. ಮೇರು ವ್ಯಕ್ತಿತ್ವದ ಜನಪ್ರಿಯ ಪತಿಗೆ ದಕ್ಷಸತಿಯಾಗಿಯೂ ಅಲ್ಲದೆ ಕನ್ನಡದ ಮಹಿಳೆಯಾಗಿ ಕಾಣಿಸಿಕೊಂಡರು.

ರಾಜ್‌ಕುಮಾರ್ ಅವರ ಸಾಧನೆಯ ಹಿಂದೆ ಪಾರ್ವತಮ್ಮನವರ ಶ್ರಮ ಸಾಧನೆಯ ನೆರಳಿದೆ. ಎಂದರೆ ತಪ್ಪಾಗಲಾರದು.ಚಳವಳಿಯಲ್ಲಿ ರಾಜ್‌ಕುಮಾರ್ ಅವರು ಹೋದಕಡೆ ಬಂದಕಡೆ ನಿಕಟವಾಗಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದವರು ಇವರೆ. ಅಲ್ಲದೆ ಅವರ ಸೇವಕಿಯಗಿ, ಸಲಹೆಗಾರ್ತಿಯಾಗಿ, ಕಾಣಿಸಿಕೊಂಡರು. ಈ ಸಮಯದಲ್ಲಿ ರಾಜ್‌ಕುಮಾರ್ ಅವರಿಗೆ ಕಂಡುಬಂದ ಜನಬೆಂಬಲವನ್ನು ಗಮನಿಸಿದ ಇವರು ಮುಂದಿನ ದಿನಗಳಲ್ಲಿ ರಾಜ್‌ಕುಮಾರ್ ಅವರ ವ್ಯಕ್ತಿತ್ವವನ್ನು ಉನ್ನತ ಮಟ್ಟಕ್ಕೇರಿಸಲು ಶ್ರಮಿಸಿದರು.

ಚಳವಳಿಯ ಸಮಯದಲ್ಲಿರಾಜ್‌ಕುಮಾರ್ ಅವರಿಗೆ ದೊರೆಯುತ್ತಿದ್ದ ಎಲ್ಲಾ ರೀತಿಯ ಗೌರವ, ಆತಿಥ್ಯಗಳು ಇವರಿಗೂ ಸಲ್ಲುತ್ತಿದ್ದವು. ಇದರಿಂದಾಗಿ ತಾನು ಒಬ್ಬ ಈ ಮಣ್ಣನ್ನು ಪ್ರತಿನಿಧಿಸುವ ವೀರ ಮಹಿಳೆಯಾಗಿ ಕಾಣಿಸಿಕೊಂಡರು. ರಾಜ್‌ಕುಮಾರರನ್ನು ಚಳವಳಿಗೆ ಕರೆತರಲು ಸಾಹಿತಿ ಕಲಾವಿದರು ವಜ್ರೇಶ್ವರಿ ಕಂಬೈನ್ಸ್ ಕಛೇರಿಯಲ್ಲಿ ಬೇಟಿಯಾದ ಸಂದರ್ಭದಲ್ಲಿ ಪಾರ್ವತಮ್ಮನವರು ಹೇಳಿದ್ದೇನೆಂದರೆ ''ರಾಜ್‌ಕುಮಾರ್ ಅವರು ಕನ್ನಡದ ಕೆಲಸಕ್ಕಾಗಿ ಯಾವಾಗ ಎಲ್ಲಿಗೆ ಬೇಕಾದರೂ ಬರುತ್ತಾರೆ. ಅಂತಿಮ ಜಯ ಕನ್ನಡಿಗರದ್ದಾಗಬೇಕು.'' ಎನ್ನುವ ಮಾತಿನಿಂದ ಆರಂಭವಾದ ಸಮಯದಲ್ಲಿ ಅಭಿಮಾನಿಗಳು ತೋರುತ್ತಿದ್ದ ಪ್ರೀತಿ ವಿಶ್ವಾಸ ಗೌರವಗಳನ್ನು

ಕಂಡು ಪಾರ್ವತಮ್ಮನವರು ಮೂಕವಿಸ್ಮಿತರಾಗಿದ್ದರು. ಆ ಗೌರವ ಪ್ರೀತಿ ವಿಶ್ವಾಸಗಳೇ ಇಂದಿನವರೆಗೂ ಅವರನ್ನು ಕರೆತಂದಿವೆ.

ಚಳವಳಿಯಲ್ಲಿ ಆಗಾಗ, ಅಲ್ಲಲ್ಲಿ ಚಲನಚಿತ್ರ ಕ್ಷೇತ್ರದ ಮಹಿಳೆಯರು, ನಟಿಯರು ಕಾಣಿಸಿಕೊಂಡಿದ್ದುಂಟು, ಆದರೆ ಈ ಸಾಲಿನಲ್ಲಿ ಪಾರ್ವತಮ್ಮನವರು ಹಾಗೂ ಗಿರಿಜಾ ಲೋಕೇಶ್ ಅವರು ಭಿನ್ನವಾಗಿ ಕಾಣಿಸುತ್ತಾರೆ. ಅವರ ಕನ್ನಡದ ಬಗೆಗಿನ ಅನನ್ಯತೆ, ಬದ್ಧತೆಯನ್ನು ಪ್ರಶ್ನಿಸಲಾಗದು. ತಾವೆಂದು ಧ್ವನಿವರ್ಧಕದ ಮೂಲಕ ಮಾತನಾಡದೇ ಇದ್ದ ಇವರು ಅಭಿಮಾನಿಗಳಲ್ಲಿ ಕನ್ನಡ ಪ್ರಜ್ಞೆಮೂಡಿಸುವಲ್ಲಿ ಶ್ರಮಿಸಿದರು.

೭. ಜಾಥಾದಲ್ಲಿ ರಾಜ್‌ಕುಮಾರ್ ಅವರ ದಿನಚರಿ

ರಾಜ್‌ಕುಮಾರ್ ಅವರ ಎರಡು ಹಂತದ ರಾಜ್ಯಪ್ರವಾಸದ ಜಾಥಾ ಕಾರ್ಯಕ್ರಮವು ವಿಶಿಷ್ಟ ಹಂದರಗಳಿಂದ ಕೂಡಿ ರಾಜ್‌ಕುಮಾರ್ ಅವರ ವ್ಯಕ್ತಿತ್ವಕ್ಕೆ ಹೊಸ ಮೆರುಗನ್ನು ತಂದೊಡ್ಡಿತು. ಇವರ ಹಾವ, ಭಾವ, ಮಾತು, ನೋಟ, ಸ್ಪರ್ಶಗಳ ಮಾಂತ್ರಿಕತೆಯಿಂದಾಗಿ ಜನತೆಯಲ್ಲಿ ಹೊಸ ಸ್ಫೂರ್ತಿ ಮೂಡುವಂತಾಯಿತು. ರಾಜ್‌ಕುಮಾರ್ ಅವರು ಎಲ್ಲಿಗೆ ಹೋದರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಜಾಥಾನ ಉದ್ದಕ್ಕೂ ತುಂಬಿರುತ್ತಿದ್ದರು. ಎಷ್ಟೋಬಾರಿ ರಾಜ್‌ಕುಮಾರ್ ಅವರು ಬೃಹತ್ ಜನಸ್ತೋಮವನ್ನು ನೋಡಿ ವಿಸ್ಮಯ ಗೊಂಡಿರುವುದುಂಟು.

"ನನ್ನ ವಿದ್ಯಾರ್ಥಿ ಜೀವನದೆಸೆಯಿಂದಲೂ ಸಾರ್ವಜನಿಕರೊಂದಿಗೆ ಬೆಳೆದಿದ್ದೇನೆ, ನೆಹರು ಅವರು ಕರ್ನಾಟಕದಲ್ಲಿ ಸಂಚರಿಸಿದ್ದ ಕಾಲಕ್ಕೆ ಅವರನ್ನು ಕಾಣಲು ಜನ ಸೇರುತ್ತಿದುದ್ದನ್ನು ನಾನು ಗಮನಿಸಿದ್ದೇನೆ, ಆಗ ನಾನುಕಂಡ ಜನಸಂದಣಿಗೂ, ರಾಜಕುಮಾರರನ್ನು ಕಾಣಲು ಬರುತ್ತಿದ್ದ ಜನಸಂದಣಿಗೂ ಎಲ್ಲಿಯೂ ಹೋಲಿಕೆ ಇಲ್ಲ. ಇದರಲ್ಲಿ ರಾಜ್‌ಕುಮಾರ್ ಅವರು ಅವರಿಗಾಗಿ ಸೇರುತ್ತಿದ್ದ ಜನಸಂದಣಿಯೇ ಅಧಿಕ" ಎಂದು ಪಾಟೀಲ ಪುಟ್ಟಪ್ಪನವರು ಅಭಿಪ್ರಾಯ ಪಡುತ್ತಾರೆ. ರಾಜ್‌ಕುಮಾರ್ ಅವರು ಜನತೆಯನ್ನು ಆಕರ್ಷಿಸುವ ವ್ಯಕ್ತಿತ್ವ ಭಾರತದ ಯಾವ ರಾಜಕಾರಣಿಯಲ್ಲಿಯೂ ಕಾಣಲು ಸಾಧ್ಯವಿಲ್ಲ. ಇವರಿಗೆ ಆಂದ್ರಪ್ರದೇಶದ ಎನ್.ಟಿ.ಆರ್ ಇಲ್ಲವೆ ತಮಿಳುನಾಡಿನ ಎಂ.ಜಿ.ಆರ್ ಅವರು ಮಾತ್ರವೇ ಸರಿಸಾಟಿಯಾಗಬಲ್ಲರು.[೨೧] ಜಾಥಾದಲ್ಲಿ ಚಿತ್ರನಟರಾದ ಅಶೋಕ್, ಲೋಕೇಶ್ ಅವರು ರಾಜ್‌ಕುಮಾರ್ ಅವರಿಗೆ ಎಡಗೈ ಬಲಗೈನಂತೆ ಇದ್ದವರು, ಕೆಲವು ಸಂಕುಚಿತ ವ್ಯಕ್ತಿಗಳು ಹಾಗೂ ಪತ್ರಿಕೆಗಳು ರಾಜ್‌ಕುಮಾರ್ ಅವರಿಗೆ ಚಳವಳಿಯ ಬಗ್ಗೆ ಏನು ಮಾಹಿತಿ ಇಲ್ಲ, ಅವರೇನು ಮಾಡಬಲ್ಲರು ಎಂದು ಅಭಿಪ್ರಾಯ ಪಟ್ಟುದ್ದುಂಟು ಆದರೆ ಯಾವುದಕ್ಕೂ ತಲೆಕೆಡಿಸಿಕೊಳ್ಳದ ರಾಜ್‌ಕುಮಾರ್ ಅವರು ತಮ್ಮ ಪಾತ್ರ ಯಶಸ್ವಿಯಾಗಿ ನಿರ್ವಹಿಸಿದರು.

ರಾಜ್‌ಕುಮಾರ್ ಅವರಿಗೆ ಜಾಥಾ ಸಮಯದಲ್ಲಿ ದಿನದ ೨೪ ಘಂಟೆಗಳಿಗೆ ಬದಲಾಗಿ ೪೮ ಘಂಟೆಗಳಿದ್ದರೂ ಆ ದಿನ ಅವರಿಗೆ ಚಿಕ್ಕದೆನಿಸುತ್ತಿತ್ತು. ಈ ಸಮಯದಲ್ಲಿ ಅವರ ಮುಖ ಮುದುಡಿದ್ದನ್ನು, ಮಂದಹಾಸ ಬಾಡಿದ್ದನ್ನು ಕಂಡವರಿಲ್ಲ. ದಣಿವೆಂಬುದು ಹತ್ತಿರವೇ ಸುಳಿಯಲಿಲ್ಲ. ನಾನು ಏನು ಪುಣ್ಯ ಮಾಡಿರುವೆನೋ ಇಂತಹ ಜನತೆಯ ನಡುವೆ ಬೆಳೆದು ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದೇನೆ, ಪುನರ್ಜನ್ಮ ಎನ್ನುವುದು ಇದ್ದರೆ ಈ ಕನ್ನಡ ಜನತೆಯ ಮಧ್ಯೆ ಮತ್ತೆ ಜನ್ಮವೆತ್ತಬೇಕು ಎನ್ನುವ ರಾಜ್‌ಕುಮಾರ ಅವರ ಮಾತನ್ನು ಪಾಟೀಲ ಪುಟ್ಟಪ್ಪನವರು ನೆನಪಿಸಿಕೊಳ್ಳುತ್ತಾರೆ. ಗೋಕಾಕ್ ವರದಿಯ ಬಗ್ಗೆ ಪತ್ರಿಕೆಗಳವರು ಪ್ರಶ್ನಿಸಿದರೆ "ವರದಿಯ ಬಗ್ಗೆ ನನಗೇನು ಹೆಚ್ಚಿಗೆ ತಿಳಿಯದು, ಸಾಹಿತಿ ಕಲಾವಿದರಷ್ಟು ತಿಳುವಳಿಕೆ ನನಗಿಲ್ಲ, ಆದರೆ ಕನ್ನಡ ಭಾಷೆಗೆ ಪ್ರೌಢಶಿಕ್ಷಣದಲ್ಲಿ

ತೊಂದರೆಯುಂಟಾಗಿದೆ ಎಂಬುದು ಮಾತ್ರ ಗೊತ್ತು, ಅದರ ನಿವಾರಣೆಗಾಗಿ ಎಲ್ಲಾರಲ್ಲಿ ಒಬ್ಬನಾಗಿ ಬಂದಿದ್ದೇನೆ'', ಎನ್ನುವಂತಹ ಅವರ ಮಾತಿನಲ್ಲಿ ಸಹಜತೆ, ಮುಗ್ದತೆ ಮತ್ತು ಪ್ರಾಮಾಣಿಕತೆ ಇರುತ್ತಿತ್ತು.

ಚಳವಳಿಯಲ್ಲಿ ರಾಜ್‌ಕುಮಾರ್ ಅವರು ಯಾವತ್ತೂ ಜಾತಿ,ಧರ್ಮ, ಸಂಕುಚಿತ ಮನೆಭಾವನೆಗೆ ಸಿಲುಕಲಿಲ್ಲ. ಕೋಮುಭಾವನೆ ಮೂಡಿಸುವಂತಹ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡಲಿಲ್ಲ. ''ಚಳವಳಿಯಲ್ಲಿ ಜಾತ್ಯಾತೀತ ಜನತಾದಳದಿಂದ ವಕ್ಕಲಿಗರ ಸಮಾವೇಶ ಎನ್ನುವ ಹಾಗೆ ಜಾತಿವಾದಿಗಳ ಪ್ರಭಾವ ಅಧಿಕವಾಗಿತ್ತು. ಕೆಲವು ಸಂದರ್ಭದಲ್ಲಿ ಕೆಲವು ಸಾಹಿತಿಗಳು ಚಳವಳಿ ನಾವು ಆಶಿಸಿದಂತೆಯೇ ನಡೆಯಬೇಕು, ನಮಗೆಲ್ಲ ತಿಳಿದಿದೆ, ಎನ್ನುವಂತಹ ಕ್ರಿಯೆಗಳನ್ನು ತೋರಿಸಿದರು.''[೨೨] ಕೆಲವರು ಇದರಲ್ಲಿ ಪಕ್ಕಾ ಜಾತಿವಾದಿಗಳಾಗಿದ್ದರು ಇವರಿಗೆ ಜಾತಿ ಮುಖ್ಯವಾಯಿತೆ ಹೊರತು ಕನ್ನಡ ಭಾಷೆಯಲ್ಲಿ ಜಾತಿಯಿಲ್ಲದೆ ನಾವಿಲ್ಲ ಎನ್ನುವಂತಹ ಸಾಹಿತಿಗಳೆ ಅಧಿಕವಾಗಿದ್ದರು. ರಾಜ್‌ಕುಮಾರ್ ಅವರು ಇದ್ಯಾವುದಕ್ಕೆ ತಲೆಕೆಡಿಸಿ ಕೊಳ್ಳದೆ ತಮ್ಮ ಗುರಿ ಮತ್ತು ಗಮನಹರಿಸಿದರು.

ರಾಜ್‌ಕುಮಾರ್ ಅವರು ಬರುವಿಕೆಗೆ ಜನತೆ ಹಗಲು ರಾತ್ರಿ ಎನ್ನದೆ ಕಾಯುತ್ತಿದ್ದರು. ಎಲ್ಲಾ ಬಹಿರಂಗ ಸಭೆಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಸ್ವಇಚ್ಛೆಯಿಂದ ಭಾಗವಹಿಸುತ್ತಿದ್ದುಂಟು ಕೆಲವು ಕಡೆ ರಾಜ್‌ಕುಮಾರ್ ಅವರನ್ನು ವೇದಿಕೆಗೆ ಕರೆತೆರುವುದು ಹಾಗೂ ಹಿಂದಕ್ಕೆ ಕರೆದೊಯ್ಯುವುದು ತುಂಬಾ ಅಸ್ತವ್ಯಸ್ತವಾಗಿಬಿಡುತ್ತಿತ್ತು. ಈ ಸಮಯದಲ್ಲಿ ಅವರು ಧರಿಸುತ್ತಿದ್ದ ಪಂಚೆ ಕಳಚಿಹೋದ ಪ್ರಸಂಗಗಳಿವೆ. ಕೆಲವುಕಡೆ ವೇದಿಕೆಗಳನ್ನು ಬಹಳ ಚಿಕ್ಕದಾಗಿ ವ್ಯವಸ್ಥೆಗೊಳಿಸಿದ್ದರಿಂದ ಲಾರಿಬಸ್ಸುಗಳ ಮೇಲೆ ನಿಂತು ಭಾಷಣಾ ಮಾಡಿದ ಉದಾಹರಣೆಗಳಿವೆ. ಅವರ ವಾಹನ ರಸ್ತೆಯ ಬದಿ ಹಾದು ಹೋದರೆ ಅಭಿಮಾನಿಗಳು ಅವರ ಅಂಗಿಯನ್ನು ಮುಟ್ಟಿನೋಡಬೇಕೆನ್ನುವವರು ಎಷ್ಟೋ ಮಂದಿ ಇದ್ದರು ''ರಸ್ತೆಯ ಎರಡು ಬದಿಗಳಲ್ಲಿ ನಿಂತಿರುತ್ತಿದ್ದ ಅಭಿಮಾನಿಗಳು ರಾಜ್‌ಕುಮಾರ್ ಅವರ ತೋಳುಗಳನ್ನು ಹಿಡಿದು ಎಳೆಯುತ್ತಿದ್ದವರು ಲೆಕ್ಕಕ್ಕೆಸಿಗಾಲಾರದು. ಅವರನ್ನು ತಬ್ಬಿಮುದ್ದಾಡುವವರೆಷ್ಟೋ, ಪಾದಗಳಿಗೆ ಎರಗುವವರು ಎಷ್ಟೋ, ಇದೆಲ್ಲವನ್ನು ಅವರು ಸಹಜತೆ ಮತ್ತು ಘನತೆಯಿಂದ ತೆಗೆದುಕೊಂಡು ತಮ್ಮ ಹೊಲಸಾದ ಅಂಗಿಯ ಬಗೆಗೆ ನೀಡುವ ವಿವರಣೆಯೆಂದರೆ ಈ ಅಂಗಿಯನ್ನು ಎಷ್ಟೊಂದು ಅಭಿಮಾನಿಗಲು ಪೂಜ್ಯಭಾವನೆಯಿಂದ ಮುಟ್ಟಿದ್ದಾರೆ, ಎಲ್ಲಾದಕ್ಕಿಂತ ಅವರ ಪ್ರೀತಿಯ ಶುಭ್ರತೆ ಹೆಚ್ಚಿನದು ಅಂಗಿ ಕೊಳೆ ಆದದ್ದು ದೊಡ್ಡದಲ್ಲ.''[೨೩]

ಸಾಮಾನ್ಯವಾಗಿ ರಾಜ್‌ಕುಮಾರ್ ಅವರು ವೇದಿಕೆ ಹತ್ತಬೇಕಾದರೆ ಅಥವಾ ಇಳಿಯುವಾಗ ಸಾಹಿತಿ ಕಲಾವಿದರಿಗೆ ಹಾಗೂ ಅಭಿಮಾನಿಗಳಿಗೆ ತಮ್ಮ ಎರಡು ಕೈಗಳನ್ನು ಮೇಲೆತ್ತಿ ವಂದಿಸುವುದು ರೂಡಿ, ಸಮಾರಂಭದ ಕೊನೆಗೆ ಅಭಿಮಾನಿಗಳ ಒತ್ತಾಯದ ಮೇರೆಗೆ 'ನಾನಿರುವುದೇ ನಿಮಗಾಗಿ' ಎನ್ನುವ ಗೀತೆಯನ್ನು ಹಾಡುವುದು ಅಭ್ಯಾಸ, ಈ ಗೀತೆ ಗೋಕಾಕ್ ಚಳವಳಿಯ ರಾಷ್ಟ್ರಗೀತೆಯಾಗಿಯೂ ಸಹ ಗುರುತಿಸಿಕೊಂಡಿತ್ತು.

ಇದು ನಮ್ಮ ಒಗ್ಗಟ್ಟಿನ ಹಾಗೂ ಭಾಷಿಕ ಹೋರಾಟ ಎಂಬುದಾಗಿ ಭಾವಿಸಿ, ಚಿತ್ರ ತಯಾರಿಕೆಯ ಪೂರ್ವ ನಿಯೋಜಿತ ಕಾರ್ಯವನ್ನು ರದ್ದುಮಾಡಿ ಚಳವಳಿಗೆ ಧುಮುಕಿದ್ದ ರಾಜ್‌ಕುಮಾರ್ ಅವರು ಮೊದಲು ಕನ್ನಡ ಭಾಷೆಗೆ ಬಂದಿರುವ ಗಂಡಾಂತರ ತೊಲಗಲಿ ಆನಂತರ ವೃತ್ತಿ ಇದ್ದೇ ಇದೆ ಎಂದು ಯಾವಾಗಲೂ ಪ್ರಸ್ತಾಪಿಸುತ್ತಿದ್ದರು. ವೇದಿಕೆಗಳ ಮೇಲೆ ಸಾಹಿತಿಗಳು, ಕಲಾವಿದರು, ಕವಿಗಳ ಮಾತುಗಳಲ್ಲಿ ಅಭಿಮಾನಿಗಳಿಗೆ ಆಸಕ್ತಿಯೂ ಇರಲಿಲ್ಲ. ಎಲ್ಲಾರದು ರಾಜ್‌ಕುಮಾರ್ ಅವರ ಕಡೆ ಮಾತ್ರವೇ ಗಮನ.

ರಾಜ್‌ಕುಮಾರ್ ಅವರು ಉಡುಗೆ ತೊಡುಗೆಗಳಲ್ಲಿ ಆಡಂಬರ ಕಾಣಬರುತ್ತಿರಲಿಲ್ಲ. ಕೈನಲ್ಲಿ ಗಡಿಯಾರವಿರಲಿಲ್ಲ. ಹೊರಡುವ ಸಮಯ ಬಂದಿತೆಂದರೆ ಶ್ರೀಮತಿಯವರು ಸೂಚನೆ ಕೊಡುತ್ತಿದ್ದರು. ಅವಶ್ಯವಿದ್ದರೆ ಬೇಗ ಬೇಗ ಹೆಜ್ಜೆಹಾಗುತ್ತಿದ್ದರು. ಅವಶ್ಯಕವಿಲ್ಲದಿದ್ದರೆ ಗಂಭೀರವಾಗಿ ಹೆಜ್ಜೆಹಾಗುತ್ತಿದ್ದರು. ತನಗೆ ಗೊತ್ತಾಗದೇ ಇದ್ದ ವಿಷಯವನ್ನು ಚಂದ್ರಶೇಖರ ಪಾಟೀಲ, ಪಾಟೀಲ ಪುಟ್ಟಪ್ಪ, ಚಿದಾನಂದ ಮೂರ್ತಿ, ಅಶೋಕ್‌ರಂತಹ ಆತ್ಮೀಯರಲ್ಲಿ ಕೇಳಿ ತಿಳಿಯುತ್ತಿದ್ದರು. ಹೀಗೆ ತಿಳಿದು ಕೊಂಡ ವಿಷಯಗಳನ್ನು ವೇದಿಕೆಯ ಮೇಲೆ ಜನರಲ್ಲಿ ಮುಟ್ಟಿಸುತ್ತಿದ್ದರು. ನಂತರ ತಾವು ಮಾತನಾಡಿದ ಮಾತುಗಳು ಸರಿ ಇದಯೋ ಇಲ್ಲವೊ ಎಂಬುದರ ಬಗ್ಗೆ ಚರ್ಚಿಸುತ್ತಿದ್ದರು. ಮಾತನಾಡಿದ ಮಾತುಗಳನ್ನಾಗಲಿ, ಇಟ್ಟ ಹೆಜ್ಜೆಯನ್ನಾಗಲಿ ಹಿಂದಕ್ಕೆ ಪಡೆಯುತ್ತಿರಲಿಲ್ಲ. ಯಾವುದೇ ಸಮಯದಲ್ಲಿ ಯಾರಿಗೂ ಬೇಸರವನ್ನುಂಟು ಮಾಡದೇ ಎಲ್ಲಾರೊಂದಿಗೆ ಸ್ನೇಹ ಮತ್ತುಗೌರವದಿಂದ ಬೆಳೆಯುತ್ತಿದ್ದರು.

ತನಗೆ ಇದ್ದ ಜನಬೆಂಬಲವನ್ನು ಕಂಡು ಹಿಗ್ಗಲಿಲ್ಲ, ಕುಗ್ಗಲಿಲ್ಲ, ಆ ಬೆಂಬಲವನ್ನು ಎಂದಿಗೂ ತಮ್ಮ ಸ್ವಾರ್ಥಕ್ಕೆ ಬಳಸಿ ಕೊಂಡವರಲ್ಲ ಚಳವಳಿಯಲ್ಲಿ ತೊಡಗಿ ತಾನು ಒಬ್ಬ ಹೋರಾಟಗಾರನೆಂದು ಬಿಂಬಿಸಿಕೊಂಡರು. ರಾಜ್‌ಕುಮಾರ್ ಅವರು ಬರುವಾಗ ಪ್ರತ್ಯೇಕವಾದ ತಂಡದೊಂದಿಗೆ ಬರಲಿಲ್ಲ. ಎಂದಿಗೂ ಪ್ರತ್ಯೇಕತೆಯನ್ನು ಬಯಸಲಿಲ್ಲ. ಸಾಹಿತಿಗಳು ನನ್ನನ್ನು ಆಹ್ವಾನಸದೇ ಹೋಗದಿದ್ದರೇ ಈ ರಾಜ್‌ಕುಮಾರ್ ಅವರು ಜನರ ಮಧ್ಯೆ ಬರಲು ಸಾಧ್ಯವಾಗುತ್ತಿರಲಿಲ್ಲವೆಂದು ಭಾವಿಸಿಕೊಂಡಿದ್ದರು. ತಾನೊಬ್ಬ ಜನತೆಯ ಮಧ್ಯೆದಲ್ಲಿ ಜನಿಸಿದ ಜನನಾಯಕನೆಂದು ತೋರಿಸಲು ಹೆಚ್ಚು ಸಮಯ ಬೇಕಾಗಲಿಲ್ಲ. ಕೆಲವು ಜನನಾಯಕರು ದೊಡ್ಡಮನೆತೆನದಲ್ಲಿ, ಪಕ್ಷಗಳಲ್ಲಿ ಜನಿಸಿದರೆ ರಾಜ್‌ಕುಮಾರ್ ಅವರು ಮಾತ್ರ ಜನ ಸಾಮಾನ್ಯರ ಮಧ್ಯೆ ಜನನಾಯಕನಾಗಿ ಜನಿಸಿದರು.

ಚಳವಳಿಯಲ್ಲಿ ರಾಜ್‌ಕುಮಾರ್ ಅವರಿಗೆ ಎಲ್ಲಾಬಗೆಯ ಗೌರವ, ಮನ್ನಣೆ ದೊರೆಯುತ್ತಿದ್ದಂತೆಯೇ ಕೆಲವು ಸಾಹಿತಿಗಳು ತಮ್ಮ ಗೌರವ ಕಡಿಮೆಯಾಯಿತೆಂದು ಭಾವಿಸಿಕೊಂಡಿದ್ದುಂಟು,ಇಂಥ ಯಾವುದೇ ಅಸಮತೋಲನಕ್ಕೆ ರಾಜ್‌ಕುಮಾರ್ ಅವರು ಅವಕಾಶಮಾಡಿಕೊಡದೆ ಎಚ್ಚರವಹಿಸಿದರು.

ಈ ಸಮಯದಲ್ಲಿ ಸಾಹಿತಿಗಳು ಹೇಳುತ್ತಿದ್ದ ಮಾತುಗಳನ್ನು ಸಲಹೆಗಳನ್ನು ಬಹಳ ವಿನಯವಾಗಿ ಸ್ವೀಕರಿಸುತ್ತಿದ್ದರು. ರಾಜ್‌ಕುಮಾರ್ ಅವರಿಂದ ಸಾಹಿತಿಗಳಿಗೆ ಜನಸಾಮಾನ್ಯರಿಗೆ ಸಲ್ಲಬೇಕಾಗಿದ್ದ ಗೌರವಗಳು ಸಲ್ಲುತ್ತಿದ್ದವು. ರಾಜ್‌ಕುಮಾರ್ ಅವರು ಸದಾ ಶಿಸ್ತಿಗೆ ಹೆಚ್ಚು ಗಮನ ನೀಡುತ್ತಿದ್ದರು. ತಾವು ಮಾಡಬೇಕಾದ ಕೆಲಸ ಕಾರ್ಯಗಳನ್ನು ಶೀಘ್ರವಾಗಿ ಮಾಡಿಮುಗಿಸುತ್ತಿದ್ದರು. ಯಾರು ಏನೇ ಮಾತನಾಡಿದರೂ ತಲೆಗೆ ಹಚ್ಚಿಕೊಳ್ಳದ ರಾಜ್‌ಕುಮಾರ್ ಅವರು ಸದಾ ತನ್ನ ಗಮನವನ್ನು ತನ್ನ ಗುರಿಯಕಡೆಗೆ ಕೇಂದ್ರೀಕರಿಸಿದ್ದರು.

ಜಾಥಾ ಸಮಯದಲ್ಲಿ ಎಲ್ಲಾರೊಂದಿಗೂ ಕೂಡಿ ಸಹಭೋಜನ ಮಾಡುವ ಪರಿ ಬೆಳೆಸಿಕೊಂಡಿದ್ದರು. ಎಲ್ಲರು ಊಟ ಮಾಡಿದ ನಂತರವೇ ರಾಜ್‌ಕುಮಾರ್ ಅವರು ಊಟ ಸೇವಿಸುತ್ತಿದ್ದರು. ಕೆಲವುಕಡೆ ಊಟ ನೀರು ಇಲ್ಲದೆ ಅಭಿಮಾನಿಗಳು ನೀಡಿದ ಹಣ್ಣುಗಳನ್ನು ತಿಂದು ದಿನ ಕಳೆದಿರುವುದುಂಟು.

೫.೩. ನವೀಕರಿಸಿದ ಭಾಷಾ ಸೂತ್ರದ ಪ್ರಕಟಣೆ ಮತ್ತು ವಿಜಯೋತ್ಸವ

ರಾಜ್‌ಕುಮಾರ್ ಅವರ ವರದಿ ಜಾಥಾ ಕಾರ್ಯಕ್ರಮ ಅಂತ್ಯಗೊಂಡ ನಂತರ ಸರಕಾರ ವರದಿ ಅನುಷ್ಠಾನಕ್ಕಾಗಿ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೆ ವಿಳಂಬ ಧೋರಣೆ ಅನುಸರಿಸತೊಡಗಿತು. ನಂತರ

ಸಂಘ ಸಂಸ್ಥೆಗಳು ಸಾಹಿತಿ ಕಲಾವಿದರು, ಮತ್ತು ಜನ ಸಾಮಾನ್ಯರಿಂದ ಬಂದ ಒತ್ತಡದ ನಡುವೆ ಸರಕಾರ ವರದಿಯನ್ನು ಯಥಾವತ್ತಾಗಿ ಒಪ್ಪದಿದ್ದರೂ ಕನ್ನಡಕ್ಕೆ ಅಗ್ರಪಟ್ಟ ದೊರೆಯುವಂತಹ ಒಂದು ಸೂತ್ರವನ್ನು ಅನುಷ್ಠಾನಗೊಳಿಸಲು ಮುಂದಾಯಿತು. ಈ ಸಂಬಂಧವಾಗಿ ಸರಕಾರ ಜೂನ್ ೪ರಂದು ಸಾಹಿತಿ ಕಲಾವಿದರು ಮತ್ತು ಪ್ರಮುಖ ಹೋರಾಟಗಾರರನ್ನು ಮಾತುಕತೆಗೆ ಕರೆಯಿತು. ವಿಧಾನಸೌಧದ ಮೂರನೇ ಮಹಡಿಯಲ್ಲಿ ನಡೆದ ಈ ಸಭೆಯಲ್ಲಿ ರಾಜ್‌ಕುಮಾರ್, ಕುವೆಂಪು, ಶಿವರಾಮ ಕಾರಂತ, ಗೋರೂರು ರಾಮಸ್ವಾಮಿ ಐಯ್ಯಂಗಾರ್, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಮುಂತಾದ ನಲವತ್ತು ಗಣ್ಯರು ಭಾಗವಹಿಸಿದರು.

ಗೋಗಾಕ್ ವರದಿಯು ಸೂಚಿಸಿದ ಭಾಷಾ ಸೂತ್ರವನ್ನು ಸರಕಾರ ಪೂರ್ಣವಾಗಿ ಒಪ್ಪದಿದ್ದರೂ ಅಚೌಕಟ್ಟಿನಲ್ಲಿ ಅಲ್ಪಸ್ವಲ್ಪ ಮಾರ್ಪಾಡು ಮಾಡಿ ಸಾಹಿತಿ-ಕಲಾವಿದರ ಮುಂದಿರಿಸಿತು. ಈ ಭಾಷಾಸೂತ್ರವನ್ನು ಎಲ್ಲಾ ಹೋರಾಟಗಾರರು, ಸಾಹಿತಿ-ಕಲಾವಿದರು ಒಪ್ಪಿದ ನಂತರ ಸರಕಾರ ೨೦ ಜುಲೈ ೧೯೮೨ ರಂದು ನಂ:ಇಡಿ ೧೧೩ಎಸ್‌ಓಹೆಚ್‌೭೯ರ ಕ್ರಮಾಂಕದಲ್ಲಿ ಆಜ್ಞೆಯಗಿ ಹೊರಡಿಸಿತು. **"ಈ ಭಾಷಾಸೂತ್ರದ ಮುಖ್ಯಾಂಶವನ್ನು ಡಾ. ಸಿ.ಆರ್. ಗೋವಿಂದರಾಜು ಅವರ ಇತ್ತೀಚಿನ ಕೃತಿಯಾದ ಗೋಕಾಕ್ ವರದಿ ಸಾಹಿತ್ಯಪರಿಷತ್ತು ಪ್ರಕಟಣೆ ಮತ್ತು ಹುಚ್ಚಪ್ಪನವರ ಕೃತಿಯಾದ ಗೋಕಾಕ್ ವರದಿ ಅನುಷ್ಠಾನಕ್ಕಾಗಿ ನಡೆದ ಕನ್ನಡ ಚಳವಳಿ ಎನ್ನುವ ಕೃತಿಗಳನ್ನು ಪರಿಶೀಲಿಸಬಹುದು."**

ಜುಲೈ ೨೪ರಂದು (೧೯೮೨) ಸರಕಾರದಿಂದ ಪ್ರಕಟವಾದ ಗೋಕಾಕ್ ಭಾಷಾಸೂತ್ರವನ್ನು ಎಲ್ಲಾ ಗಣ್ಯಸಾಹಿತಿಗಳು ಜನಸಾಮಾನ್ಯರು, ಚಳವಳಿಗಾರು ತುಂಬು ಹೃದಯದಿಂದ ಸ್ವಾಗತಿಸಿದರು. ಸರಕಾರವು ಬಂದಿತ ಚಳವಳಿಗಾರರನ್ನು ಇದೇ ಸಮಯದಲ್ಲಿ ಬಿಡುಗಡೆ ಗೊಳಿಸುವ ಮತ್ತು ಮೊಕದ್ದಮ್ಮೆಗಳನ್ನು ಹಿಂದೆ ಪಡೆಯುವ ನಿರ್ಣಯಗಳನ್ನು ಪ್ರಕಟಿಸಿತು. ಈ ಭಾಷಾಸೂತ್ರವು ೧೨೫ + ೧೦೦ + ೫೦ ರ ಸ್ವರೂಪದಲ್ಲಿತ್ತು. ಅಂದರೆ ಇದರಲ್ಲಿ ಕನ್ನಡ ಭಾಷೆಗೆ ೧೨೫ ಅಂಕಗಳೆಂದು ನಿಗದಿಯಾಗಿ, ಕನ್ನಡ ಭಾಷೆ ಪ್ರೌಢಶಾಲಾ ಹಂತದಲ್ಲಿ ಪ್ರಥಮ ಸ್ಥಾನ ಪಡಿಯುವಂತಾಯಿತು. ದ್ವಿತೀಯ ಭಾಷೆಗೆ ೧೦೦ ಅಂಕಗಳೆಂದು ತೃತೀಯ ಭಾಷೆಗೆ ೫೦ ಅಂಕಗಳೆಂದು ನಿಗಧಿಮಾಡಲಾಗಿತ್ತು. ಈ ಭಾಷಾ ಸೂತ್ರದ ಪ್ರಕಟಣೆಯಿಂದಾಗಿ ಸುಮಾರು ನಾಲ್ಕು ತಿಂಗಳುಗಳ ಕಾಲ ನಡೆದ ಗೋಕಾಕ್ ಚಳವಳಿಯ ಕಾವು ಅಂತ್ಯವಾಗತೊಡಗಿತು. ಕನ್ನಡ ಭಾಷೆಯನ್ನು ಎರಡು ಹಂತದಲ್ಲಿ ಕಲಿಯಲು ಅವಕಾಶ ನೀಡಿರುವುದನ್ನು ಗಮನಿಸಿ ಎಲ್ಲಾರು ಸಂತಸಪಟ್ಟರು.

ಇದರ ಹಿನ್ನೆಲೆಯಾಗಿ ನಾಡಿಗೆ ನಾಡೇ ಸಂಭ್ರಮಿಸುವಾಗ ಅದರ ಹಿಂದೆ ರಾಜ್‌ಕುಮಾರ್ ಅವರ ಪಾತ್ರವನ್ನು ಮರೆಯುವಂತಿಲ್ಲ ಎನ್ನುವ ಸತ್ಯ ಚಳವಳಿಗಾರರಲ್ಲಿ ಮೂಡಿತು. ನಾಲ್ಕು ತಿಂಗಳಕಾಲ ನಡೆದ ಚಳವಳಿಯ ಪ್ರತಿಫಲವನ್ನು ವಿಜಯೋತ್ಸವದ ಮೂಲಕ ಆಚರಿಸಲು ಎಲ್ಲಾ ಗಣ್ಯ ಸಾಹಿತಿಗಳು ಮತ್ತು ಚಳವಳಿಗಾರರು ತೀರ್ಮಾನಿಸಿದರು. ಇದಕ್ಕೆ ಅನುಗುಣವಾಗಿ ಆಗಸ್ಟ್ ೧ನೇ ತಾರೀಖು ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ವಿಜಯೋತ್ಸವದ ಸವಿ ಸವಿಯಲು ಬೆಂಗಳೂರು ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಕಲ ಸಿದ್ಧತೆಗಳು ಏರ್ಪಾಡದವು. ಆಗಸ್ಟ್ ೧ನೇ ತಾರೀಖು ರಾಜ್‌ಕುಮಾರ್ ಅವರ ಭಾವಚಿತ್ರವನ್ನು ಹೊತ್ತುಕೊಂಡು, ಕನ್ನಡ ಧ್ವಜವನ್ನು ಸಿಕ್ಕಿಸಿಕೊಂಡು, ಹಸಿರು ತಳಿರು ತೋರಣಗಳಿಂದ ಅಲಂಕೃತವಾಗಿದ್ದ ಹತ್ತಾರು ವಾಹನಗಳು ನ್ಯಾಷನಲ್ ಕಾಲೇಜು ಮೈದಾನದಲ್ಲಿ ನೆರೆದಿದ್ದವು. ಈ ವಿಜಯೋತ್ಸವ ಕಾರ್ಯಕ್ರಮಕ್ಕೆ ಲಕ್ಷಾಂತರ ಅಭಿಮಾನಿಗಳು ರಾಜ್ಯದ ನಾನಾ ಭಾಗಗಳಿಂದ ಸೇರಿದ್ದರು. ಮದ್ಯಾಹ್ನ ೧೨ ಘಂಟೆಗೆ ರಾಜ್‌ಕುಮಾರ್ ಅವರ ಆಗಮನವಾಯಿತು. ಇವರ ಜೊತೆಯಲ್ಲಿ ಇಡೀ ಚಿತ್ರರಂಗದ ದಂಡು ನೆರೆದಿತ್ತು.

ರಾಜ್‌ಕುಮಾರ್ ಅವರಿಗೆ ಭವ್ಯವಾದ ಸ್ವಾಗತವನ್ನು ನೀಡಿದ ಜನತೆ ಹಾಗೂ ಚಳವಳಿಗಾರರು ಮುಗಿಲು ಮುಟ್ಟುವಂತೆ ಘೋಷಣೆಗಳನ್ನು ಕೂಗತೊಡಗಿದರು. ಈ ಹರ್ಷೋದ್ಗಾರದ ನಡುವೆ ನ್ಯಾಷನಲ್ ಕಾಲೇಜು ಮೈದಾನದಿಂದ ದೇಶಿಯ ವಿದ್ಯಾಶಾಲೆಯ ಮೈದಾನದವರೆಗೂ ಮೆರವಣಿಗೆ ಪ್ರಾರಂಭವಾಯಿತು. ಮೆರವಣಿಗೆ ಹೊರಡುವ ಮಾರ್ಗವನ್ನು ಸಂಪೂರ್ಣವಾಗಿ ಕನ್ನಡ ಭಾವುಟ ಮತ್ತು ಹಸಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಈ ಮೆರವಣಿಗೆಯಲ್ಲಿ ಸುಮಾರು ೩.ಕಿ.ಮೀ. ವರೆಗೆ ಜನಸಂದಣಿಯಿತ್ತೆಂದು ಚಂದ್ರಶೇಖರ ಪಾಟೀಲ ಅವರು ಅಭಿಪ್ರಾಯ ಪಡುತ್ತಾರೆ. ರಾಜ್‌ಕುಮಾರ್ ಮತ್ತು ಸಹಕಲಾವಿದರನ್ನೊತ್ತ ಲಾರಿ ಮೆರವಣಿಗೆಯ ಮೂಲಕ ಮಿನರ್ವ ವೃತ್ತದ ಬಳಿ ಬಂದಾಗ ಪೋಲಿಸ್‌ನವರು ಚಳವಳಿಗಾರರಿಗೆ ಮಾರ್ಗ ಬದಲಾವಣೆ ಸೂಚಿಸಿದರು. ಆದರೆ ಇದನ್ನು ಒಪ್ಪದ ಚಳವಳಿಗಾರರು ಮತ್ತು ಪೋಲಿಸ್ ನಡುವೆ ಗದ್ದಲ ಪ್ರಾರಂಭವಾಯಿತು. ಈ ಗದ್ದಲವನ್ನು ನಿಯಂತ್ರಿಸಲು ಪೋಲಿಸ್ ತನ್ನ ಕಾರ್ಯಚರಣೆಯನ್ನು ಪ್ರಾರಂಭಿಸತೊಡಗಿತು. ರಾಜ್‌ಕುಮಾರ್ ಈ ಸಮಯದಲ್ಲಿ ಉಭಯತ್ರಯರಲ್ಲಿ ಮಾಡಿದ ಮನವಿಗಳೆಲ್ಲವು ವಿಫಲವಾಗಿ, ಅಭಿಮಾನಿಗಳು ಪೋಲಿಸ್ ವ್ಯಾನ್‌ಗೆ ಬೆಂಕಿ ಹಚ್ಚತೊಡಗಿದರು. ಈ ನಡುವೆ ಸಾರ್ವಜನಿಕ ಆಸ್ತಿಪಾಸ್ತಿಗೆ ಅಪಾರ ಹಾನಿಯುಂಟಾಗ ತೊಡಗಿತು. ಪೋಲಿಸ್ ನವರು ಸಿಕ್ಕಸಿಕ್ಕವರನ್ನು ಬಂಧಿಸಿ ಮೊಕದ್ದಮ್ಮೆಗಳನ್ನು ಜಡಿಯ ತೊಡಗಿದರು. ಈ ಗದ್ದಲದಲ್ಲಿ ಪೋಲಿಸ್ ನವರು ನಡೆಸಿದ ಫೈರಿಂಗ್‌ನಲ್ಲಿ ಅರಸಪ್ಪ ಎನ್ನುವ ಯುವಕ ಮರಣ ಹೊಂದಿದ. ಈ ಘಟನೆ ನಗರಾದ್ಯಂತ ಹರಡಿ ಶೀಘ್ರದಲ್ಲಿಯೇ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾಯಿತು. ಮದ್ಯಾಹ್ನ ೩ ಘಂಟೆಯ ಹೊತ್ತಿಗೆ ಪರಿಸ್ಥಿತಿ ನಿಯಂತ್ರಣಕ್ಕೆ ಬರತೊಡಗಿತು. ಈ ವೇಳೆಗಾಗಳೇ ಆಗಲಾರದ ಅನಾಹುತ ನಡೆದು ಹೋಗಿತ್ತು. ನಂತರ ಮೆರವಣಿಗೆಯನ್ನು ನಡೆಸಿ ಸಭೆಯನ್ನು ಆಯೋಜಿಸ ತೊಡಗಿದರು. ಈ ವೇಳೆಗಾಗಲೇ ಲಕ್ಷಾಂತರ ಮಂದಿ ಇದ್ದ ಅಭಿಮಾನಿಗಳ ಸಂಖ್ಯೆ ಸಭೆ ಸೇರುವ ವೇಳೆಗೆ ಸಾವಿರಾರು ಮಂದಿಗೆ ಇಳಿದಿತ್ತು. ಈ ಸಭೆಯ ಮುಕ್ತಾಯವಾದ ನಂತರ ರಾಜ್‌ಕುಮಾರ್ ಸೇರಿದಂತೆ ಎಲ್ಲಿ ಪ್ರಜ್ಞಾವಂತರು ಈ ಘಟನೆಯನ್ನು ಖಂಡಿಸಿ ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಒಟ್ಟಾರೆಯಾಗಿ ಇದು ವಿಜಯೋತ್ಸವ ಆಗುವ ಬದಲು ಸಂತಾಪ ಸಭೆಯಾಗಿ ಪರಿವರ್ತನೆಯಾಯಿತು.

ಈ ಗೋಕಾಕ್ ವರದಿ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಂಡ ನಂತರ ಇಡೀ ನಾಡೇ ಸಂಭ್ರಮಪಟ್ಟಿತು. ಈ ಸಫಲತೆಯಲ್ಲಿ ರಾಜ್‌ಕುಮಾರ್ ಅವರಿಗೆ ಬೆಂಬಲವಾಗಿ ರಾಜ್ಯದ ನಾನಾ ತಾಲ್ಲೂಕು, ಜಿಲ್ಲಾ ಹೋಬಳಿ, ಕೇಂದ್ರಗಳು ನೇರವಾಗಿ ಸಹಕರಿಸಿದವು. ಇದರ ಸವಿಯನ್ನು ಸವಿಯಲು ನಾಡಿನ ಎಲ್ಲಾ ಭಾಗಗಳಲ್ಲಿ ಸಂಘಸಂಸ್ಥೆಗಳು, ಕ್ರಿಯಾಸಮಿತಿಗಳು ತಮ್ಮದೇ ಆದ ರೀತಿಯಲ್ಲಿ ಆಚರಿಸಿಕೊಂಡು ಸಂಭ್ರಮಿಸಿದವು.

ಟಿಪ್ಪಣಿಗಳು

೦೧. ಜಗನ್ನಾಥರಾವ್ ಬಹುಳೆ., (೨೦೦೬) ವರನಟ, ಪುಟ ೨೧೦.

೦೨. ಹುಚ್ಚಪ್ಪ., (೧೯೮೩) ಗೋಕಾಕ್ ವರದಿ ಅನುಷ್ಠಾನಕ್ಕಾಗಿ ನಡೆದ ಕನ್ನಡ ಚಳವಳಿ, ಪುಟ ೮೧,೮೨.

೦೩. ಕನ್ನಡ ಪ್ರಭ ೧೯.೫.೧೯೮೨ ಪುಟ ೬.

೦೪. ಕನ್ನಡ ಪ್ರಭ ೧೭.೫.೧೯೮೨ ಪುಟ.೩.

೦೫. ಕನ್ನಡ ಪ್ರಭ ದಿನಪತ್ರಿಕೆ ೧೮.೫.೧೯೮೨ ಪುಟ ೨.

೦೬. ಕನ್ನಡ ಪ್ರಭ ದಿನಪತ್ರಿಕೆ ಅದೇ ಪುಟ ೧

೦೭. ಕನ್ನಡ ಪ್ರಭ ಅದೇ ಪುಟ

೦೮. ಕನ್ನಡ ಪ್ರಭ ೧೯.೫.೧೯೮೨ ಪುಟ ೧

೦೯. ಹುಚ್ಚಪ್ಪ ಮೇಲಿನದೇ ಪುಟ ೧೬೨

೧೦. ಸಾ.ರಾ ಗೋವಿಂದು ಅವರ ಸಂದರ್ಶನದಲ್ಲಿ ವ್ಯಕ್ತವಾದ ವಿಚಾರ.

೧೧. ಕನ್ನಡ ಪ್ರಭ ೧೯.೫.೧೯೮೨ ಪುಟ ೫

೧೨. ಅದೇ ಪುಟ ೫

೧೩ ಗುರುಮೂರ್ತಿ., (೨೦೦೨) ರಂಗಭೂಮಿ ಮತ್ತು ಕನ್ನಡ ಚಿತ್ರರಂಗಕ್ಕೆ ಡಾ.ರಾಜ್‌ಕುಮಾರ್ ಅವರ ಕೊಡುಗೆ, ಪುಟ ೧೨೧.

೧೪. ಗೋವಿಂದನ ಹಳ್ಳಿ ದೇವೆಗೌಡ ಅವರ ಸಂದರ್ಶನದಲ್ಲಿ ವ್ಯಕ್ತವಾದ ವಿಚಾರ

೧೫. ಸಾ. ರಾ. ಗೋವಿಂದು ಅವರ ಸಂದರ್ಶನದಲ್ಲಿ ವ್ಯಕ್ತವಾದ ವಿಚಾರ.

೧೬. ಪ್ರಜಾವಾಣಿ, ದಿನಪತ್ರಿಕೆ, ೩.೭. ೧೯೮೨ ಪುಟ.೩.

೧೭. ಗುರುಮೂರ್ತಿ., ಮೇಲಿನದೆ

೧೮. ಸಾ.ರಾ. ಗೋವಿಂದು ಮೇಲಿನದೆ

೧೯. ಶಿವರಾಂ ಚಿತ್ರನಟರು, ಸಂದರ್ಶನದಲ್ಲಿ ವ್ಯಕ್ತವಾದ ವಿಚಾರ

೨೦. ಅಶೋಕ್ ಅವರು (ಚಲನಚಿತ್ರ ನಟರು), ಸಂದರ್ಶನದಲ್ಲಿ ವ್ಯಕ್ತಪಡಿಸಿದ ವಿಚಾರ.

೨೧. ಪಾಟೀಲ ಪುಟ್ಟಪ್ಪ.,(೨೦೦೨) ಗೋಕಾಕ್ ವರದಿ ಹೋರಾಟದ ಕಥೆ, ಪುಟ ೫೨

೨೨. ಅಶೋಕ್ ಮೇಲಿನದೆ

೨೩. ಪಾಟೀಲ ಪುಟ್ಟಪ್ಪ., (೧೯೯೨) ಉಸಿರಾಗಲಿ ಕನ್ನಡ, ಪುಟ. ೪೯.

ಅಧ್ಯಾಯ ಆರು

ಚಳವಳಿಯ ಸಫಲತೆ ಹಾಗೂ ಡಾ. ರಾಜ್‌ಕುಮಾರ್

ಅಧ್ಯಾಯ ಆರು

ಚಳವಳಿಯ ಸಫಲತೆ ಹಾಗೂ ಡಾ. ರಾಜ್‌ಕುಮಾರ್

ಕರ್ನಾಟಕದ ಏಕೀಕರಣದ ನಂತರ ಇಲಿನ ನೆಲ, ಜಲ, ಭಾಷೆಯ ರಕ್ಷಣೆಗಾರಿ ನಡೆದ ಎಲ್ಲಾರೀತಿಯ ಹೋರಾಟ, ಚಳವಳಿಗಳನ್ನೊಮ್ಮೆ ಹಿಂತಿರುಗಿ ನೋಡಿದರೆ ಶಿಖರದಂತೆ ಕಾಡುವುದು ೧೯೮೦ ರ ದಳಕದ ಗೋಕಾಕ್ ಮಾತ್ರ.

೧೯೮೨ ರಲ್ಲಿ ಗೋಕಾಕ್ ಭಾಷಾ ಸೂತ್ರದ ಅನುಷ್ಠಾನಕ್ಕೆ ನಡೆದ ಈ ಚಳವಳಿ ಕನ್ನಡದ ಜಾಗೃತಿ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ನಾಡುನುಡಿಯ ರಕ್ಷಣೆಗಾಗಿ ಅಭೂತ ಪೂರ್ವಕವಾದ ರೀತಿಯಲ್ಲಿ ಸಿಡೆದೆದ್ದು, ಆಡಗಿದ್ದ ಕನ್ನಡಾಭಿಮಾನವನ್ನು ಜ್ವಾಲಾಮುಖಿಯಂತೆ ಸ್ಫೋಟಿಸಿ ತೋರಿಸಿದ ಪ್ರಸಂಗವದು. ಇದರಿಂದ ಕನ್ನಡಿಗರಲ್ಲಿ ಒಂದಾಗ ರಾಜ್ಯದಲ್ಲಿ ಪ್ರಾದೇಶಿಕ ಭಾಷೆಯಬಗ್ಗೆ ಚಿಂತನೆ ನಡೆಸುವಂತಾಯಿತು. ನಾಡುನುಡಿಯ ವಿಚಾರದಲ್ಲಿ ನಾವೆಲ್ಲ ಒಂದು ಎನ್ನುವಂತಹ ಸಾರ್ವತ್ರಿಕ ಒಗ್ಗಟನ್ನು ಇದು ಪ್ರತಿಪಾದಿಸಿತು. ಇದಕ್ಕೆ ಪ್ರಮುಖ ಕಾರಣ ಡಾ. ರಾಜಕುಮಾರಂ ಅವರು ಚಳವಳಿಯ ಉದ್ದಕ್ಕೂ ವಹಿಸಿದ ಪಾತ್ರ ಮತ್ತು ಚಳವಳಿಯನ್ನು ಸಂಘಟಿಸದ ರೀತಿ ಎಂದರೆ ತಪ್ಪಾಗಲಾರದು.

ಡಾ. ರಾಜಕುಮಾರ್ ಅವರ ಸಿನಿಮಾ ಜೀವನದ ೧೯೮೦ ರ ದಶಕದಲ್ಲಿ ಹಲವು ಹತ್ತು ಮಹತ್ತರ ಘಟನೆಗಳು ಜಗುಗಿದವು. ಅವರ ಸಮಾಜಮುಖಿ ಧೋರಣೆ ಅನಾವರಣಗೊಂಡು ಮೇರು ಶಿಖರದತ್ತ ಬಳೆಯ ತೊಡಗಿದ ಕಾಲಘಟ್ಟ ಇದಾಗಿತ್ತು. ಗೋಕಾಕ್ ಚಳವಳಿಯ ಕಾಲಕ್ಕಾಗಲೇ ರಾಜ್‌ಕುಮಾರ್ ಅವರು ನಾಡಿನಾದ್ಯಂತ ಬೆಳ್ಳಿತೆರೆಯ ಮೂಲಕ ಮನೆಮಾತಾಗಿದ್ದರು. ಇವರು ಚಳವಳಿಯಲ್ಲಿ ಭಾಗವಹಿಸುವುದೇ ಈನಾಡಿನ ಹೆಮ್ಮೆಯ ಪ್ರತೀಕವಾಗಿದ್ದ ಸಮಯದಲ್ಲಿ ಚೌಕಾಸಿ ಮಾಡದೇ ಚಳವಳಿಯಲ್ಲಿ ಭಾಗವಹಿಸಿ, ಚಳವಳಿಯನ್ನು ಊಹಿಸಲಾಗದಷ್ಟು ಎತ್ತರಕ್ಕೆ ಕೊಂಡೊಯ್ದರು. ಇದರಿಂದಾಗಿ ಚಳವಳಿಯ ಸ್ವರೂಪ ರಾತ್ರೋರಾತ್ರಿ ಜನಸಾಮಾನ್ಯರ ಚಳವಳಿಯಾಗಿ ಪರಿವರ್ತಿತವಾಯಿತು. ಕೆಲವೊಂದು ಚಳವಳಿಗಳಿಗೆ ಕೆಲವರ ಪ್ರದೇಶದಿಂದಾಗಿ ಗಂಭೀರವಾದ ಪರಿಣಾಮಗಳುಂಟಾಗುತ್ತವೆ ಎನ್ನುವುದಕ್ಕೆ ರಾಜಕುಮಾರ್ ಅವರ ಪ್ರದೇಶವೇ ಸಾಕ್ಷಿ ಭೂತವಾಗಿ ನಮ್ಮ ಮುಂದೆ ನಿಲ್ಲುತ್ತದೆ. ರಾಜಕುಮಾರ್ ಅವರು ಚಲವಳಿಗೆ ಪಾದಾರ್ಪಣೆ ಮಾಡುವುದಕ್ಕೆ ಮುನ್ನ ಪ್ರತ್ಯೇಕವಾಗಿ ಗುರುತಿಸಿಕೊಂಡು ಚಳವಳಿ ಹೂಡುತ್ತಿದ್ದ ಅನೇಕ ಸಾಹಿತಿಕಲಾವಿದರು ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವ ತತ್ವಕ್ಕೆ ರಾಜಕುಮಾರ್ ಅವರು ಒಂದನಂತರ ಬದ್ಧರಾದರು. ಏಕೀಕರಣ ಚಳವಳಿಗಿಂತ ಹತ್ತುಪಟ್ಟು ಭಿನ್ನವಾಗಿದ್ದ ಈ

ಚಳವಳಿ ರಾಜಕುಮಾರ್ ಅವರ ಮುಬೇನೆ ಕನ್ನಡ ಪರ ಹೋರಾಟ ಚಿಂತನೆಗೆ ಹೊಸ ಶಕ್ತಿ, ಆಯಾಮ ನೀಡಿತು. ಅಲ್ಲದೆ ಕನ್ನಡಿಗರಲ್ಲಿ ನಾಡುನುಡಿಯ ಬಗ್ಗೆ ನವ ಜಾಗೃತಿಯನ್ನುಂಟು ಮಾಡಿತೆಂದು ಹೇಳಬಹುದು. ಕನ್ನಡ,ಕನ್ನಡಿಗ, ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳ ನಿವಾರಣಗೆ ಅಗತ್ಯವೆನಿಸಿದ ಶಿಸ್ತು, ಸಂಯಮ ಘನತೆ ಗಾಂಭೀರ್ಯಗಳನ್ನು ಹಂತಹಂತವಾಗ ರೂಪಿಸತೊಡಗಿತು.

ಕರ್ನಾಟಕ ಏಕೀಕರಣ ಚಳವಳಿಯ ಹಾಗೆಯೇ ಈ ಚಳವಳಿಗೆ ಆಗ್ರನಾಮಕರಾದವರು ಸಾಂಸ್ಕೃತಿಕ ಲೋಕದ ಮಂದಿಯೇ ಈ ಚಳವಳಿಗೆ ಸಾಂಸ್ಕೃತಿಕ ನಾಯಕತ್ವ ನೀಡಿದ ರಾಜಕುಮಾರ್ ಅವರಿಂದಾಗಿ ಚಳವಳಿಯು ಎಲ್ಲಿಯೂ ಹಾದಿ ತಪ್ಪಲಿಲ್ಲ. ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯಲಿಲ್ಲ.ಗೋಕಾಕ್ ವರದಿಯ ಅನುಷ್ಠಾನವನ್ನು ಗುರಿಯಾಗಿರಿಸಿಕೊಂಡ ಈ ಚಳವಳಿಯು ತನ್ನ ಸೀಮಿತ ಉದ್ದೇಶವನ್ನು ಮೀರಿ ಸಾಧಿದ್ದೆನೆಂದರೆ ಜನ ಸಮೂಹಕ್ಕೆ ಸ್ಪಂದನ ನೀಡಿದ ಯಾವ ಸರಕಾರವು ಅಧಿಕಾರದಲ್ಲಿ ದೀರ್ಘಕಾಲ ಉಳಿಯಲಾರದು ಎಂಬುದನ್ನು ಕಾರ್ಯತ ಮಾಡಿ ತೋರಿಸಿತು. ೧ ಆಗಿನ ಮುಖ್ಯಮಂತ್ರಿ ಆರ್.ಗುಂಡುರಾವ್ ಅವರು ಬಹಳತಡವಾಗಿ ಕನ್ನಡಪರವಾದ ಆದೇಶವನ್ನು ಹೊರಡಿಸಿದರು, ಅಲ್ಲಿಯ ವರೆಗೂ ಜನವಿರೋಧಿಯಾಗಿ ನಡೆದುಕೊಂಡ ಅಧಿಕಾರ ರೂಪ ಕಾಂಗ್ರೆಸ್ ಪಕ್ಷವನ್ನು ೧೯೮೩ ರ ಸಾರ್ವತ್ರಿಕ ಚುನಾವನೆಯಲ್ಲಿ ಕನ್ನಡದ ಜನತೆ ಹಿಂದಕ್ಕೆ ಅಟ್ಟಿದರು. ಹೀಗೆ ರಾಜಕುಮಾರ್ ಅವರು ನಾಯಕತ್ವದಲ್ಲಿ ರಾಜ್ಯ ರಾಜಕಾರಣದಲ್ಲಿ ಪಲ್ಲಟವನ್ನುಂಟು ಮಾಡಿದ್ದು ಮರೆಯಲಾಗದ ಘಟನೆ.

ತೆರೆಯ ಮೇಲೆ ನಾಡುನುಡಿ ಸಂಸ್ಕೃತಿಯನ್ನು ಕಟ್ಟಿದಂತೆ ನಿಜಜೀನವದಲ್ಲಿಯೂ ಒದಗಿ ಬಂದ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ವ್ಯವಹಾರಿಕ ಲಾಭನಷ್ಟವನ್ನು ಬದಿಗಿರಿಸಿ ಇಡೀ ಚಿತ್ರರಂಗದ ಕಲಾವಿದರನ್ನು ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಿದ್ದು ಅವರ ಮೊದಲ ಯಶಸ್ಸು. ಈ ಚಳವಳಿಯ ಯಶಸ್ಸಿನ ನಂತರ ರಾಜಕುಮಾರಯಂ ಅವರು ಕನ್ನಡಿಗ, ಕನ್ನಡ ಕರ್ನಾಟಕದ ಸಂಕೇತವಾಗಿ ಬಿಂಬಿತರಾದರು. ಈ ಕಾರಮದಿಂದಲೇ ಕನ್ನಡಿಗರ ವ್ಯಕ್ತಿತ್ವದ ಬಳವಣಿಗೆಯಲ್ಲಿ ರಾಜಕುಮಾರಂ ಅವರ ಪಾತ್ರ ಬಹಳ ಮುಖ್ಯವಾಗ ತೊಡಗಿತು.ಈ ಚಳವಳಿಯಲ್ಲಿ ರಾಜಕುಮಾರ್ ಅವರ ಪ್ರವೇಶದಿಂದಾಗಿ ಅವರಿಗೆ ಸಾಂಸ್ಕೃತಿಕ ವ್ಯಕ್ತಿತ್ವವೊಂದು ಗರಿಯೊಡೆಯಿತು. ಸಿನಿಮಾ ತೆರೆಯ ಮೇಲೆ ನಮ್ಮ ಕಣ್ಣು ಬಂಬವಾಗಿ ಕಾಣುತ್ತಿದ್ದರಾಜಕುಮಾರ ಚಳವಳಿಯ ಯಶಸ್ಸಿನ ನಂತರ ಕನ್ನಡಿಗರ ಮನೆ ಮನಗಳ ಬಂಧು ಬಳಗವಾದರು. ನಾಡಿನ ಸಾಂಸ್ಕೃತಿಕ ಚೈತನ್ಯದ ಸಂಕೇತವಾಗಿ ಸಂಕಟದ ಗಳಿಗೆಯಲ್ಲಿ ಸಹಾಯಕ್ಕೆ ದಾವಿಸುವ ರಾಜಣ್ಣನವರು ಅಣ್ಣಾವ್ರು ಆಗಿ ರೂಪಾಂತರವಾದರು.೨ ಗುಂಡುರಾಜ್ ನೇತೃತ್ವದಲ್ಲಿ ಕಾಂಗ್ರೇಸ್ ಸರಕಾರ ಆಧಿಕಾರದಿಂದ ಕೆಳಗಿಳಿದ ನಂತರರ ರಾದಮಕೃಖಿಷ್ಣ ಹೆಗಡೆ ಸರಕಾರವು ಗೋಕಾಕ್ ಶಿಫಾರಸುಗಳನ್ನು ಜಾರಿಗೊಳಿಸಿದಲ್ಲದೆ, ಕನ್ನಡಿಗರ ಉದ್ಯೋಗ ಮತ್ತು ಮೀಸಲಾಗತಿ ಕುರಿತು ಶಿಫಾರಸ್ಸು ಮಾಡುವಂತೆ ಡಾ. ಸರೋಜಿನಿ ಮಹಿಷಿ ನೇತೃತ್ವದಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಿಸಿತು. ಇದರ ಮೂಲಕ ಕನ್ನಡದ ಬಾಗ್ಯದ ಬಾಗಿಲು ತರೆಯಿತು. ಇದು ಸಹಸ್ರ ಸಹಸ್ರ ಜನತೆಯ ನಡುವೆ ರಾಜಕುಮಾರ್ ಅವರ ನಾಯಕತ್ವದ ಫಲ ೩ ವೆಂದು ಅಭಿಪ್ರಾಯ ಪಡಬಹುದು.

ಗೋಕಾಕಂ ಚಳವಳಿ ನಡೆದು ಇಂದಿಗೆ ಕಾಲುಶಿತಮಾನವೇ ಉರುಳಿಹೋದರು ಅದರ ಪ್ರಭಾವ ಮಾತ್ರ ಜನಮಾಸದಲ್ಲಿ ಹಾಗೆ ಉಳಿದಿದೆ. ಸ್ವತಂತ್ರ ದೂರ ದರ್ಶನ ಕೇಂದ್ರ ಸ್ಥಾಪನೆ, ಮಹಿಷಿ ವರದಿ ಅನುಷ್ಠಾನ, ಕನ್ನಡ ಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾದಿಕಾರ ರಚನೆ, ಕರ್ನಾಟಕದ ನೈರುತ್ಯ ರೈಲ್ವೆ ವಲಯ ಇನ್ನು

ಮುಂತಾದವುಗಳು ಕಾರ್ಯರೂಪಕ್ಕೆ ನಂತರದ ದಿನಗಳಲ್ಲಿ ಬರಲು ಗೋಕಾಕ್ ಚಳವಳಿಯ ಭಾವವೇ ಕಾರಣ. ಯಾವ ನಿಟ್ಟಿನಿಂದ ನೋಡಿದರು ಈ ಚಳವಳಿ ಒಂದು ಸಮಗ್ರ ಜನಪದ ಚಳವಳಿಯಾಗಿ ಕಾಣುತ್ತದೆ. ಎಂಥಹ ಸಮಸ್ಯೆ ಎದುರಾದರು ಕಾರ್ಯತಂತ್ರಗಳನ್ನು ಹೂಡಬಲ್ಲ ಜಾಣ್ಮೆಯನ್ನು ರಾಜಕುಮಾರ್ ನಾಯಕತ್ವದ ಮೂಲಕ ಚಳವಳಿ ಜನಸಮುದಾಯಕ್ಕೆ ನೀಡಿದೆ. ಸಾಮಾನ್ಯ ಕನ್ನಡಿಗರು ರಾಜ್ಯಾದ್ಯಂತ ಒಂದಲ್ಲ ಒಂದು ಹಂತದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯುವಂತಹ ಪರಿಸ್ಥಿತಿ ನಿರ್ಮಾಣ ಮಾಡುವುದರ ಜೊತೆಗೆ ಕನ್ನಡಿಗರಲ್ಲಿ ಮೂಡಿದ ಒಳ ಎಚ್ಚರದಿಂದಾಗಿ ಕಾರ್ಖಾನೆ, ಕಛೇರಿ ಸಂಘ ಸಂಸ್ಥೆಗಳಲ್ಲಿ ಕನ್ನಡ ಭಾಷೆಯ ಬಳಕೆ ಹೆಚ್ಚು ಚಾಲ್ತಿಗ ಬರುವಂತಾಯಿತು. ಕನ್ನಡ ಸಂಘ ಸಂಸ್ಥೆಗಳು ಅಧಿಕವಾಗತೊಡಗಿದವು. ಇದರಿಂದಾಗಿ ಕನ್ನಡಿಗರಲ್ಲಿ ನೈತಿಕ ಸ್ಥೈರ್ಯ ಲಭಿಸುವಂತಾಯಿತು. ಮಾತೃಭಾಷಾ ಮಾಧ್ಯಮದ ಫಲವಾಗಿ ನಡೆದ ಹೋರಾಟವಾಗಲಿ ಕನ್ನಡ ಆಡಳಿತ ಭಾಷೆಯಾಗಲು ಆಕಿದ ಒತ್ತಡಗಳಾಗಲಿ ಈ ಚಳವಳಿಯ ಫಲಕೃತಿಗಳಾಗಿ ಬಿಂಬಿತವಾಗಿವೆ.

ಈ ಅವಧಿಯಲ್ಲಿನ ರಾಜಕಾರಣವು ಕನ್ನಡ ಕನ್ನಡಿಗ ಕರ್ನಾಟಕ ಎಂದು ಪರಿಕಲ್ಪನೆ ಮಾಡಿ ಮೊಳಕೆಯೊಡೆದು ೧೯೫೦ ರ ದಶಕದಿಂದ ೧೯೭೩ ರ ವರೆಗೆ ಆಡಳಿತನಡೆಸುತ್ತಿದ್ದ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಕೊನೆಗಾಣಿಸಿದ್ದು ಸಹ ಈ ಚಳವಳಿಯ ಫಲಕೃತಿಯಾಗಿದೆ. ಈ ಚಳವಳಿಯು ಕನ್ನಡಿಗರನ್ನು ಕನ್ನಡ ಪರ ಚಿಂತಿಸುವಂತೆ ಜಾಗೃತಿಯನ್ನುಂಟು ಮಾಡಿತು. ಆದರೆ ಇದರ ಫಲ ನಿರಾಶದಾಯವಾಗಿದ್ದರೂ ಭಾಷೆಯ ಪರವಾದ ಪ್ರಜ್ಞೆ ಕರ್ನಾಟಕದ ಜನತೆಯ ಮನಸ್ಸನ್ನು ಒಂದುಗೂಡಿಸಿತು. ಗೋಕಾಕ್ ಚಳವಳಿಯ ಯಶಸ್ಸು ಇದಕ್ಕೆ ಸಮಾನಾಂತರವಾಗಿ ನಡೆಯುತ್ತಿದ್ದ ರೈತ ಚಳವಳಿ ಮತ್ತು ದಲಿತ ಚಳವಳಿಗಳಲ್ಲಿ ಕನ್ನಡ ಪದ ವಾದಂಥ ದಟ್ಟ ವಾತಾವರಣವನ್ನು ನಿರ್ಮಾಣ ಮಾಡಿತ್ತು. ಚಳವಳಿ ಬಿರುಸಾಗಿ ನಡೆಯುತ್ತಿದ್ದ ಕಾಲದಲ್ಲಿ ಕನ್ನಡ ಚಿತ್ರರಂಗ ತನ್ನ ಪಾಡಿಗೆ ತಾನು ತೆಪ್ಪಗಿರಲಿಲ್ಲ ರಾಜಕುಮಾರ್ ಅವರ ನಾಯಕತ್ವದಡಿಯಲ್ಲಿ ಎಲ್ಲಾರು ಬಂದು ಸೇರುವಂತಾಯಿತು. ಮತ್ತು ತ್ರಿಕರಣ ಶುಧ್ದಿಯಿಂದ ಎಲ್ಲಾ ಕನ್ನಡದ ಜನತೆ ಬಾಗವಹಿಸಿದರು ಮತ್ತೊಂದು ವಿಶೇಷ.

ರಾಜಕುಮಾರ್ ಅವರು ಚಳವಳಿಯ ಪ್ರಧಾನ ಭೂಮಿಕೆಗೆ ಬಂದನಂತರ ಚೆದುರಿ ಹೋಗಿದ್ದ ಕನ್ನಡ ಹೋರಾಟಗಾರರು, ಸಾಹಿತಿ ಚಿಂತಕರು, ಒಂದೇ ವೇದಿಕೆಗೆ ಬರುವಂತಾಯಿತು. ಚಿದಾನಂದ ಮೂರ್ತಿ, ಲಂಕೇಶ್, ಬರಗೂರು ರಾಮಚಂದ್ರಪ್ಪ, ಜಿ. ನಾರಾಯಣಕುಮಾರ್, ಚಂಪಾ, ಪಾಪು, ದೇಜಗೌ, ನಂತಹ ನೂರಾರು ಸಾಹಿತಿ ಚಿಂತಕರು ಚಳವಳಿಯಲ್ಲಿ ರಾಜಕುಮಾರ್ ಅವರನ್ನು ಹಿಂಬಾಲಿಸತೊಡಗಿದರು. ತೀರರಾ ಕೊನೆಯವರೆಗೂ ನಾಡುನುಡಿಯ ವಿಷಯದಲ್ಲಿ ತಮ್ಮ ಬದ್ದತೆಯೊಂದಿಗೆ ಅನುಕ್ಷಣವು ರಾಜೀಮಾಡಿ ಕೊಳ್ಳದೇ ರಾಜಕುಮಾರ್ ಅವರು ಚಿತ್ರರಂಗಕ್ಕೆ ಮಾತ್ರ ಸೀಮಿತರಾಗದೆ ಕರ್ನಾಟಕದ ಅನಭಿಶಕ್ತ ದೊರೆಯಾಗಿ, ಕನ್ನಡ ಭಾಷೆಯ ಮುಖವಾಗಿಯಾಗಿ ರೂಪುಗೊಂಡರು. ಇವೊತ್ತಿಗೂ ಒಬ್ಬ ಚನಲಚಿತ್ರನಟ ಒಂದು ಪ್ರಾಂತ್ಯದ ಸಾಂಸ್ಕೃತಿಕ ರಾಯಬಾರಿಯಾಗಿ ಗುರುತಿಸಿಕೊಂಡಿರುವ ಉದಾಹರಣೆ ಆಂದ್ರಪ್ರದೇಶದ ಎನ್.ಟಿ. ರಾಮರಾವ್ ಅವರನ್ನು ಹೊರತು ಪಡಿಸಿದರೆ ನಂತರದ ಸ್ಥಾನದಲ್ಲಿ ರಾಜಕುಮಾರ್ ಅವರು ಮಾತ್ರ ಕಾಣಸಿಗುತ್ತಾರೆ.೪.

ರಾಜಕುಮಾರ್ ಅವರು ಸಾರ್ವಜನಿಕವಾಗಿ ಬೃಹತ್ ಜನಸ್ತೋಮದ ನಡುವೆ ಭಾಗವಹಿಸಿದ ಪ್ರಥಮ ಚಳವಳಿ ಇದಾಗಿದ್ದು. ಚಳವಳಿಯ ಆಯಾಮಗಳು ಸರಿಯಾಗಿ ತಿಳಿಯದೇ ಹೋದರು ಯಶಸ್ವಿ ಹೋರಾಟಗಾರನಿಗೆ

ಇರಬಹುದಾಗಿದ್ದ ಲಕ್ಷಣಗಳನ್ನು ರೂಪಿಸಿಕೊಂಡರು. ರಾಜಕುಮಾರ್ ಅವರು ಒಬ್ಬ ಶಾಂತಿ ದೂತನಾಗಿದ್ದು, ಚಳವಳಿಯ ಅಂತ್ಯದವರೆಗೂ ಎಲ್ಲಿಯೂ ಹಿಂಸೆಗೆ ದಾರಿಮಾಡಿಕೊಡದೆ ಮುನ್ನೆಡೆಸಿದರು. ಇವರ ಮಾತು ವಿಚಾರಗಳು ಯಾರನ್ನು ಎಲ್ಲಿಯೂ ಹಿಂಸೆಗ ಪ್ರಚೋದಿಸಲಿಲ್ಲ. ಈ ನಡುವೆ ರಾಜಕುಮಾರ್ ನೇತೃತ್ವದ ಚಳವಳಿ ಸಾಧಿಸಿದ್ದೇನು ಎಂದು ಯೋಚಿಸಿದಾಗ ತಕ್ಷಮ ಹೊಳೆಯುವುದು ಒಂದು ಭಾ,ಆ ಸಮುದಾಯದ ಉಳಿವೆಗೆ ಅಗತ್ಯವಾದ ಪ್ರತಿಭಟನಾ ಶಕ್ತಿಯನ್ನು ತಂದು ನೀಡಿದ್ದು, ಮತ್ತು ಕನ್ನಡಿಗರು ಏನು ಮಾಡಿದರೂ ಸಹಿಸುತ್ತಾರೆ ಎಂಬ ನಂಬಿಕೆಯನ್ನು ಸುಳ್ಳುಮಾಡಿತು. ಕನ್ನಡ ನಾಡು ನುಡಿ ಸೇವೆಯನ್ನು ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಭಾಷೆ ಮತ್ತು ಸಾಹಿತ್ಯದಿಂದ ಎಲ್ಲವನ್ನೂ ಪಡೆದು ಅದರಿಂದಲೇ ಬದುಕಿ ಬೆಳೆದ ಸಾಹಿತಿಗಳೇ ಚಳವಳಿಯ ವಿರುದ್ಧ ಮೂಗು ಮುರಿಯಲಾರಂಭಿಸಿದ ಸಂದರ್ಭದಲ್ಲಿ ರಾಜ್‌ಕುಮಾರ್ ಅವರು ನಾಡ ಸೇವೆಗೆ ಸದಾ ಸಿದ್ಧ, ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಗುಡುಗಿದ ಪರಿಣಾಮವಾಗಿ ಇಡೀ ನಾಡೇ ಎಚ್ಚೆತ್ತುಕೊಂಡಿತು. ಇದರಿದಂ ಅವರಿಗೆ ತಮ್ಮ ಅಭಿಮಾನಿಗಳ ಶಕ್ತಿ ತಿಳುಯುವಂತಾಯಿತು. ಹಾಗೂ ತಮ್ಮ ಅಭಿಮಾನಿಗಳನ್ನು ಹತ್ತಿರದಿಂದ ಒಮ್ಮೆ ನೋಡುವ ಅವಕಾಶವೂ ಸಹ ಒದಗಿ ಬಂತು.

ನಮ್ಮಲ್ಲಿ ಬಹುಪಾಲು ಜನ ತಮ್ಮ ಜಾತಿ ಹಣ ಉದ್ದಿಮೆ ಪದವಿ ಮುಂತಾದವುಗಳ ಮೂಲಕ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ರಾಜ್‌ಕುಮಾರ್ ಅವರು ಪ್ರಾಥಮಿಕವಾಗಿ ನಾವು ಕನ್ನಡಿಗರೆಂದು ಗುರುತಿಸಿಕೊಳ್ಳುವಂತೆ ಸಮುದಾಯದ ಮೇಲೆ ಪ್ರಭಾವ ಬೀರಿದುದು ಚಳವಳಿಯ ಸಫಲತೆಯೆಂದೇ ಭಾವಿಸಬಹುದು. ಬೆಂಗಳೂರು ನಗರ ಸೇರಿದಂತೆ ರಾಜ್ಯದ ಗಡಿ ಭಾಗಗಳಲ್ಲಿ ಪರಭಾಷೆ ಚಿತ್ರಗಳು ಆಗ ರಾರಾಜಿಸುತ್ತಿದ್ದವು. ಹಲವಾರು ಭಾಗಗಳಲ್ಲಿ ಕನ್ನಡಿಗ ಸ್ಥಳೀಯ ನಿರಾಶ್ರಿತನಾಗಿದ್ದ. ಆದರೆ ಚಳವಳಿಯ ಯಶಸ್ಸಿನ ನಂತರ ರಾಜ್ಯದ ಎಲ್ಲಾ ಕಡೆ ಕನ್ನಡ ಚಿತ್ರಗಳು ಹೆಚ್ಚಾಗಿ ಪ್ರದರ್ಶನಗೊಳ್ಳುವಂತಾಯಿತು. ಅಲ್ಲದೇ ಬೆಂಗಳೂರು ನಗರದ ತುಂಬೆಲ್ಲಾ ಕನ್ನಡಮಯ ವಾತಾವರಣ ತಾನಾಗಿಯೇ ಸೃಷ್ಟಿಯಾಯಿತು. ಈ ನಡುವೆ ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕರು ನಿರ್ದೇಶಕರು ಕಲಾವಿದರು ಸಂಘಟಿತರಾಗಲು ಕಾರಣವಾಯಿತು. ಚಳವಳಿಯ ಯಶಸ್ಸಿನ ನಂತರ ವೈಯಕ್ತಿಕವಾಗಿ ರಾಜ್‌ಕುಮಾರ್ ಅವರೂ ಸಹ ಲಾಭವನ್ನು ಪಡೆಯದೇ ಇರಲಿಲ್ಲ. ಚಳವಳಿ ಪ್ರಾರಂಭವಾಗಿದ್ದ ಕಾಲದಲ್ಲಿ ರಾಜ್‌ಕುಮಾರ್ ಅವರು ಜನತೆಯ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ ಎಂಬ ಜನತೆಯ ಅವಕೃಪೆಗೆ ಒಳಗಾಗಿದ್ದ ಸಮಯದಲ್ಲಿ ಅವರ ಚಿತ್ರಗಳು ನೂರು ದಿನ ಪ್ರದರ್ಶನ ಕಾಣವುದು ಕಷ್ಟಕರವಾಗಿತ್ತು. ಒಂದು ಅಂದಾಜಿನ ಪ್ರಕಾರ ಅವರ ಜನಪ್ರಿಯತೆ ಕುಗ್ಗತೊಡಗಿತು. ಅದೇ ಸಮಯಕ್ಕೆ ಇವರು ಚಳವಳಿಯನ್ನು ಯಶಸ್ಸಿನತ್ತ ಕೊಂಡೊಯ್ದು ಜನತೆಯಲ್ಲಿದ್ದ ಅಸಮಾಧಾನ ಹೋಗಲಾಡಿಸಿದ್ದುದು ಚಳವಳಿಯ ಸಫಲತೆಯೇ ಆಗಿದೆ. ರಾಜ್‌ಕುಮಾರ್ ಅವರನ್ನು ಕೇವಲ ಸಿನಿಮಾರಂಗದ ಮೂಲಕ ಗುರುತಿಸಲಿಕ್ಕಾಗದು. ನಾಡುನುಡಿಗೆ ಅವರಿತ್ತ ಕೊಡುಗೆಯ ಕಣದಷ್ಟು ಸ್ವಯಂಘೋಷಿತ ಕನ್ನಡ ಚಳವಳಿಯ ನಾಯಕರಿಂದ ಬರಲಿಲ್ಲ. ಈ ವಿಚಾರದಲ್ಲಿ ಇವರದ್ದು ದೈತ್ಯ ಪ್ರತಿಭೆ ಮತ್ತು ಸಂಘಟನಾ ಶಕ್ತಿ. “ಚಿತ್ರರಂಗದಿಂದ ಜನಪ್ರಿಯತೆಯನ್ನು ನಾಡಿನ ಏಳಿಗೆಗಾಗಿ ಬಳಸಿದ ಉದಾಹರಣೆ ಪ್ರಾಯಶಃ ಭಾರತ ದೇಶದಲ್ಲಿ ಇದೇ ಮೊದಲು. ಈ ಕಾರಣದಿಂದಾಗಿ ರಾಜ್‌ಕುಮಾರ್ ಶ್ರೇಷ್ಠವಾಗಿಬಿಡುತ್ತಾರೆ.”[೫] ಗೋಕಾಕ್ ಚಳವಳಿಯು ಏಕೀಕರಣ ಚಳವಳಿಗಿಂತಲೂ ವ್ಯಾಪಕವೂ ವ್ಯವಸ್ಥಿತವೂ ಆಗಿತ್ತು. ಚಳವಳಿಯು ಸಂಪೂರ್ಣವಾಗಿ ಯಶಸ್ವಿಯಾದರೂ ಅದರ ಫಲ ನಿರೀಕ್ಷಿಸದಷ್ಟು ದೊರೆಯಲಿಲ್ಲ.

ಇಂದಿಗೂ ಈ ವರದಿಯ ಮುಖ್ಯ ತಿರುಳಾದ ಕೆಲವು ಅಂಶಗಳು ಶಾಲಾ ಪಠ್ಯಕ್ರಮದಲ್ಲಿ ಜಾರಿಯಾಗಲಿಲ್ಲ. ಆದರೆ ನಿದ್ರಾವಸ್ಥೆಯಲ್ಲಿದ್ದ ಕನ್ನಡಿಗರನ್ನು ಜಾಗೃತಾವಸ್ಥೆಗೆ ತಂದಿದ್ದು ರಾಜ್‌ಕುಮಾರ್ ಅವರ ಸಾಧನೆಯಾಗಿದೆ.

ರಾಜ್ಯದ ಹೊರಗಡೆಯಿಂದ ಬಂದು ಇಲ್ಲಿ ನೆಲೆಸಿ ಕನ್ನಡ ಭಾಷೆಯನ್ನು ಅಭ್ಯಾಸ ಮಾಡದೇ ಇದ್ದ ವಿದ್ಯಾರ್ಥಿಗಳು ರಾಜ್ಯದ ಪ್ರೌಢಶಾಲೆಗಳಲ್ಲಿ ಸೇರಬಯಸಿದರೆ ಅಂಥವರು ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಅಭ್ಯಾಸ ಮಾಡಲು ಅವಕಾಶ ನೀಡಿದ್ದು ರಾಜ್‌ಕುಮಾರ್ ಅವರ ನಾಯಕತ್ವದ ಫಲಶೃತಿಯೇ ಆಗಿದೆ. ಕನ್ನಡವೂ ಪ್ರೌಢಶಾಲೆಗಳಲ್ಲಿ ೧೨೫ ಅಂಕಗಳ ಏಕೈಕ ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡಲು ಅವಕಾಶ ದೊರೆತಿದದ್ದಲ್ಲದೆ, ಉರ್ದು, ತಮಿಳು, ತೆಲುಗು, ಮರಾಠಿ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಅರ್‍ಯಾಬಿಕ್, ಪರ್ಶಿಯನ್, ಮಲೆಯಾಳಿ ಮತ್ತು ಕನ್ನಡ ಇವುಗಳಲ್ಲಿ ಎರಡು ಭಾಷೆಗಳನ್ನು ತಲಾ ನೂರು ಅಂಕಗಳಿಗೆ ಅಭ್ಯಾಸ ಮಾಡುವಂತಾಯಿತು. ಹಾಗೆಯೇ ೧೯೮೨-೮೩ನೇ ಸಾಲಿನಿಂದ ಗೋಕಾಕ್ ವರದಿಯ ಶಿಫಾರಸ್ಸಿನಂತೆ ೩ನೇ ತರಗತಿಗೆ ಬದಲು ಒಂದನೇ ತರಗತಿಯಿಂದಲೇ ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ವ್ಯವಸ್ಥೆ ಜಾರಿಯಾಯಿತು. ಇವೆಲ್ಲಾ ರಾಜ್‌ಕುಮಾರ್ ಅವರ ನಾಯಕತ್ವದ ಫಲಶೃತಿಗಳಾಗಿವೆ.[೬]

ರಾಜ್‌ಕುಮಾರ್ ಅವರು ತಮ್ಮ ವ್ಯಕ್ತಿತ್ವ ಮತ್ತು ಜನಪ್ರಿಯತೆಯ ಆಯಾಮದಿಂದ ಮಲಗಿದ್ದ ಕನ್ನಡಿಗರನ್ನು ಎಚ್ಚರಿಸಿದರು. ಲಕ್ಷಾಂತರ ಮಂದಿ ಕನ್ನಡತನವನ್ನು ಬೆಳೆಸಿಕೊಳ್ಳಲು ಮಾಡಿದ ಮಾಂತ್ರಿಕ ಶಕ್ತಿ, ಈ ನಾಡಿಗೆ ಬಿಟ್ಟುಹೋದ ದೊಡ್ಡಕೊಡುಗೆಯಾಗಿದೆ. ಇವರಿಗೆ ಎಲ್ಲಾ ರೀತಿಯಿಂದಲೂ ಎಲ್ಲಾ ಸಮಯದಲ್ಲಿಯೂ ಸಲಹೆ ಸಹಕಾರ ನೀಡಿದ ಕ್ರಿಯಾಸಮಿತಿ ಸಹಕಲಾವಿದರ ಅಭಿಮಾನಿಗಳ ಮತ್ತು ಕನ್ನಡ ಪರ ಮನಸ್ಸುಗಳ ಎದೆ ಬಡಿತದಲ್ಲಿ ಇನ್ನು ಆ ಪ್ರತಿಧ್ವನಿಯ ತರಂಗಗಳು ಏಳುತ್ತಲೇ ಇವೆ. ಕನ್ನಡ ಚಳವಳಿಯೆಂದರೆ ಭಾಷೆಯ ಬಗ್ಗೆ ಕೂಗಾಡುವುದು, ಗಲಭೆ ಗದ್ದಲಗಳನ್ನು ಎಬ್ಬಿಸುವುದು ಎಂದು ತಿಳಿದವರೇ ಹೆಚ್ಚು. ಕೆಲ ಮಟ್ಟಿನ ವಿರೋಧ ಹುಟ್ಟಿರುವುದು ಇದೇ ಕಾರಣಕ್ಕೆ. ಕನ್ನಡ ಚಳವಳಿಯೆಂದರೆ ಕರ್ನಾಟಕದ ಅಭಿವೃದ್ಧಿಗಾಗಿ ಚಳವಳಿ ನಡೆಯಬೇಕು ಅದು ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸುವಂತಿರಬೇಕು ಎನ್ನುವಂತಹ ಆಶಯಗಳನ್ನು ಹೊಂದಿದ್ದ ರಾಜ್‌ಕುಮಾರ್ ಅವರು ಚಳವಳಿಯನ್ನು ಇದೇ ಹಿನ್ನೆಲೆಯಲ್ಲಿ ಸಂಘಟಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಿಗರಿಗೆ ಸರ್ಕಾರ ಮಾಡಿದ್ದ ದ್ರೋಹವನ್ನು ನಾಡಿನ ಜನತೆಗೆ ತಿಳಿಯುವಂತೆ ಮಾಡಿದ್ದಲ್ಲದೆ ಕನ್ನಡ ಚಳವಳಿಗೆ ಅಮೂಲಾಗ್ರವಾಗಿ ಬದಲಾವಣೆ ತಂದರು. ಮತ್ತು ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ಒದಗಿದ ಸಮಯದಲ್ಲಿ ಸಮೂಹಶಕ್ತಿಯನ್ನು ಸಂಘಟಿಸಿದ್ದು ಇವರ ದೊಡ್ಡ ಸಾಧನೆ. ಕನ್ನಡದ ಅಳಿವು ಉಳಿವಿನ ಪ್ರಶ್ನೆ ಬಂದಾಗ ಕನ್ನಡದ ಜನತೆ ಮುಖ್ಯವಾಗಿ ಮುಖ ಮಾಡುತ್ತಿದ್ದುದು ರಾಜ್‌ಕುಮಾರ್ ಅವರ ಮನೆಯಂಗಳದತ್ತ. ಜನಸಮೂಹವನ್ನು ಸೆಳೆಯಬಲ್ಲಂತಹ ಸೂಜಿಗಲ್ಲು ಅವರಾಗಿದ್ದರು. ಗೋಕಾಕ್ ಚಳವಳಿಯಲ್ಲಿ ತಾವು ಬೆಳೆದು ಚಳವಳಿಯನ್ನು ಬೆಳೆಸಿದರು. ಇವರು ಯಾವತ್ತೂ ಯಾರ ಹಂಗಿಗೂ ಮರ್ಜಿಗೆ ಪ್ರಲೋಭನೆಗೆ ಒಳಗಾದವರಲ್ಲ. ಯಾವ ರಾಜಕೀಯ ಲಾಭ ಪ್ರಶಸ್ತಿ ಗೌರವಗಳಿಗೆ ಆಸೆ ಪಟ್ಟು ಚಳವಳಿಗೆ ಬಂದವರಲ್ಲ ಎನ್ನುವುದನ್ನು ನಂತರದ ದಿನಗಳಲ್ಲಿ ಸಾಬೀತು ಪಡಿಸಿದರು. ಚಳವಳಿಯ ಸಮಯದಲ್ಲಿ ಸಾಹಿತಿಗಳು ಬುದ್ಧಿಜೀವಿಗಳು ನೀಡುವ ಸಲಹೆಗಳನ್ನು ರಾಜ್‌ಕುಮಾರ್ ಅವರು ಚಾಚೂ ತಪ್ಪದೆ ಪಾಲಿಸಿದರು. ಅವರು ಕರೆದೊಯ್ದ ಕಡೆಯಲ್ಲ ಹೋದರು. ಹತ್ತಾರು ಕಡೆ ಬುದ್ಧಿಜೀವಿಗಳೊಂದಿಗೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ಇವರಿಗೆ ಸಲ್ಲಬೇಕಾಗಿದ್ದ ಗೌರವಗಳು ಸಕಾಲಕ್ಕೆ ಸಲ್ಲುತ್ತಿದ್ದವು.

ಹಾಗೆಯೆ ಇವರು ತಮ್ಮ ಪಾತ್ರವನ್ನು ಅಷ್ಟೆ ಪ್ರಾಮಾಣಿಕತೆಯಿಂದ ನಿರ್ವಹಿಸದರು. ಚಳವಳಿಯ ಹೆಸರಿನಲ್ಲಿ ಕರ್ನಾಟಕ ಬಂದ್, ಬೆಂಗಳೂರು ಬಂದ್, ತಾಲ್ಲೂಕು, ಜಿಲ್ಲಾಕೇಂದ್ರಗಳು ಬಂದ್ ಅನ್ನು ಆಚರಿಸಿದವು. ಕೆಲವು ಕಡೆ ಸಣ್ಣಪುಟ್ಟ ಹಿಂಸಾಚಾರ ನಡೆದು ಸಾರ್ವಜನಿಕ ಆಸ್ತಿಪಾಸ್ತಿಗೆ ಅಲ್ಪಪ್ರಮಾಣದಲ್ಲಿ ನಷ್ಟ ಉಂಟಾಯಿತು. ಪ್ರತಿದಿನವೂ ಸರ್ಕಾರಕ್ಕೆ ಛೀಮಾರಿ ಪ್ರತಿಭಟನೆಗಳಿಂದಾಗಿ ಇರುಸು ಮುರುಸು ಉಂಟಾಯಿತು. ಆದರೆ ಇವರ ಮುಂದಾಳತ್ವದಲ್ಲಿ ಚಳವಳಿಯು ಎಲ್ಲಿಯೂ ಬೃಹತ್ ಪ್ರಮಾಣದ ಹಿಂಸೆಗೆ ದಾರಿಯಾಗದೆ ಪ್ರತಿಭಟನೆ, ಜಾಥಾ, ಹಾಗೂ ಬಹಿರಂಗ ಸಭೆಯಲ್ಲಿಯೇ ಮುಕ್ತಾಯವಾದದ್ದು ಗಮನಾರ್ಹ. ಚಳವಳಿಯು ಅಷ್ಟೇ ಬೇಗ ಅಂತ್ಯ ಕಾಣುವಂತಾಯಿತು. ನಮ್ಮ ನಡುವಿನ ಲೇಖಕರು, ಅಧ್ಯಾಪಕರು, ಸಾಹಿತಿಗಳು, ಚಿಂತಕರು, ಕನ್ನಡ ಪರ ಹೋರಾಟಗಾರರು ತಮ್ಮ ಬರವಣಿಗೆ ಹಾಗೂ ಹೋರಾಟದ ಮೂಲಕ ಜನಸಾಮಾನ್ಯರನ್ನು ಮುಟ್ಟಲು ಸಾಧ್ಯವಾಗಲಿಲ್ಲ. ಆದರೆ ಇವರು ತಮ್ಮ ಎರಡು ಹಂತದ ರಾಜ್ಯಪ್ರವಾಸದ ಜಾಥಾದಲ್ಲಿ ಕರಾವಳಿ ಜಿಲ್ಲೆಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಭಾಗಗಳನ್ನು ಸಂಚರಿಸಿ ಎಲ್ಲಾ ಸಮುದಾಯವನ್ನು ನಿರಾತಂಕವಾಗಿ ಮುಟ್ಟಿಬಂದರು. ತಮ್ಮ ಸಂದೇಶವನ್ನು ಅವರಿಗೆ ಯಶಸ್ವಿಯಾಗಿ ತಲುಪಿಸಿದರು. ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ಚಳವಳಿಗೆ ಚೈತನ್ಯ ತುಂಬಿದರಲ್ಲದೆ ಜನನಾಯಕರಾಗಿ ಜನತೆಯ ಮಧ್ಯೆದಲ್ಲಿಯೇ ಹುಟ್ಟಿಕೊಂಡರು. ಅಲ್ಲದೆ ಕನ್ನಡಪರ ಹೋರಾಟಗಾರರು, ಸಾಹಿತಿಗಳು, ಬುದ್ಧಿಜೀವಿಗಳು, ರಾಜಕಾರಣಿಗಳು ಮಾಡಲಾಗದ ಒಂದು ಕೆಲಸವನ್ನು ಜನರ ಹೃದಯಸಿಂಹಾಸನದಲ್ಲಿ ಸ್ಥಾನ ಪಡೆದಿದ್ದ ನಟರೊಬ್ಬರು ಮಾಡಬಹುದು ಎಂಬುದಕ್ಕೆ ನಿದರ್ಶನವಾದರು. ಅ.ನ.ಕೃ, ಕನ್ನಡ ಕಾದಂಬರಿಗೆ ಎಂಥ ಕಾಯಕಲ್ಪ ನೀಡಿದರೋ ಅದೇ ಕ್ರಿಯೆಯನ್ನು ಇವರು ಕನ್ನಡದ ಮನಸ್ಸುಗಳಿಗೆ ನೀಡಿದರು.[೭]

ಯಾವುದೇ ಚಳವಳಿ ಯಶಸ್ವಿಯಾಗಬೇಕಾದರೆ ಚಿಂತನೆ ಭಾವನೆಯು ಕೂಡ ಬಹಳ ಮುಖ್ಯ. ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಇರುವ ದೊಡ್ಡ ಬೆಂಬಲವೆಂದರೆ ಜನಸಾಮಾನ್ಯರ ಭಾವನಾತ್ಮಕ ಬೆಂಬಲ. ಇಂಥ ಚಿಂತನೆ ಮತ್ತು ಭಾವನೆಗಳೆರಡೂ ಬೆರೆತ ಬೆಂಬಲವನ್ನು ಜನಸಾಮಾನ್ಯರಿಂದ ಗಳಿಸಿಕೊಳ್ಳಲು ರಾಜ್‌ಕುಮಾರ್ ಅವರು ವಹಿಸಿದ ಪಾತ್ರ ಗಮನಾರ್ಹವಾದುದು. ಸ್ವಾತಂತ್ರ್ಯ ಚಳವಳಿಯಲ್ಲಾಗಲಿ ಏಕೀಕರಣ ಚಳವಳಿಯಲ್ಲಾಗಲಿ ಈ ಪರಿಯ ಜನಸಮೂಹ ಸಕ್ರಿಯವಾಗಿ ಭಾಗವಹಿಸಲಿಲ್ಲ. ರಾಜ್‌ಕುಮಾರ್ ಅವರು ಚಳವಳಿಯ ಭಾಗವಾದ ನಂತರ ಹರಿದು ಬಂದ ಜನಸ್ತೋಮ ಅವರ ವ್ಯಕ್ತಿತ್ವಕ್ಕೆ ಇದ್ದ ಜನಪ್ರಿಯತೆಯ ಆಯಾಮ ತಿಳಿದುಬರುವಂತಾಯಿತು. ಒಂದು ವೇಳೆ ಇವರು ಚಳವಳಿಗೆ ಬರದೇ ಹೋಗಿದ್ದರೆ ಅದಕ್ಕೆ ಸ್ಪಷ್ಟರೂಪ ವ್ಯವಸ್ಥಿತ ಚೌಕಟ್ಟು ಬರುತ್ತಿರಲಿಲ್ಲವೆಂದು ಹಳೆಯ ದಿನಗಳನ್ನು ಬಲ್ಲವರು ಹೇಳುತ್ತಾರೆ. ರಾಜ್ಯಲೋಕಸೇವಾ ಆಯೋಗ, ಕೇಂದ್ರಲೋಕಸೇವಾ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಬರೆಯಲು ಅವಕಾಶಮಾಡಿ ಕೊಟ್ಟಿದ್ದು ಹಾಗೂ ಚಳವಳಿಯ ಯಶಸ್ಸಿನ ನಂತರ ರಾಜ್ಯದ ಪ್ರಮುಖ ರಸ್ತೆ ಮುಂತಾದವುಗಳಿಗೆ ರಾಜ್‌ಕುಮಾರ್ ಅವರ ಮತ್ತು ಸಾಹಿತಿ ಕಲಾವಿದರ ಹೆಸರುಗಳನ್ನು ನಾಮಕರಣ ಮಾಡುವ ಪದ್ಧತಿ ಬೆಳೆದದ್ದು ಈ ಚಳವಳಿಯ ಫಲಶ್ರುತಿಗಳೆಂದೇ ಹೇಳಬಹುದು.

[illegible]

ಟಿಪ್ಪಣಿ

೧. ಶ್ರೀನಿವಾಸ ಕುಲಕರ್ಣಿ., (ಸಂ) ೨೦೦೩ ಹೋರಾಟ, ಪು. ೧೫೯

೨. ಗೌರಿಸುಂದರ್., (ಸಂ) (೨೦೦೬) ಕನ್ನಡ ಕಲಾಕಂಠೀರವ ಡಾ. ರಾಜ್‌ಕುಮಾರ್, ಪು. ೧೫೮-೫೯

೩. ಷಣ್ಮುಗಂ ಮು., (೨೦೦೫) ಪರ್ಸನಲ್ ಪೇಜ್, ಪು. ೧೭೬

೪. ಲಕ್ಷ್ಮಣ್‌ರಾವ್ ಕೆ., ಸಂ (೨೦೦೭) ಸಾಂಸ್ಕೃತಿಕ ಜೀವನದಿ ಡಾ. ರಾಜ್, ಪು. ೪೩

೫. ಅದೇ., ಪು. ೪೩

೬. ನಾರಾಯಣ ಪಿ.ವಿ., (೧೯೮೫) ಗೋಕಾಕ್ ವರದಿ ಅನುಷ್ಠಾನದ ಸ್ಥಿತಿಗತಿಗಳು, ಪು. ೧೨

೭. ಗೌರೀಸುಂದರ್., ಮೇಲಿನದೇ., ಪು. ೧೭೧

ಅಧ್ಯಾಯ ಏಳು

ತಳೆದ ನಿಲುವುಗಳು

ಅಧ್ಯಾಯ ಏಳು

ತಳೆದ ನಿಲುವುಗಳು

ಪ್ರಸ್ತುತ ಅಧ್ಯಯನವು ಮುಖ್ಯವಾಗಿ ರಾಜ್‌ಕುಮಾರ್ ಅವರು ಗೋಕಾಕ್ ಚಳವಳಿಯಲ್ಲಿ ವಹಿಸಿರುವ ಪಾತ್ರವನ್ನು ಕುರಿತು ವಿಶ್ಲೇಷಣೆ ಮಾಡುವುದಾಗಿದೆ. ಇಲ್ಲಿಯ ಅಂಶಗಳು ಬಹುಮುಖ್ಯವಾಗಿ ರಾಜ್‌ಕುಮಾರ್ ಅವರ ಪ್ರವೇಶವಾದೊಡನೆ ಚಳವಳಿ ಕಂಡುಕೊಂಡು ಸ್ವರೂಪವನ್ನು ಗ್ರಹಿಸುವುದಾಗಿದೆ. ಅಲ್ಲದೆ ದೊರೆತ ಆಕರಗಳನ್ನು ವಿಶ್ಲೇಷಣೆಗೆ ಒಳಪಡಿಸಿ ನಿಬಂಧವನ್ನು ವ್ಯವಸ್ಥಿತವಾಗಿ ರೂಪಿಸುವಂಥದ್ದು. ಚಳವಳಿಯಲ್ಲಿ ರಾಜ್‌ಕುಮಾರ್ ಅವರ ಪಾಲ್ಗೊಳ್ಳುವಿಕೆಗೆ ಒದಗಿ ಬಂದ ಸಂದರ್ಭ, ಸನ್ನಿವೇಶ ಮುಂತಾದವುಗಳನ್ನು ಸ್ಥಿತ್ಯಂತರಗಳ ವಿವಿಧ ನೆಲೆಗಳಲ್ಲಿ ನೋಡಲಾಗಿದೆ. ಸಾಧ್ಯವಾದಷ್ಟು ವಿವರವಾಗಿ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಗಳ ಜೊತೆಗೆ ಸಮಕಾಲೀನ ಕೃತಿಗಳ ನೆರವಿನೊಂದಿಗೆ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಷ್ಟಾದರೂ ಈ ಅಧ್ಯಯನ ಗೋಕಾಕ್ ಚಳವಳಿಯಲ್ಲಿನ ರಾಜ್‌ಕುಮಾರ್ ಬಗೆಗಿನ ಪಾತ್ರದ ಶೋಧದಲ್ಲಿ ಪರಿಪೂರ್ಣತೆಯೆಂಬುದಾಗಲಿ ಅಥವಾ ಪರಿಸಮಾಪ್ತಿಯಾದುದಾಗಲಿ ಅಲ್ಲವೆಂಬುದನ್ನು ಅರಿತುಕೊಂಡೇ ವಿಶ್ಲೇಷಿಸಲಾಗಿದೆ.

ಇಲ್ಲಿನ ಅನೇಕ ಅಂಶಗಳು ನಾಡಿನಾದ್ಯಂತ ಕಂಡುಬರುವ ಚಳವಳಿಯ ಗುಣಸ್ವಭಾವಗಳನ್ನೇ ಹೊಂದಿದ್ದರೂ ಕೂಡ ಚಳವಳಿಯ ಸಂದರ್ಭದಲ್ಲಿ ರಾಜಕುಮಾರ್ ಅವರ ಪಾತ್ರದ ವೈವಿಧ್ಯತೆಗಳನ್ನು ಮತ್ತು ವೈಶಿಷ್ಟ್ಯಗಳನ್ನು ಗುರುತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಒಂದು ಚಳವಳಿಯಾಗಲಿ, ಹೋರಾಟವಾಗಲಿ ನೆಲ, ಜಲ, ಭಾಷೆಗಳನ್ನೊಳಗೊಂಡಂತೆ ಒಂದು ಸಾಮಾಜಿಕ ಪರಿವರ್ತನೆಯಾಗಬೇಕಾದರೆ ಒಬ್ಬ ಯೋಗ್ಯ ನಾಯಕನ ಅವಶ್ಯಕತೆ ಇದ್ದೇ ಇದೆ. ಅಂಥ ಆಯ್ಕೆಯನ್ನು ಮಾಡಲಿಕ್ಕೆ ಹೊರಟಾಗ ಗೋಕಾಕ್ ಚಳವಳಿಯಲ್ಲಿ ಡಾ. ರಾಜ್‌ಕುಮಾರ್ ಅವರು ನಮಗೆ ಅನಿವಾರ್ಯವಾಗುತ್ತಾರೆ. ಚಳವಳಿ ನಾಡಿನುದ್ದಕ್ಕೂ ಗರಿಕಟ್ಟುತ್ತಿದ್ದ ಸಂದರ್ಭ, ಸಾಹಿತಿ, ಕಲಾವಿದರ ಜೊತೆ ಕೈಜೋಡಿಸಿದ ಮೇಲೆ ಇವರ ಜನಶಕ್ತಿಗೆ ಸರ್ಕಾರ ಮಣಿಯಲೇಬೇಕಾಯಿತು. ಆದರೆ ಅಧಿಕಾರಿಗಳ ಮನಸ್ಸು ಕರಗದೇ ಹೋಯಿತು ಎಂಬುದು ಸತ್ಯವಾದರೂ ಕನ್ನಡ ಭಾಷೆಗೆ ಚಳವಳಿಯ ಮೂಲಕ ಸಾರ್ವಭೌಮಸ್ಥಾನ ಸಿಗಲು ರಾಜ್‌ಕುಮಾರ್ ಅವರ ಪ್ರಭಾವವೇ ಕಾರಣ ಎಂಬುದು ನಿರಾಕರಿಸಲಾಗದ ಸಂಗತಿ. ಭಾಷೆಯೊಂದು ತನ್ನ ಸಮುದಾಯವೊಂದನ್ನು ಹಿಡಿದಿಟ್ಟುಕೊಳ್ಳುವ ರೀತಿ ಇನ್ನಾವುದೇ ಮಾಧ್ಯಮ ಹಿಡಿದಿಟ್ಟುಕೊಳ್ಳಲಾರದು. ತನ್ನ ಭಾಷೆಯ ಕಾರಣದಿಂದಲೇ

ಬಾಂಗ್ಲದೇಶ ಬೇರ್ಪಡುವಂತಾಯಿತು. ಭಾಷೆಯ ಕಾರಣದಿಂದಲೇ ಯುಗೋಸ್ಲಾವಿಯಾ ಸಿಡಿದು ಹೋಗುವಂತಾಯಿತು. ಹಾಗೆಯೇ ಭಾಷಾ ಆಂದೋಲನದಿಂದಲೇ ಆಂಧ್ರಪ್ರದೇಶ ಅಸ್ತಿತ್ವ ಪಡೆಯುವಂತಾಯಿತು. ಇಲ್ಲಿ ಗೋಕಾಕ್ ಭಾಷಾ ಆಂದೋಲನದಿಂದಲೇ ರಾಜ್‌ಕುಮಾರ್ ಅವರಂತ ನಾಯಕರು ದಿಢೀರ್ ಉದಯಿಸುವಂತಾಯಿತು. ಈ ಭಾಷಾ ಆಂದೋಲನದಲ್ಲಿ ಇವರ ಹೆಸರು ಜನಮನ ತಲುಪುವಂತೆ ಭಾರತದ ಮತ್ಯಾವ ರಾಜ್ಯಗಳಲ್ಲಿಯೂ ಮತ್ತೊಬ್ಬ ವ್ಯಕ್ತಿಯ ಹೆಸರು ಚಾಲ್ತಿಗೆ ಬರಲಾಗಲಿಲ್ಲ. ಬೇರೆ ಯಾರಿಗೂ ಅಂತಹ ವಾತಾವರಣ ಹಾಗು ಸಂದರ್ಭಗಳು ಸೃಷ್ಟಿಯಾಗಲಿಲ್ಲ. ಬಾಲಿವುಡ್‌ನಲ್ಲಿ ಬಹುದೊಡ್ಡ ಹೆಸರು ಗಳಿಸಿರುವ ಅಮಿತಾಬಚ್ಚನ್ ನಂತಹ ನಟರು ತಮ್ಮ ವೃತ್ತಿಜೀವನದಲ್ಲಿ ಹಣ, ಗೌರವ, ಪ್ರಶಸ್ತಿಗಳನ್ನು ಪಡೆದರು, ಆದರೆ ಜನಸಾಮಾನ್ಯರ ನಡುವೆ ನಿಂತು ಜನಪರ ಚಳವಳಿಗಳಲ್ಲಿ ತೊಡಗುವಂತಹ ಅವಕಾಶ ಒದಗಲೇ ಇಲ್ಲ. ಅಂಥ ಅವಕಾಶ ರಾಜ್‌ಕುಮಾರ್ ಅವರಿಗೆ ಮಾತ್ರ ಒದಗಿ ಬಂತು. ಅದನ್ನು ಅವರು ಸಮರ್ಥವಾಗಿ ನಿಭಾಯಿಸಿದುದು ಗಮನಾರ್ಹ. ಚಳವಳಿಯ ಕಾಲಘಟ್ಟದಲ್ಲಿ ಅಭಿಮಾನಿಗಳು ತಮ್ಮ ನಾಲಿಗೆಯ ಮೇಲೆ "ಗೋಕಾಕ್ ಚಳವಳಿ ಅಂದರೆ ರಾಜಕುಮಾರ್, ರಾಜಕುಮಾರ್ ಅಂದರೆ ಗೋಕಾಕ್ ಚಳವಳಿ" ಎನ್ನುವಂತಹ ವಾಕ್ಯ ಬರೆದುಕೊಂಡಿದ್ದರು. ಚಳವಳಿಗಾರರಲ್ಲಿ ಹೊಸ ಜಾಗೃತಿಯುಂಟಾಗುವುದಕ್ಕೆ ತಮ್ಮ ಮಾತು, ನಡೆ, ನುಡಿಗಳ ಮೂಲಕ ಹೊಸ ಉಸಿರು ನೀಡಿದರು. ಅದೇ ರೀತಿ ಸಾಹಿತಿಗಳ ವಲಯದಲ್ಲಿ ಪ್ರಖರತೆ ಪಡೆದುಕೊಂಡಿದ್ದ ಚಳವಳಿಯ ವ್ಯಾಪ್ತಿಯನ್ನು ಜನಸಾಮಾನ್ಯರ ಮನೆಬಾಗಿಲಿಗೆ ಕೊಂಡೊಯ್ದ ಕೀರ್ತಿ ಇವರಿಗೆ ಸಲ್ಲುತ್ತದೆ. ಚಳವಳಿಯೊಂದು ಯಶಸ್ವಿಯಾಗಬೇಕಾದರೆ ಹಣಬಲ, ಜಾತಿಬಲ, ರಾಜಕೀಯ ಬಲ ಬೇಕೆ ಬೇಕು ಎನ್ನುವ ಮಾತನ್ನು ಸುಳ್ಳಾಗಿಸಿದ ರಾಜಕುಮಾರ್ ಅವರ ಪ್ರವೇಶ ಚಳವಳಿಯಲ್ಲಿ ನಾಯಕತ್ವ ಎನ್ನುವುದು ಹೇಗೆ ಕೆಲಸ ನಿರ್ವಹಿಸಬೇಕು ಎಂಬುದನ್ನು ಸ್ವತಃ ತೋರಿಸಿಕೊಟ್ಟರು. ಚಳವಳಿಯು ರಾಜ್‌ಕುಮಾರ್ ಅವರ ಹಿಡಿತಕ್ಕೆ ಬಂದ ನಂತರ ಎಲ್ಲಿಯೂ ಹಾದಿ ತಪ್ಪದಂತೆ ಎಚ್ಚರ ವಹಿಸಿದರು. ಹಾಗು ಎಲ್ಲಿಯೂ ಅಪಸ್ವರ, ಅನುಮಾನಗಳು ಏಳದಂತೆ ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ಸಾಧಿಸಿ ತೋರಿಸಿದ್ದಲ್ಲದೆ, ನಿಶ್ಚಿತ ಗುರಿಯನ್ನು ನಿಗಧಿತ ಸಮಯದಲ್ಲಿ ಸಾಧಿಸ ಹೊರಟ ಅವರ ನಾಯಕತ್ವವನ್ನು ನಾಡಿನ ಜನತೆ ಆಗಲೇ ಒಪ್ಪಿ ಆಗಿತ್ತು. ಜೊತೆಗೆ ಅಮೂಲಾಗ್ರ ಬದಲಾವಣೆಯನ್ನು ಪ್ರತಿಪಾದಿಸುವ ಮತ್ತು ಜನಪರವಾದ ತತ್ವಾದರ್ಶಗಳನ್ನು ಜನರ ಭಾಷೆಯಲ್ಲಿಯೇ ತಿಳಿಹೇಳತೊಡಗಿದರು.

ಚಳವಳಿ ಎಂದರೆ ಕರ್ನಾಟಕದ ಅಭಿವೃದ್ಧಿಗಾಗಿ ಚಳವಳಿ ರೂಪಿಸಬೇಕು. ಆಗ ಡಮ್ಮಿ ಹೋರಾಟಗಾರರು, ಅಂಧಾಭಿಮಾನಿಗಳು ತಮಗೇ ತಾವೇ ಹಿಂದೆ ಸರಿಯುತ್ತಾರೆ ಎನ್ನುವ ಚಿಂತನೆಯ ಹಿನ್ನೆಲೆಯಲ್ಲಿ ಗೋಕಾಕ್ ಚಳವಳಿ ರಾಜ್‌ಕುಮಾರ್ ಮುಂದಾಳತ್ವದಲ್ಲಿ ಜರುಗಿತು. ಪ್ರೌಢಶಾಲಾ ಹಂತದಲ್ಲಿ ಸರ್ಕಾರ ಮಾಡಹೊರಟಿದ್ದ ದ್ರೋಹವನ್ನು ಇವರು ಜನತೆಗೆ ತಿಳಿಯುವಂತೆ ಮಾಡಿದ್ದಲ್ಲದೆ ಮುಂದಿನ ದಿನಗಳಲ್ಲಿ ನಡೆದ ಕನ್ನಡಪರ ಚಳವಳಿಗಳ ಮುಂದೆ ಇದು ಅಮೂಲಾಗ್ರವಾಗಿ ತಾಯಿ ಬೇರಿನಂತೆ ನಿಲ್ಲುವಂತೆ ಮಾಡುವಲ್ಲಿ ಯಶಸ್ವಿಯಾದರು. ಸಮಗ್ರ ಕರ್ನಾಟಕದ ಆಶೋತ್ತರಗಳನ್ನು ಪ್ರತಿನಿಧಿಸುವಂತ ಚಳವಳಿ ಇದಾದುದ್ದು ಗಮನಾರ್ಹ. ಕನ್ನಡ ಚಳವಳಿಯ ವಿಭಿನ್ನ ಘಟ್ಟಗಳನ್ನು ಪರಿಶೀಲಿಸಿದಾಗ ರಾಜಕಾರಣದ ಸ್ವಾರ್ಥದ ನಡುವೆ ಪ್ರಾಮಾಣಿಕವಾದ ಕನ್ನಡ ಪರ ಸಂಘಟನೆಗಳು ಕನ್ನಡದ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿರುವುದು ಕಂಡುಬರುತ್ತದೆ. ಗೋಕಾಕ್ ಚಳವಳಿಯಂಥ ಕೆಲವು ಚಳವಳಿಗಳು ಕೇಂದ್ರೀಕರಿಸಿದ ಪ್ರತಿಭಟನೆಗಳನ್ನು ಹೊರತು ಪಡಿಸಿದರೆ ಉಳಿದ ಬಹುಪಾಲು ಚಳವಳಿಗಳು ಆಯಾ ಸ್ಥಾನಿಕವಾದ ಪರಿಮಿತಿಗಳಲ್ಲಿಯೇ ಕೊನೆಗೊಂಡಿರುವುದೇ ಹೆಚ್ಚು. ಇದೇ ದೃಷ್ಟಿಕೋನದಿಂದ ನೋಡುವುದೇ

ಅನುಬಂಧ

ಪರಾಮರ್ಶನ ಗ್ರಂಥಗಳು

ಸಂದರ್ಶಿಸಿದ ವ್ಯಕ್ತಿಗಳು

ಛಾಯಾಚಿತ್ರಗಳು

ಪ್ರಾಥಮಿಕ ಆಕರಗಳು

ಪ್ರಾಥಮಿಕ ಆಧಾರಗಳು

೧. ಕನ್ನಡ ಸಾಹಿತ್ಯ ಪರಿಷತ್ತು., (೧೯೮೧) ಭಾಷಾ ಸಮಿತಿ ವರದಿ, (ಗೋಕಾಕ್ ವರದಿ) ಬೆಂಗಳೂರು

೨. ಚಿದಾನಂದ ಮೂರ್ತಿ., (೧೯೯೦) ಕನ್ನಡ ಕನ್ನಡಿಗ ಕರ್ನಾಟಕ, ಬೆಂಗಳೂರು; ಕನ್ನಡಶಕ್ತಿ ಕೇಂದ್ರ

೩. ಚಂದ್ರಶೇಖರ ರಾ. ನಂ., (೧೯೯೯) ಕನ್ನಡ ಚಳವಳಿ, ಸಾಹಿತಿ ಕಲಾವಿದರ ಬಳಗ, ಬೆಂಗಳೂರು; ಗೆಳೆಯರ ಬಳಗ

೪. ನಾರಾಯಣ ಪಿ.ವಿ., (೧೯೮೫) ಗೋಕಾಕ್ ವರದಿ ಅನುಷ್ಠಾನದ ಸ್ಥಿತಿ-ಗತಿಗಳು, ಧಾರಾವಾಡ; ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ

೫. ಪಾಟೀಲ ಪುಟ್ಟಪ್ಪ.,(೨೦೦೨) ಗೋಕಾಕ್‌ವರದಿ ಹೋರಾಟದ ಕಥೆ, ಧಾರಾವಾಡ; ಕನ್ನಡ ವಿದ್ಯಾವರ್ಧಕ ಸಂಘ

೬. ಪಾಟೀಲ ಪುಟ್ಟಪ್ಪ., (೧೯೯೨) ಉಸಿಪಾಗಲಿ ಕನ್ನಡ, ಮೈಸೂರು; ಕುವೆಂಪು ವಿದ್ಯಾವರ್ಧಕ ಸಂಘ

೭. ಪ್ರಹ್ಲಾದ್‌ರಾವ್ ಅ.ನಾ., (೨೦೦೫) ಬಂಗಾರದ ಮನುಷ್ಯ, ಬೆಂಗಳೂರು; ಸಿನಿಮಾಸಾಹಿತ್ಯ ಪ್ರಕಾಶನ

೮. ರಾಮಚಂದ್ರಪ್ಪ ಬರಗೂರು., (೨೦೦೫) ಸಂಸ್ಕೃತಿ ಶ್ರಮ ಮತ್ತು ಸೃಜನ ಶೀಲತೆ, ಬೆಂಗಳೂರು; ಅಂಕಿತಪ್ರಕಾಶನ

೯. ಲಕ್ಷ್ಮಣರಾವ್ ಕೆ., (ಸಂ) (೨೦೦೭) ಸಾಂಸ್ಕೃತಿಕ ಜೀವನದಿ ಡಾ.ರಾಜ್, ಭದ್ರಾವತಿ; ಸೂರ್ಯಪ್ರಕಾಶನ

೧೦. ಶೇಷಗಿರಿರಾವ್ ಎಸ್.ಎಲ್. (ಪ್ರ.ಸಂ.) ಸೂರ್ಯನಾಥಕಾಮಥ್ (ಸಂ) (೨೦೦೫) ಬೆಂಗಳೂರು ದರ್ಶನ, ಬೆಂಗಳೂರು; ಉದಯಭಾನು ಕಲಾ ಸಂಘ

೧೧. ಹುಚ್ಚಪ್ಪ., (೧೯೮೩) ಗೋಕಾಕ್‌ವರದಿ ಅನುಷ್ಠಾನಕ್ಕೆ ನಡೆದ ಕನ್ನಡ ಚಳವಳಿ, ಬೆಂಗಳೂರು; ದೇವಿಪ್ರಕಾಶನ

ಅನುಷಂಗಿಕ ಆಕರಗಳು

೧೨. ಅನಂತಮೂರ್ತಿ ಯು.ಆರ್. (೧೯೯೦) ಪೂರ್ವಾಪರ - ವಿಮರ್ಶಾತ್ಮಕ ಬರಹಗಳು, ಸಾಗರ; ಅಕ್ಷರ ಪ್ರಕಾಶನ

೧೩. ಅನಂತಮೂರ್ತಿ ಯು.ಆರ್. (೨೦೦೨) ಕನ್ನಡ ಕರ್ನಾಟಕ, ಬೆಂಗಳೂರು; ದಿವ್ಯ ಪ್ರಕಾಶನ

೧೪. ಅನಂತರಾಮರಾವ್ ಕೆ., (ಪ್ರ.ಸಂ.) (೨೦೦೬) ಕರ್ನಾಟಕ ಸುವರ್ಣದರ್ಶನ, ಮಂಗಳೂರು; ವಿದ್ಯಾಪಬ್ಲಿಶಿಂಗ್ ಹೌಸ್

೧೫. ಅಪ್ಪಾಸ್ವಾಮಿ. (೧೯೯೯) ಕನ್ನಡ ಮೆಚ್ಚಿನ ನಟ ಡಾ. ರಾಜ್‌ಕುಮಾರ್, ಮೈಸೂರು; ಸಾಯಿನಾಥ ಪ್ರಕಾಶನ

೧೬. ಕೃಷ್ಣಮೂರ್ತಿ ಹೆಚ್.ಎಸ್., (೨೦೦೧) ಕನ್ನಡದ ಸ್ಥಿತಿಗತಿ, ಮೈಸೂರು ; ಮಹಿಮ ಪ್ರಕಾಶನ

೧೭. ಗಣೇಶ್ ಕೋಡೂರು., (೨೦೦೬) ಅಣ್ಣಾ... ಅವಸರವೇನಿತ್ತು, ಬೆಂಗಳೂರು; ಆವಿ ಪುಸ್ತಕದ ಮನೆ.

೧೮. ಗಣಪತಿ. ಕೆ., (೨೦೦೬) (ಸಂ) ಕನ್ನಡದ ಮುತ್ತಿನ ಕಥೆ ಡಾ.ರಾಜ್‌ಕುಮಾರ್, ಬೆಂಗಳೂರು; ಸಿನಿಮಾ ಸಾಹಿತ್ಯ ಪ್ರಕಾಶನ

೧೯. ಗಂಗಾಧರ ಮೊದಲಿಯಾರ್., (೧೯೯೮) ಕನ್ನಡ ಸಿನಿಮಾ ಇತಿಹಾಸದ ಪುಟಗಳಲ್ಲಿ, ಬೆಂಗಳೂರು; ಪುಸ್ತಕ ಪ್ರಾಧಿಕಾರ

೨೦. ಗಿರೀಶ್‌ಕಾಸರವಳ್ಳಿ., (ಸಂ) (೧೯೮೩) ಸಿನಿಮಾ ಕಲೆ - ನೆಲೆ, ಬೆಂಗಳೂರು; ನವಕರ್ನಾಟಕ ಪಬ್ಲಿಕೇಶನ್

೨೧. ಗೀತಾಚಾರ್ಯ ನಾ., ಗೋಕಾಕ್ ಚಳವಳಿ ಮತ್ತು ಇತರೆ ಕನ್ನಡಪರ ಚಟುವಟಿಕೆಗಳು, ಕನ್ನಡನುಡಿಯ ಪಾತ್ರ, ಕನ್ನಡ ನುಡಿ ಸುವರ್ಣ ಮಹೋತ್ಸವ ಸಮಿತಿ ಸ.ರಾ.ಸಿ.ಕೆ.

೨೨. ಗುರುಮೂರ್ತಿ., (೨೦೦೨) ಕನ್ನಡ ರಂಗಭೂಮಿ ಮತ್ತು ಚಿತ್ರರಂಗಕ್ಕೆ ರಾಜ್‌ಕುಮಾರ್ ಕೊಡುಗೆ, ಪಿ.ಹೆಚ್.ಡಿ. ಮಹಾಪ್ರಬಂಧ (ಅಪ್ರಕಟಿತ) ಮೈಸೂರು ವಿಶ್ವವಿದ್ಯಾಲಯ

೨೩. ಗೋವಿಂದರಾಜು ಸಿ.ಆರ್. (೨೦೦೫) ಕರ್ನಾಟಕ ಏಕೀಕರಣ ಹಾಗೂ ನಾಮಕರಣ, ಬೆಂಗಳೂರು; ವಿಧಾನ ಸೌಧ ಸಚಿವಾಲಯ

೨೪. ಗೋವಿಂದರಾಜು ಸಿ.ಆರ್.,(೧೯೯೯) ಕನ್ನಡ ಚಳವಳಿಗಳು, ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೨೫. ಗೋವಿಂದರಾಜು ಸಿ.ಆರ್., (೨೦೦೬) ಗೋಕಾಕ್ ವರದಿ, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು

೨೬. ಗೋಪಾಲರಾವ್ ಹೆಚ್.ಎಸ್. (ಸಂ) (೧೯೯೬) ಕರ್ನಾಟಕ ಏಕೀಕರಣ ಇತಿಹಾಸ, ಬೆಂಗಳೂರು; ನವಕರ್ನಾಟಕ ಪ್ರಕಾಶನ

೨೭. ಗೋಪಾಲರಾವ್ ಹೆಚ್.ಎಸ್., (೧೯೯೩) ನಮ್ಮನಾಡು ಕರ್ನಾಟಕ, ಬೆಂಗಳೂರು ; ನವಕರ್ನಾಟಕ ಪ್ರಕಾಶನ

೨೮. ಗೌರಿಸುಂದರ್., (ಸಂ) (೨೦೦೬) ಕನ್ನಡ ಕಲಾಕಂಠೀರವ ಡಾ.ರಾಜಕುಮಾರ್, ಬೆಂಗಳೂರು; ಸುಂದರ ಪ್ರಕಾಶನ

೨೯. ಗೌರಿಸುಂದರ್., (ಸಂ) (೨೦೦೭) ನೆನಪಿನ ಅಂಗಳದಲ್ಲಿ ರಾಜ್, ಬೆಂಗಳೂರು; ಸುಂದರ ಪ್ರಕಾಶನ

೩೦. ಚಂದ್ರಶೇಖರ ಎಸ್., (೨೦೦೨) ಆಧುನಿಕ ಕರ್ನಾಟಕದ ಆಂದೋಲನಗಳು, ತಿಪಟೂರು; ನಮ್ಮ ಪ್ರಕಾಶನ.

೩೧. ಚಂದ್ರಶೇಖರ ರಾ.ನಂ., (೧೯೯೯) ಕನ್ನಡ ಹೋರಾಟಗಳು - ಒಂದು ನೋಟ, ಬೆಂಗಳೂರು; ಗೆಳೆಯರ ಬಳಗ

೩೨. ದೇ.ಜ.ಗೌ. (ಪ್ರ.ಸಂ.), ಕಮಲೇಶ್ ಕೆ. ಆರ್., (ಸಂ.) (೨೦೦೫) ಕರ್ನಾಟಕದ ರಾಜಕೀಯ ಚಿಂತನೆ (ರಾಮಕೃಷ್ಣಹೆಗಡೆ ಸಂಸ್ಮರಣ) ಬೆಂಗಳೂರು; ಎಸ್.ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ

೩೩. ದಿನೇಶ್‌ಕುಮಾರ್ ಎಸ್.ಸಿ., (೨೦೦೬) ಅವರು ತೀರಿಹೋದ ನಂತರದ ಕರಾಳ ದಿನಗಳು, ಬೆಂಗಳೂರು; ಸಾಧನ ಪ್ರಕಾಶನ

೩೪. ಮನೋಜ್ ಪಾಟೀಲ್., (೨೦೦೬) ಆರ್, ಗುಂಡುರಾವ್ ನೆನಪು, ಶ್ರೀಗಂಧ, ಧಾರಾವಾಡ; ಪವನ ಪುಸ್ತಕ ಪ್ರಕಾಶನ

೩೫. ನರಸಿಂಹಮೂರ್ತಿ ಜೆ., (೨೦೦೬) ಆದರ್ಶಪುರುಷ, ಬೆಂಗಳೂರು; ಗುರುಕುಲ ಪ್ರಕಾಶನ.

೩೬. ನಾಗೇಶ್ ಹೆಚ್. ವಿ., (೧೯೯೯) ಸಾಮಾಜಿಕ ಚಳವಳಿಗಳು, ಧಾರಾವಾಡ; ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ

೩೭. ನಾಗಭೂಷಣಗೌಡ ಪಾಟೀಲ., (೨೦೦೨) ಸಮಾಜವಾದಿ ಚಳವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಪಿಹೆಚ್. ಡಿ. ಅಪ್ರಕಟಿತ ಮಹಾಪ್ರಬಂಧ ಹಂಪಿ; ಕನ್ನಡ ವಿಶ್ವವಿದ್ಯಾಲಯ.

೩೮. ನಾಗಾರಾಜ್ ವಿ., (೨೦೦೬) ಡಾ.ರಾಜ್‌ಕುಮಾರ್, ಸಿನಿಮಾ - ಬದುಕು - ಸಾಧನೆ, ಬೆಂಗಳೂರು; ಸಿನಿಮಾ ಸಾಹಿತ್ಯ ಪ್ರಕಾಶನ

೩೯.ನಾಯಕ ಹಾ.ಮ. (ಸಂ.) (೧೯೯೦) ಕನ್ನಡ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು; ಮೈಸೂರು ವಿ.ವಿ.

೪೦. ನಾರಾಯಣ ಪಿ.ವಿ. (೧೯೮೫) ಗೋಕಾಕ್ ವರದಿ ಅನುಷ್ಠಾನದ ಸ್ಥಿತಿ ಗತಿಗಳು, ಧಾರಾವಾಡ; ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ.

೪೧. ಪರಮೇಶ್ವರ ಗುರುಸ್ವಾಮಿ., (೧೯೯೮) ಕನ್ನಡ ಚಿತ್ರರಂಗದ ಪ್ರಾರಂಭದ ಹೆಜ್ಜೆ ಗುರುತುಗಳು, ಬೆಂಗಳೂರು; ದಿವ್ಯಪ್ರಕಾಶನ

೪೨. ಪಾಟೀಲ ಪುಟ್ಟಪ್ಪ., (೨೦೦೨) ಗೋಕಾಕ್‌ವರದಿ ಹೋರಾಟದ ಕಥೆ, ಧಾರಾವಾಡ; ಕನ್ನಡ ವಿದ್ಯಾವರ್ಧಕ ಸಂಘ

೪೩. ಪಾಟೀಲ ಪುಟ್ಟಪ್ಪ., (೨೦೦೩) ನಮ್ಮ ಚೆಲುವ ಕನ್ನಡ ನಾಡು, ಬೆಂಗಳೂರು; ಸ್ವಪ್ನಬುಕ್ ಹೌಸ್

೪೪. ಪಾಟೀಲ ಪುಟ್ಟಪ್ಪ., (೧೯೯೧) ಕರ್ನಾಟಕ ಕಥೆ, ಬೆಂಗಳೂರು; ನವಕರ್ನಾಟಕ ಪ್ರಕಾಶನ.

೪೫. ಪಾಟೀಲ ಪುಟ್ಟಪ್ಪ., (೧೯೭೫) ನನ್ನದು ಈ ಕನ್ನಡನಾಡು, ಬೆಂಗಳೂರು; ಶ್ರೀದೇವಿ ಪ್ರಕಾಶನ

೪೬. ಪಾಟೀಲ ಪುಟ್ಟಪ್ಪ., (೨೦೦೩) ನಮ್ಮ ಚಲುವ ಕನ್ನಡನಾಡು, ಬೆಂಗೂರು; ಸ್ವಪ್ನಬುಕ್‌ಹೌಸ್

೪೭. ಪಾಟೀಲ ಪುಟ್ಟಪ್ಪ., (೧೯೯೨) ಉಸಿರಾಗಲಿ ಕನ್ನಡ, ಮೈಸೂರು; ಕುವೆಂಪು ವಿದ್ಯಾವರ್ಧಕ ಸಂಘ

೪೮. ಪಾಟೀಲ ಪುಟ್ಟಪ್ಪ., (೨೦೦೭) ನಾಡು ನುಡಿ, ಹಂಪಿ; ಕನ್ನಡ ವಿಶ್ವವಿದ್ಯಾಲಯ

೪೯. ಬಣಕಾರ ಬಿ.ಜಿ., (೨೦೦೬) ಕನ್ನಡ ಕರ್ನಾಟಕ ಚಿಂತನೆಗಳು, ಬೆಂಗಳೂರು; ಕನ್ನಡ ಸಾಹಿತ್ಯಪರಿಷತ್ತು

೫೦. ಮಹೇಶ್ವರ ಭಟ್ಟ ಟಿ., (ಸಂ) (೨೦೦೫) ರಂಗಧಾಮ, ಸುಬ್ಬಣ್ಣ ಅಭಿನಂದನ ಗ್ರಂಥ, ಬೆಂಗಳೂರು; ಸಪ್ನ ಬುಕ್‌ಹೌಸ್

೫೧. ಯತಿರಾಜ್ ಕೆ., (೨೦೦೬) ಅಭಿಮಾನಿಗಳ ದೇವರು, ಬೆಂಗಳೂರು; ಪೃಥ್ವಿಪ್ರಾಕಶನ

೫೨. ರಾಮಚಂದ್ರಪ್ಪ ಬರಗೂರು., (೨೦೦೫) ಶಬ್ದವಿಲ್ಲದ ಯುದ್ಧ, ಬೆಂಗಳೂರು; ಅಂಕಿತಪ್ರಕಾಶನ

೫೩. ರಮೇಶ್ ಬೆ.ಗೊ., (೨೦೦೬) ಭಾರತದ ರತ್ನ ಡಾ.ರಾಜಕುಮಾರ್, ಬೆಂಗಳೂರು; ದಿವ್ಯಚಂದ್ರಪ್ರಕಾಶನ
೫೪. ರಾಮಚಂದ್ರಪ್ಪ ಬರಗೂರು., (೨೦೦೭) ಕನ್ನಡ ಪ್ರಜ್ಞೆ, ಹಂಪಿ; ಕನ್ನಡ ವಿಶ್ವವಿದ್ಯಾಲಯ.
೫೫. ರಾಮಚಂದ್ರಪ್ಪ ಬರಗೂರು., (೨೦೦೫) ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ಬೆಂಗಳೂರು; ಅಂಕಿತಪ್ರಕಾಶನ
೫೬. ರಾಮಚಂದ್ರಪ್ಪ ಬರಗೂರು., (೧೯೯೮) ಸಾಹಿತ್ಯ ಮತ್ತು ರಾಜಕಾರಣ, ಬೆಂಗಳೂರು; ಪುಸ್ತಕ ಪ್ರಾಧಿಕಾರ
೫೭. ರಾಮಣ್ಣ ಕೋಡಿ ಹೊಸಹಳ್ಳಿ., (ಸಂ) (೧೯೯೪) ಕನ್ನಡದ ಕಂದ ರಹಮಾನ್ ಖಾನ್, ಬೆಂಗಳೂರು; ಕನ್ನಡ ಸಂಘರ್ಷ ಸಮಿತಿ.
೫೮. ರಾಮಚಂದ್ರಗೌಡ., (೨೦೦೦) ಕರ್ನಾಟಕ - ಕನ್ನಡ ವಿಶ್ವವಿದ್ಯಾಲಯ, ಹಂಪಿ; ಕನ್ನಡ ವಿಶ್ವವಿದ್ಯಾಲಯ
೫೯. ಲಕ್ಷ್ಮೀನಾರಾಯಣ ನಾಗಾವಾರ., (ಸಂ) (೨೦೦೦) ಬಸವಲಿಂಗಪ್ಪ ಮತ್ತು ಬೂಸಾ ಚಳವಳಿ ಕಾಲುಶತಮಾನ, ಬೆಂಗಳೂರು; ದಲಿತ ಸಂಘರ್ಷ ಸಮಿತಿ
೬೦. ಲಂಕೇಶ್ ಪಿ., (೧೯೯೧) ಟೀಕೆ ಟಿಪ್ಪಣಿಗಳು, ೧ ಮತ್ತು ೨, ಬೆಂಗಳೂರು; ಪತ್ರಿಕೆ ಪ್ರಾಕಾಶನ
೬೧. ವೆಂಕಟರಾಮಯ್ಯ ಜಾಣಗೆರೆ, (೨೦೦೫) ಪತ್ರಿಕೋದ್ಯಮ ಮತ್ತು ಚಳವಳಿ, ಬೆಂಗಳೂರು; ಪ್ರೆಸ್‌ಕ್ಲಬ್
೬೨. ಶಿವರುದ್ರಪ್ಪ ಜಿ.ಎಸ್., (ಸಂ) (೧೯೮೦) ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಬೆಂಗಳೂರು; ಸಾಹಿತ್ಯ ಅಕಾಡೆಮಿ
೬೩. ಶಾಮಸುಂದರ ಕುಲಕರ್ಣಿ., (೧೯೯೮) ರಾಜ್‌ಕುಮಾರ್, ಬೆಂಗಳೂರು; ಮೋಹನ್ ಅಸೋಸಿಯೇಟ್.
೬೪. ಶೇಷಗಿರಿರಾವ್ ಎಸ್.ಎಲ್. (ಸಂ) (೧೯೯೩) ಕನ್ನಡ ತಾಯಿಗೆ ನುಡಿನಮನ, ಹಂಪಿ; ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ
೬೫. ಶ್ರೀನಿವಾಸಮೂರ್ತಿ ಕಾ.ವೆಂ., (೨೦೦೬) ಕನ್ನಡ ಚಳವಳಿ ಮತ್ತು ಚಿಂತನೆ, ಬೆಂಗಳೂರು; ಸ್ವಪ್ನಬುಕ್‌ಹೌಸ್
೬೬. ಶ್ರೀನಿವಾಸ ಕುಲಕರ್ಣಿ (ಸಂ) (೨೦೦೩) ಹೋರಾಟ, ಬೆಳಗಾವಿ; ರಾಘುವೇಂದ್ರ ಶಷ್ಠ್ಯಾಬ್ಧಿ ಮಹೋತ್ಸವ ಸಮಿತಿ
೬೭. ಶರ್ಮ ಎ.ಆರ್., (೨೦೦೭) ಸಾಮಾಜಿಕ ಚಳವಳಿಗಳು ಮತ್ತು ಬದಲಾವಣೆ, ಮೈಸೂರು; ಸೃಷ್ಟಿ ಪ್ರಕಾಶನ
೬೮. ಸುದರ್ಶನ ಸ. ರ., (೨೦೦೬) ಶಿಕ್ಷಣ ಮಾಧ್ಯಮ ಕನ್ನಡಪರ ಆಂದೋಲನ ಮತ್ತು ವರದಿಗಳು, ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು
೬೯.ಸೂರ್ಯನಾಥಕಾಮತ್ (೧೯೮೨) ಕರ್ನಾಟಕ ಜಾಗೃತಿ, ಬೆಂಗಳೂರು; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
೭೦.ಹುಚ್ಚಪ್ಪ., (೧೯೮೩) ಗೋಕಾಕ್‌ವರದಿ ಅನುಷ್ಠಾನಕ್ಕೆ ನಡೆದ ಕನ್ನಡ ಚಳವಳಿ, ಬೆಂಗಳೂರು; ದೇವಿಪ್ರಕಾಶನ

ಪತ್ರಿಕೆಗಳು

ಕನ್ನಡ ಪ್ರಭ
ಪ್ರಜಾವಾಣಿ
ಜನವಾಣಿ
ಲಂಕೇಶ್.
ಸಂಯುಕ್ತಕರ್ನಾಟಕ
ಸಂಕ್ರಮಣ (ಮಾಸಿಕ)
ಕನ್ನಡ ಕಣ್ಮಣಿ (ಮಾಸಿಕ)

ಸಂದರ್ಶಿಸಿದ ವ್ಯಕ್ತಿಗಳು

ಪಾಟೀಲ ಪುಟ್ಟಪ್ಪ
ಅನಂತ್‌ನಾಗ್, ಚಿತ್ರನಟರು
ಭಗವಾನ್, ನಿರ್ದೇಶಕರು
ಅಶೋಕ್ ಚಿತ್ರನಟರು
ಗಿರಿಜಾ ಲೋಕೇಶ್ ಚಿತ್ರನಟರು
ಜೈಜಗದೀಶ್ ಚಿತ್ರಟರು
ಗೋವಿಂದನ ಹಳ್ಳಿ ದೇವೆಗೌಡ
ಸಾ.ರಾ.ಗೋವಿಂದು ನಿರ್ಮಾಪಕರು


*ನನ್ನ ಅಧ್ಯಯನ ಸಮಯದಲ್ಲಿ ಸಮಾನ ಮನಸ್ಕರಾಗಿ, ಸಕಲರೀತಿಯಿಂದಲೂ ಬರವಣಿಗೆಯ ಕಾರ್ಯದಲ್ಲಿ



ಗೋಕಾಕ ವರದಿ ಜಾರಿಗಾಗಿ ಒತ್ತಾಯಿಸಿ ರಾಜಕುಮಾರ್ ಅವರು ಮೈಸೂರು ಬ್ಯಾಂಕ್ ವೃತ್ತದಿಂದ ಕಬ್ಬನ್ ಪಾರ್ಕ್‌ವರೆಗೆ ಕೈಗೊಂಡ ಪಾದಯಾತ್ರೆ



ಬಳ್ಳಾರಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕನ್ನಡ ಕ್ರಿಯಾ ಸಮಿತಿ ಮತ್ತು ಸಹ ನಟರೊಂದಿಗೆ ರಾಜಕುಮಾರ ದಂಪತಿಗಳು



ತುಮಕೂರಿನ ಸರ್ಕಾರಿ ಕಾಲೇಜು ಮೈದಾನದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ
ಮಾತನಾಡುತ್ತಿರುವ ಡಾ. ರಾಜಕುಮಾರ್ ಅವರು



ಗಂಡು ಮೆಟ್ಟಿನ ನಾಡು ಧಾರವಾಡದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ
ಮಾತನಾಡುತ್ತಿರುವ ಡಾ. ರಾಜಕುಮಾರ್ ಅವರು



[illegible]



[illegible]



ಭದ್ರಾವತಿಯಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ
ಡಾ. ರಾಜಕುಮಾರ್ ಅವರು



ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಸಹನಟರಾದ
ದಿ. ಲೋಕೇಶ್ ಮತ್ತು ಅಶೋಕ್‌ರವರೊಂದಿಗೆ ಡಾ. ರಾಜಕುಮಾರ್




ದಾವಣಗೆರೆಯಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಡಾ. ರಾಜಕುಮಾರ್ ಅವರು




ದೊಡ್ಡಬಳ್ಳಾಪುರದ ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ ಅಪಾರ ಜನಸ್ತೋಮವನ್ನು ಉದ್ದೇಶಿಸಿ
ಮಾತನಾಡುತ್ತಿರುವ ಡಾ. ರಾಜಕುಮಾರ್ ಅವರು





ಗೋಕಾಕ್ ಚಳವಳಿಯ ಸಂದರ್ಭದ ಮೆರವಣಿಗೆಯೊಂದರಲ್ಲಿ ಡಾ. ರಾಜಕುಮಾರ್ ಅವರು




ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನಕ್ಕೆ ಆಗಮಿಸಿದ ಸಂದರ್ಭದಲ್ಲಿ ಸಹನಟರೊಂದಿಗೆ
ಡಾ. ರಾಜಕುಮಾರ್ ಅವರು







ಗೋಕಾಕ್ ಚಳವಳಿಗೆ ಶಕ್ತಿ ತುಂಬಿದ ರಾಜ್





ಕುವೆಂಪು ಅವರೊಂದಿಗೆ ಡಾ. ರಾಜಕುಮಾರ್ ಅವರು



ರಜನಿಕಾಂತ್‌ರವರೊಂದಿಗೆ ಡಾ. ರಾಜಕುಮಾರ್ ಅವರು